


# ಏಷ್ಯಾದ ಮೊದಲ ವಾರ್ತಾ ಪತ್ರಿಕೆ ಆರಂಭ




1780ರಲ್ಲಿ ಜೇಮ್ಸ್ ಅಗಸ್ಟಸ್ ಹಿಕಿ ಅವರು ಏಷ್ಯಾದ ಮೊದಲ ವಾರ್ತಾ ಪತ್ರಿಕೆಯಾದ ಬೆಂಗಾಲ್ ಗೆಜೆಟ್ ಅನ್ನು ಕೋಲ್ಕತ್ತಾದಲ್ಲಿ ಆರಂಭಿಸಿದರು. ಇದು 1780 ಮತ್ತು 1782ರ ನಡುವೆ ಎರಡು ವರ್ಷಗಳವರೆಗೆ ಪ್ರಕಟವಾಯಿತು ಹಾಗೂ ಈಸ್ಟ್ ಇಂಡಿಯಾ ಕಂಪನಿಯು ಪತ್ರಿಕೆಯ ಮುದ್ರಣ ಯಂತ್ರವನ್ನು ವಶಪಡಿಸಿಕೊಳ್ಳುವುದರ ಮೂಲಕ ಅಂತ್ಯಗೊಂಡಿತು.



ಕಾರಿನ ಸಂಶೋಧಕರಾದ ಕಾರ್ಲ್ ಬೆಂಝ್ ಅವರು ತಮ್ಮ 'ಅನಿಲ ಇಂಜಿನ್‌ನಿಂದ ತಯಾರಾದ ಚಾಲಿತ ವಾಹನ'ದ ಪೇಟೆಂಟ್‌ಗಾಗಿ ಅರ್ಜಿ ಸಲ್ಲಿಸಿ 1886ರಲ್ಲಿ ಪೇಟೆಂಟ್ – ಸಂಖ್ಯೆ 37435 ಪಡೆಯುವುದರ ಮೂಲಕ ಆಟೋಮೊಬೈಲ್ ವಾಹನದ ಮೊದಲ ಪೇಟೆಂಟ್ ಪಡೆದರು.



ಮೊಘಲ್ ಸಾಮ್ರಾಜ್ಯದ ಸಂಸ್ಥಾಪಕ ಬಾಬರ್ 1528ರಲ್ಲಿ ಮಾಳ್ವ ದೊರೆ ಮೇದಿನಿ ರೈಯನ್ನು ಸೋಲಿಸುವ ಮೂಲಕ ಚಂದೇರಿ ಕೋಟೆಯನ್ನು ವಶಪಡಿಸಿಕೊಂಡನು.




ಸಂಗೀತ ನಾಟಕ ಅಕಾಡೆಮಿಯನ್ನು 1953ರಲ್ಲಿ ಭಾರತದ ಮೊದಲ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಅವರು ಅಧಿಕೃತವಾಗಿ ಉದ್ಘಾಟಿಸಿದರು. ಪಿವಿ ರಾಜಮನ್ನಾರ್ ಅವರನ್ನು ಇದರ ಮೊದಲ ಅಧ್ಯಕ್ಷರಾಗಿ ನೇಮಿಸಲಾಯಿತು.

Scanned with OKEN Scanner

ಜ.29

ವಿಕ ಈ ದಿನ ವಿಶೇಷ



# ಭಾರತೀಯ ಪತ್ರಿಕಾ ದಿನ

ದೇಶದ ಮೊದಲ ಪತ್ರಿಕೆ ಆಂಗ್ಲ ಭಾಷೆಯ 'ಬೆಂಗಾಲ್ ಗೆಜೆಟ್' 1780ರ ಜ.29ರಂದು ಮುದ್ರಣಗೊಂಡಿತು. ಇದರ ಸ್ಮರಣಾರ್ಥ ಪ್ರತಿ ವರ್ಷ ಜ.29ರಂದು 'ಭಾರತೀಯ ಪತ್ರಿಕಾ ದಿನ'ವನ್ನಾಗಿ ಆಚರಿಸಲಾಗುತ್ತದೆ. ಐರ್ಲೆಂಡ್‌ನ ಜೇಮ್ಸ್ ಆಗಸ್ಟಸ್ ಹಿಕ್ಕಿ 'ಬೆಂಗಾಲ್ ಗೆಜೆಟ್' ಪತ್ರಿಕೆಯ ಸ್ಥಾಪಕ. ಆತನನ್ನು 'ಭಾರತದ ಪತ್ರಿಕೋದ್ಯಮ ಪಿತಾಮಹ' ಎಂದೂ ಕರೆಯಲಾಗುತ್ತದೆ. ಪತ್ರಿಕೆಗಳನ್ನು ಓದಲು ಜನರನ್ನು ಪ್ರೋತ್ಸಾಹಿಸುವುದು ಮತ್ತು ಸಾಹಿತ್ಯದ ಅಭಿರುಚಿ ಬಿತ್ತುವುದು 'ಭಾರತೀಯ ಪತ್ರಿಕಾ ದಿನ'ದ ಉದ್ದೇಶವಾಗಿದೆ.

## ಜನುಮ ದಿನ

## ಗೌರಿ ಲಂಕೇಶ್

- ಪತ್ರಕರ್ತೆ ಗೌರಿ ಲಂಕೇಶ್ ಅವರು 1962ರ ಜ.29ರಂದು ಜನಿಸಿದರು. ಇವರು ಹಿರಿಯ ಪತ್ರಕರ್ತ ಪಿ. ಲಂಕೇಶ್ ಅವರ ಮಗಳು. ಲಂಕೇಶ್ ಪತ್ರಿಕೆಯಲ್ಲಿ ಕಾರ್ಯ ನಿರ್ವಹಿಸಿದ ನಂತರ ಇವರು ತಮ್ಮದೇ ಗೌರಿ ಲಂಕೇಶ್ ವಾರ ಪತ್ರಿಕೆ ಸ್ಥಾಪಿಸಿ ಸಂಪಾದಕರಾಗಿದ್ದರು. ಜಾತಿಯಾಧರಿತ ತಾರತಮ್ಯದ ವಿರುದ್ಧ ಧ್ವನಿ ಎತ್ತಿದ್ದರು. 2017ರ ಸೆ. 5ರಂದು ಇವರ ಮನೆಯ ಮುಂದೆಯೇ ದುಷ್ಕರ್ಮಿಗಳು ಗುಂಡು ಹಾರಿಸಿ ಕೊಂದರು.



**18. 'Kyoto protocol' is related to**

A) Ozone depletion
B) Hazardous waste
**C) Climate change**
D) Nuclear energy

**'ಕ್ಯೋಟೋ ಶಿಷ್ಟಾಚಾರ ಸಂಹಿತೆ' ಇದಕ್ಕೆ ಸಂಬಂಧಿಸಿದೆ**

ಎ) ಓಝೋನ್ ಸವಕಳಿ
ಬಿ) ಅಪಾಯಕಾರಿ ತ್ಯಾಜ್ಯ
**ಸಿ) ಹವಾಮಾನ ಬದಲಾವಣೆ**
ಡಿ) ನ್ಯೂಕ್ಲಿಯರ್ (ಪರಮಾಣು) ಶಕ್ತಿ

**19. The first 'Virtual University' of India came up in**

A) Kerala
B) Andhra Pradesh
C) Karnataka
**D) Tamil Nadu**

**ಭಾರತದ ಪ್ರಥಮ ಕಾರ್ಯತಃ ವಿಶ್ವವಿದ್ಯಾಲಯ ಅಥವಾ ವಾಸ್ತವ ವಿಶ್ವವಿದ್ಯಾಲಯ ಕಾರ್ಯಾಚರಣೆಗೊಂಡ ರಾಜ್ಯ**

ಎ) ಕೇರಳ
ಬಿ) ಆಂಧ್ರಪ್ರದೇಶ
ಸಿ) ಕರ್ನಾಟಕ
**ಡಿ) ತಮಿಳುನಾಡು**


**20. Who inaugurated the 103rd Indian Science Congress at Mysore?**

A) Pranab Mukharjee
B) Hamid Ansari
**C) Narendra Modi**
D) Mrs. Smriti Irani

**ಮೈಸೂರಿನಲ್ಲಿ 103ನೆಯ ಭಾರತೀಯ ವಿಜ್ಞಾನ ಕಾಂಗ್ರೆಸ್ ಅನ್ನು ಉದ್ಘಾಟಿಸಿದವರು ಯಾರು?**

ಎ) ಪ್ರಣಬ್ ಮುಖರ್ಜಿ
ಬಿ) ಹಮೀದ್ ಅನ್ಸಾರಿ
**ಸಿ) ನರೇಂದ್ರ ಮೋದಿ**
ಡಿ) ಸ್ಮೃತಿ ಇರಾನಿ

**Answer Questions from 21 to 25 based on the following data and with the help of the given figure.**




A = 30, represents total number of students in class studying Physics.
B = ?, represents total number of students studying Chemistry.
C = 40, represents total number of students studying Mathematics.
12 Students are studying Physics and Chemistry but not Mathematics.
16 Students are studying Chemistry and Mathematics but not Physics.
4 Students are studying Physics, Chemistry and Mathematics.

ಮುಂದುವರಿಯುತ್ತದೆ...

Scanned with OKEN Scanner

# PSI/CAR/Civil Police Constable

**22) ಯಾವ ಪುಸ್ತಕವನ್ನು ಗುಪ್ತರ ಕಾಲದಲ್ಲಿ ವಿಶಾಖದತ್ತ ಬರೆದರು? ಅದು ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳ ಮೇಲೆ ಬೆಳಕು ಚೆಲ್ಲುವುದರ ಜೊತೆಗೆ ಚಂದ್ರಗುಪ್ತ ಮೌರ್ಯನು ಚಾಣಕ್ಯನ ಸಹಾಯದಿಂದ ನಂದರನ್ನು ಹೇಗೆ ಸೋಲಿಸಿದನೆಂದು ವಿವರಿಸುತ್ತದೆ?**

ಎ) ಕೌಟಿಲ್ಯನ ಅರ್ಥಶಾಸ್ತ್ರ

ಬಿ) ಮುದ್ರಾ ರಾಕ್ಷಸ

ಸಿ) ಇಂಡಿಕಾ

ಡಿ) ಬೌದ್ಧ ಸಾಹಿತ್ಯ

**23) ಹೊಂದಿಸಿ ಬರೆಯಿರಿ.**

| ಮೂಲ | ರೂಪಾಂತರ ಶಿಲೆ |
|---|---|
| p) ಬಸಾಲ್ಟ್ | 1. ಸ್ಲೇಟ್ |
| q) ಕಲ್ಲಿದ್ದಲು | 2. ಶಿಸ್ಟ್ |
| r) ಸುಣ್ಣದ ಕಲ್ಲು | 3. ಅಮೃತ ಶಿಲೆ |
| s) ಶೇಲ್ | 4. ವಜ್ರ |

ಎ) 1 2 3 4

ಬಿ) 3 4 2 1

ಸಿ) 4 3 2 1

ಡಿ) 2 4 3 1

**24) ಈ ಕೆಳಗಿನವುಗಳಲ್ಲಿ ಯಾವುದು ತಪ್ಪಾಗಿ ಹೊಂದಾಣಿಕೆಯಾಗಿದೆ?**

| ಸಾಮಾನ್ಯ ಹೆಸರು | ರಾಸಾಯನಿಕ ಹೆಸರು |
|---|---|
| ಎ) ಜಿಪ್ಸಮ್ | ಸೋಡಿಯಂ ಹೈಡ್ರಾಕ್ಸೈಡ್ |
| ಬಿ) ಬ್ಲೀಚಿಂಗ್ ಪೌಡರ್ | ಕ್ಯಾಲ್ಸಿಯಂ ಹೈಪೋಕ್ಲೋರೈಟ್ |
| ಸಿ) ಬ್ಯಾಟರಿ ಆಸಿಡ್ | ಸಲ್ಫ್ಯೂರಿಕ್ ಆಮ್ಲ |
| ಡಿ) ಗ್ರೀನ್ ವಿಟ್ರಿಯಾಲ್ | ಫೆರಸ್ ಸಲ್ಫೇಟ್ |

**25) ಈ ಕೆಳಗಿನ ಯಾವ ಹೇಳಿಕೆ/ ಗಳು ಸರಕು ಮತ್ತು ಸೇವಾ ತೆರಿಗೆ ಮಂಡಳಿಯ ಬಗ್ಗೆ ಸರಿಯಾಗಿದೆ?**

1) ಸರಕು ಮತ್ತು ಸೇವಾ ತೆರಿಗೆಗೆ ಸಂಬಂಧಿಸಿದ ವಿಷಯಗಳ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಶಿಫಾರಸ್ಸುಗಳನ್ನು ಮಾಡಲು ಇದೊಂದು ಸಂವಿಧಾನಕ ಸಂಸ್ಥೆಯಾಗಿದೆ (279 ಎ ವಿಧಿ)

2) ಆರ್‌ಬಿಐ ಗವರ್ನರ್, ಜಿಎಸ್‌ಟಿ ಕೌನ್ಸಿಲ್‌ನ ಅಧ್ಯಕ್ಷರಾಗಿರುತ್ತಾರೆ ಮತ್ತು ಇತರ ಸದಸ್ಯರಾಗಿ ಕೇಂದ್ರ ರಾಜ್ಯ ಕಂದಾಯ ಅಥವಾ ಹಣಕಾಸು ಮತ್ತು ಎಲ್ಲಾ ರಾಜ್ಯಗಳ ಹಣಕಾಸು ಅಥವಾ ತೆರಿಗೆಯ ಉಸ್ತುವಾರಿ ಸಚಿವರಾಗಿರುತ್ತಾರೆ.

3) ಜಿಎಸ್‌ಟಿ ಮಂಡಳಿಯ ಸಭೆಯ ಕೋರಂ ಜಿಎಸ್‌ಟಿ ಮಂಡಳಿಯ ಒಟ್ಟು ಸದಸ್ಯರ ಸಂಖ್ಯೆಯಲ್ಲಿ 1/2ರಷ್ಟು ಆಗಿರುತ್ತದೆ.

ಎ) 1 ಮತ್ತು 2 ಮಾತ್ರ

ಬಿ) 2 ಮತ್ತು 3 ಮಾತ್ರ

ಸಿ) 1 ಮತ್ತು 3 ಮಾತ್ರ

ಡಿ) 1, 2 ಮತ್ತು 3 ಮಾತ್ರ

ಮುಂದುವರಿಯುತ್ತದೆ...

**Answers** 22–ಬಿ, 23–ಡಿ, 24–ಎ, 25–ಸಿ.

Scanned with OKEN Scanner

**42. ಈ ಕೆಳಕಂಡವುಗಳಲ್ಲಿ ಯಾವುದನ್ನು ವಾಹನಗಳ 'ಲೆಡ್ ಆಸಿಡ್' ಬ್ಯಾಟರಿಗಳಲ್ಲಿ ಬಳಸುತ್ತಾರೆ?**

ಎ) ಗಂಧಕಾಮ್ಲ ಬಿ) ನೈಟ್ರಿಕ್ ಆಮ್ಲ ಸಿ) ಹೈಡ್ರೋಕ್ಲೋರಿಕ್ ಆಮ್ಲ ಡಿ) ಮೇಲಿನ ಯಾವುದೂ ಅಲ್ಲ

**43. ಕ್ಲೋರಿನೇಷನ್ ಎಂದರೆ ______?**

ಎ) ಕ್ಲೋರೈಡ್‌ಗಳನ್ನು ಕ್ಲೋರಿನ್ ಆಗಿ ಬದಲಾಯಿಸುವಿಕೆ ಬಿ) ಅಶುದ್ಧ ನೀರಿಗೆ ಅಲ್ಪ ಪ್ರಮಾಣದಲ್ಲಿ ಕ್ಲೋರಿನ್ ಅನ್ನು ಬೆರೆಸುವಿಕೆ
ಸಿ) ರಾಸಾಯನಿಕ ಕ್ರಿಯೆಗಳಲ್ಲಿ ಕ್ಲೋರಿನ್ ಉಂಟಾಗುವಿಕೆ ಡಿ) ಲವಣವನ್ನು ಏರ್ಪಡಿಸುವಾಗ ಕ್ಲೋರಿನ್ ಅನ್ನು ಹೊಂದಿರುವಿಕೆ

**44. ಮನೆಗಳಲ್ಲಿ ವಿದ್ಯುತ್ ತಂತಿಗಳ ಮೇಲೆ ಉಪಯೋಗಿಸುವ ಕೇಸಿಂಗ್‌ಗಳಿಗೆ ಬಳಸುವ ಪಿ.ವಿ.ಸಿ ಎಂದರೆ ______?**

ಎ) ಪಾಲಿವೆನಿಡಿಯಂ ಕ್ಲೋರೈಡ್ ಬಿ) ಪಾಲಿವಿನೈಲ್ ಕ್ಲೋರೈಡ್ ಸಿ) ಫಾಸ್ಫೋವಿನೈಲ್ ಕ್ಲೋರೈಡ್ ಡಿ) ಮೇಲಿನ ಯಾವುದೂ ಅಲ್ಲ

**45. pH ಮಾಪನದ ಪ್ರಾಮುಖ್ಯತೆಗಳು ಯಾವುದು?**

ಎ) ಮಾನವನ ರಕ್ತದ pH ಮೌಲ್ಯವು 7.36 ರಿಂದ 7.42ರ ವ್ಯಾಪ್ತಿಯಲ್ಲಿರುತ್ತದೆ
ಬಿ) ಸಸ್ಯಗಳು ಮತ್ತು ಪ್ರಾಣಿಗಳ ದೇಹದ pH ಮೌಲ್ಯವು 7.0 ರಿಂದ 7.8 ರ ವ್ಯಾಪ್ತಿಯಲ್ಲಿದ್ದರೆ ಮಾತ್ರ ಬದುಕುಳಿಯಬಲ್ಲದು
ಸಿ) ಕೃಷಿಯಲ್ಲಿ ಮಣ್ಣಿನ pH ಮೌಲ್ಯದ ಪ್ರಮುಖ ಪಾತ್ರವಹಿಸುತ್ತದೆ ಡಿ) ಮೇಲಿನ ಎಲ್ಲವೂ

**46. ಕರ್ಪೂರೀಕರಣ ಅಥವಾ ಉತ್ಪನನ ಎಂದರೆ ______?**

ಎ) ಹಗುರ ಹಾಗೂ ಭಾರವಾದ ವಸ್ತುಗಳನ್ನು ಒಳಗೊಂಡಿರುವ ಮಿಶ್ರಣವನ್ನು ಬೇರ್ಪಡಿಸುವ ವಿಧಾನ
ಬಿ) ಕೆಲವು ವಸ್ತುಗಳು ಶಾಖದಿಂದಾಗಿ ಘನ ಸ್ಥಿತಿಯಿಂದ ನೇರವಾಗಿ ಅನಿಲರೂಪಕ್ಕೆ ಬದಲಾಗುತ್ತದೆ. ನಂತರ ಅನಿಲ ಸ್ಥಿತಿಯಿಂದ ಘನರೂಪಕ್ಕೆ ಬರುತ್ತವೆ.
ಸಿ) ದ್ರಾವಣದಲ್ಲಿ ಕರಗಿರುವ ವಸ್ತುಗಳನ್ನು ಬೇರ್ಪಡಿಸುವ ಸರಳ ವಿಧಾನವಾಗಿದೆ. ಡಿ) ಮೇಲಿನ ಯಾವುದೂ ಅಲ್ಲ

**47. ಈ ಕೆಳಕಂಡ ಯಾವುದನ್ನು ಕರಗಿಸಲು ದ್ರವರಾಜವನ್ನಾಗಿ ಬಳಸುತ್ತಾರೆ?**

ಎ) ಬೆಳ್ಳಿ ಬಿ) ಪ್ಲಾಟಿನಂ ಸಿ) ಚಿನ್ನ ಡಿ) ತಾಮ್ರ

**48. ಲೋಹೋದ್ಧರಣೆಗೆ ಸಂಬಂಧಿಸಿದಂತೆ ಈ ಕೆಳಕಂಡವುಗಳಲ್ಲಿ ಯಾವುದು ಸರಿಯಾಗಿದೆ?**

ಎ) ಬಹುತೇಕ ಲೋಹಗಳು ಶುದ್ಧ ರೂಪದಲ್ಲಿ ದೊರೆಯುವುದಿಲ್ಲ ಬಿ) ಲೋಹಗಳು ಅದಿರಿನ ರೂಪದಲ್ಲಿ ದೊರೆಯುತ್ತವೆ
ಸಿ) ಅದಿರನ್ನು ಉದ್ಧರಿಸಿ ಅವುಗಳನ್ನು ಶುದ್ಧೀಕರಿಸಿ ಲೋಹ ಪಡೆಯುವ ತಂತ್ರಜ್ಞಾನವೇ 'ಲೋಹೋದ್ಧರಣ'
ಡಿ) ಮೇಲಿನ ಎಲ್ಲವೂ ಸರಿ

**49. ಲೋಹಗಳ ಮೇಲೆ ಗಾಳಿಯ ವರ್ತನೆ ಹೇಗೆ ಉಂಟಾಗುತ್ತದೆ.?**

1) ಕಬ್ಬಿಣದ ತೇವಯುಕ್ತ ಗಾಳಿಯಲ್ಲಿನ ಆಮ್ಲಜನಕದೊಂದಿಗೆ ವರ್ತಿಸಿ ಕಂದು ಬಣ್ಣದ ಕಬ್ಬಿಣದ ಆಕ್ಸೈಡ್ ಉಂಟಾಗುತ್ತದೆ ಅದುವೇ ತುಕ್ಕು
2) ಸೋಡಿಯಂ ಮತ್ತು ಪೊಟಾಶಿಯಂ ನಂತಹ ಲೋಹಗಳು ಗಾಳಿಯಲ್ಲಿರುವ ಆಮ್ಲಜನಕದೊಡನೆ ವರ್ತಿಸಿ ಆಕ್ಸೈಡ್‌ಗಳಾಗುವುದರಿಂದ ಸೋಡಿಯಂ ಮತ್ತು ಪೊಟಾಶಿಯಂ ಅನ್ನು ಸೀಮೆಎಣ್ಣೆಯಲ್ಲಿ ಸಂಗ್ರಹಿಸಿಡುತ್ತಾರೆ.
ಎ) 1 ಮಾತ್ರ ಸರಿ ಬಿ) 2 ಮಾತ್ರ ಸರಿ ಸಿ) 1 ಮತ್ತು 2 ಸರಿ ಡಿ) 1 ಮತ್ತು ಎರಡು ತಪ್ಪು

**50. ಈ ಕೆಳಕಂಡವುಗಳಲ್ಲಿ ಯಾವುದು ಮ್ಯಾಂಗನೀಸ್‌ನ ಅದಿರಾಗಿದೆ?**

ಎ) ಹಾಸ್ಮನೈಟ್ ಬಿ) ಬ್ರಾನೈಟ್ ಸಿ) ಪೈರೋಲುಸೈಟ್ ಡಿ) ಮೇಲಿನ ಎಲ್ಲವೂ

**ಮುಂದುವರಿಯುತ್ತದೆ...**

**ಉತ್ತರಗಳು: 42–ಎ, 43.– ಬಿ, 44– ಬಿ, 45– ಡಿ, 46– ಬಿ, 47– ಸಿ, 48–ಡಿ, 49– ಸಿ, 50– ಡಿ.**

Scanned with OKEN Scanner

**43. ಚಿಪ್ಸ್ ಟು ಸ್ಟಾರ್ಟ್-ಅಪ್ (C2S) ಕಾರ್ಯಕ್ರಮವನ್ನು ಯಾವ ಸಚಿವಾಲಯ ಪ್ರಾರಂಭಿಸಿತು?**

[ಎ] ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ
[ಬಿ] ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯ
[ಸಿ] ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ
[ಡಿ] ಹಣಕಾಸು ಸಚಿವಾಲಯ

**44. ಭಾರತೀಯ ಕರಾವಳಿ ರಕ್ಷಣಾ ಹಡಗು ಸಂಕಲ್ಪವನ್ನು ಯಾವ ಹಡಗುಕಟ್ಟೆಯು ಸ್ಥಳೀಯವಾಗಿ ನಿರ್ಮಿಸಿತು?**

[ಎ] ಗಾರ್ಡನ್ ರೀಚ್ ಶಿಪ್‌ಬಿಲ್ಡರ್ಸ್ & ಇಂಜಿನಿಯರ್ಸ್
[ಬಿ] ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್
[ಸಿ] ಗೋವಾ ಶಿಪ್‌ಯಾರ್ಡ್ ಲಿಮಿಟೆಡ್
[ಡಿ] ಮಜಗಾಂವ್ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್

**45. ಬೋರ್ ಟೈಗರ್ ರಿಸರ್ವ್ ಯಾವ ರಾಜ್ಯದಲ್ಲಿದೆ?**

[ಎ] ಮಹಾರಾಷ್ಟ್ರ
[ಬಿ] ಗುಜರಾತ್
[ಸಿ] ಕರ್ನಾಟಕ
[ಡಿ] ಕೇರಳ

**46. ಪ್ಯಾರಾಕೆಂಪ್ಫೆರಿಯಾ ಆಲ್ಬಾ ಎಂಬ ಹೊಸ ಜಾತಿಯ ಶುಂಠಿಯನ್ನು ಯಾವ ರಾಜ್ಯದಲ್ಲಿ ಕಂಡುಹಿಡಿಯಲಾಗಿದೆ?**

[ಎ] ಅರುಣಾಚಲ ಪ್ರದೇಶ
[ಬಿ] ಸಿಕ್ಕಿಂ
[ಸಿ] ಮಹಾರಾಷ್ಟ್ರ
[ಡಿ] ತ್ರಿಪುರ

**47. ವಾಧವನ್ ಬಂದರು ಯಾವ ರಾಜ್ಯದಲ್ಲಿದೆ?**

[ಎ] ಆಂಧ್ರಪ್ರದೇಶ
[ಬಿ] ಗುಜರಾತ್
[ಸಿ] ಒಡಿಶಾ
[ಡಿ] ಮಹಾರಾಷ್ಟ್ರ

**48. ಟೈಪ್ 096 ಟ್ಯಾಂಗ್-ಕ್ಲಾಸ್ ಜಲಾಂತರ್ಗಾಮಿ ನೌಕೆಯನ್ನು ಯಾವ ದೇಶ ಅಭಿವೃದ್ಧಿಪಡಿಸಿದೆ?**

[ಎ] ಚೀನಾ
[ಬಿ] ಜಪಾನ್
[ಸಿ] ಆಸ್ಟ್ರೇಲಿಯಾ
[ಡಿ] ಇಸ್ರೇಲ್

**49. ಭಾರತದಲ್ಲಿ ಅತಿ ಹೆಚ್ಚು ಉಪ್ಪುನೀರಿನ ಮೊಸಳೆಗಳು ನೈಸರ್ಗಿಕ ಆವಾಸಸ್ಥಾನದಲ್ಲಿ ಕಂಡುಬರುವ ರಾಜ್ಯ ಯಾವುದು?**

[ಎ] ಗುಜರಾತ್
[ಬಿ] ಮಹಾರಾಷ್ಟ್ರ
[ಸಿ] ಕೇರಳ
[ಡಿ] ಒಡಿಶಾ

**50. ಐಎನ್‌ಎಸ್ ಸುದರ್ಶಿನಿಯನ್ನು ಯಾವ ಹಡಗುಕಟ್ಟೆ ನಿರ್ಮಿಸಿದೆ?**

[ಎ] ಮಜಗಾವ್ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್
[ಬಿ] ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್
[ಸಿ] ಗೋವಾ ಶಿಪ್‌ಯಾರ್ಡ್ ಲಿಮಿಟೆಡ್
[ಡಿ] ಹಿಂದೂಸ್ತಾನ್ ಶಿಪ್‌ಯಾರ್ಡ್ ಲಿಮಿಟೆಡ್

ಮುಂದುವರಿಯುತ್ತದೆ...

**ಉತ್ತರಗಳು: 43-ಸಿ, 44-ಸಿ, 45-ಎ, 46-ಎ, 47-ಡಿ, 48-ಎ, 49-ಡಿ, 50-ಸಿ.**

Scanned with OKEN Scanner

# ಭೂಗೋಳಶಾಸ್ತ್ರ

**890. ಈ ಹೇಳಿಕೆಯನ್ನು ಪರಿಗಣಿಸಿ.**

A. ಕರ್ನಾಟಕದ ಕಾಗದದ ಕೈಗಾರಿಕೆಯು 1936 – 1937ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ಸ್ಥಾಪಿಸಲ್ಪಟ್ಟಿತು.
B. ಕರ್ನಾಟಕದ ಕಾಗದದ ಕೈಗಾರಿಕೆಯು 1936 – 1937ರಲ್ಲಿ ಚಿಕ್ಕದೇವರಾಜ ಒಡೆಯರ್ ಅವರಿಂದ ಸ್ಥಾಪಿಸಲ್ಪಟ್ಟಿತು.
C. ಕರ್ನಾಟಕದ ಕಾಗದದ ಕೈಗಾರಿಕೆಯು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಂದ ಸ್ಥಾಪಿಸಲ್ಪಟ್ಟಿತು.

**ಮೇಲಿನವುಗಳಲ್ಲಿ ಯಾವುದು/ವು ಸರಿ?**
**ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸಂಕೇತಗಳ ಮೂಲಕ ಸರಿಯಾದ ಉತ್ತರವನ್ನು ಆರಿಸಿ.**

1) A ಮಾತ್ರ ಸರಿ 2) B ಮಾತ್ರ ಸರಿ 3) C ಮಾತ್ರ ಸರಿ 4) ಎಲ್ಲವೂ ಸರಿ

**ಉತ್ತರ : 1) A ಮಾತ್ರ ಸರಿ**

**891. ಈ ಹೇಳಿಕೆಯನ್ನು ಪರಿಗಣಿಸಿ.**

A. ಕರ್ನಾಟಕದ ಕಾಗದದ ಕೈಗಾರಿಕೆಯು 1936 – 1937 ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ಸ್ಥಾಪಿಸಲ್ಪಟ್ಟಿತು. ನಂತರ 1977ರಲ್ಲಿ ಸರ್ಕಾರದ ಕಂಪನಿಯಾಗಿ ಮಾರ್ಪಟ್ಟಿತು.
B. ಕರ್ನಾಟಕದ ಕಾಗದದ ಕೈಗಾರಿಕೆಯು 1936 – 1937ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ಸ್ಥಾಪಿಸಲ್ಪಟ್ಟಿತು. ನಂತರ 1987ರಲ್ಲಿ ಸರ್ಕಾರದ ಕಂಪನಿಯಾಗಿ ಮಾರ್ಪಟ್ಟಿತು.
C. ಕರ್ನಾಟಕದ ಕಾಗದದ ಕೈಗಾರಿಕೆಯು 1936 – 1937ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ಸ್ಥಾಪಿಸಲ್ಪಟ್ಟಿತು. ನಂತರ 1977ರಲ್ಲಿ ಮುಚ್ಚಲ್ಪಟ್ಟಿತ್ತು.

**ಮೇಲಿನವುಗಳಲ್ಲಿ ಯಾವುದು/ವು ಸರಿ?**
**ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸಂಕೇತಗಳ ಮೂಲಕ ಸರಿಯಾದ ಉತ್ತರವನ್ನು ಆರಿಸಿ.**

1) A ಮಾತ್ರ ಸರಿ 2) B ಮಾತ್ರ ಸರಿ 3) C ಮಾತ್ರ ಸರಿ 4) ಎಲ್ಲವೂ ಸರಿ

**ಉತ್ತರ : 1) A ಮಾತ್ರ ಸರಿ**

**892. ಈ ಹೇಳಿಕೆಯನ್ನು ಪರಿಗಣಿಸಿ.**

A. ಮೈಸೂರ್ ಪೇಪರ್ ಮಿಲ್ಸ್ 2015–2016ರಲ್ಲಿ ಕಾಗದದ ಉತ್ಪಾದನೆಯು ಸ್ಥಗಿತಗೊಂಡಿತು.
B. ಮೈಸೂರ್ ಪೇಪರ್ ಮಿಲ್ಸ್ 2015–2016ರಲ್ಲಿ ಕಾಗದದ ಉತ್ಪಾದನೆಯು ಸ್ಥಗಿತಗೊಂಡಿಲ್ಲ ಪ್ರಸ್ತುತ ಚಾಲನೆಯಲ್ಲಿದೆ.

**ಮೇಲಿನವುಗಳಲ್ಲಿ ಯಾವುದು/ವು ಸರಿ?**
**ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸಂಕೇತಗಳ ಮೂಲಕ ಸರಿಯಾದ ಉತ್ತರವನ್ನು ಆರಿಸಿ**

1) A ಮಾತ್ರ ಸರಿ 2) B ಮಾತ್ರ ಸರಿ
3) C ಮಾತ್ರ ಸರಿ 4) ಎಲ್ಲವೂ ಸರಿ

**ಉತ್ತರ : 1) A ಮಾತ್ರ ಸರಿ**

**ಮುಂದುವರಿಯುತ್ತದೆ...**

Scanned with OKEN Scanner

## ಭಾಗ – ಎ

8. ಶ್ರಮದ ಮಾರುಕಟ್ಟೆಯಲ್ಲಿ **ಕುಟುಂಬಗಳು** ಶ್ರಮದ ಪೂರೈಕೆದಾರರಾಗಿರುತ್ತಾರೆ.

9. ಒಂದು ಉದ್ಯಮಘಟಕವು ಮಾಡಿದ ನಿವ್ವಳ ಕೊಡುಗೆಯನ್ನು ಅದರ **ಮೌಲ್ಯವರ್ಧನೆ** ಎನ್ನುತ್ತೇವೆ.

10. ತಪ್ಪುಗಳು ಮತ್ತು **ಲೋಪಗಳು** ಸಂದಾಯ ಬಾಕಿಯ ಮೂರನೇ ಅಂಶವಾಗಿದೆ.

**III. ಹೊಂದಿಸಿ ಬರೆಯಿರಿ.**

11.

| A | B |
|---|---|
| a. ಬೇಡಿಕೆ ರೇಖೆ | i. ಕೆಳಮುಖ ಇಳಿಜಾರು |
| b. ಸಾಮಾನ್ಯ ಲಾಭ | ii. ಶೂನ್ಯ ಲಾಭ |
| c. ಶ್ರಮ | iii. ಕೂಲಿ |
| d. ಕಚ್ಚಾ ಸರಕು | iv. ಮಧ್ಯಂತರ ಸರಕು |
| e. ನಿರ್ವಹಣಾ ಹೊಂದಾಣಿಕೆ | v. ಡರ್ಟಿ ಹೊಂದಾಣಿಕೆ |

**IV. ಒಂದು ವಾಕ್ಯದಲ್ಲಿ ಉತ್ತರಿಸಿ: 5X1=5**

**12. ಉತ್ಪಾದನೆಯ ಅರ್ಥ:** 'ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಸರಕು ಮತ್ತು ಸೇವೆಗಳನ್ನು ಸಿದ್ಧಪಡಿಸುವ ಪ್ರಕ್ರಿಯೆಯನ್ನು ಉತ್ಪಾದನೆ' ಎನ್ನುತ್ತಾರೆ.

13. ತಂತ್ರಜ್ಞಾನದ ಪ್ರಗತಿಯಿಂದ ಪೂರೈಕೆ ರೇಖೆಯು **ಬಲಕ್ಕೆ (ಕೆಳಕ್ಕೆ)** ಪಲ್ಲಟಗೊಳ್ಳುತ್ತದೆ.

**14. ಆ್ಯಡಂ ಸ್ಮಿತ್ ಕೃತಿ:** Wealth of Nations -1776 'ಆನ್ ಇನ್‌ವೆಂಟರಿ ಇಂಟು ದಿ ನೇಚರ್ ಆ್ಯಂಡ್ ಕಾಸಸ್ ಆಫ್ ದಿ ವೆಲ್ತ್ ಆಫ್ ನ್ಯಾಷನ್ಸ್'.

**15. ಡಿಜಿಟಲ್ ಪಾವತಿ ಉದಾಹರಣೆ:** Google Pay, PhonePe ಅಥವಾ UPI.

**16. GST:** Goods and Services Tax (ಸರಕು ಮತ್ತು ಸೇವೆಗಳ ತೆರಿಗೆ).

## ಭಾಗ – ಬಿ

**V. ಕೆಳಗಿನ ಪ್ರಶ್ನೆಗಳಿಗೆ ಸುಮಾರು 4 ವಾಕ್ಯಗಳಲ್ಲಿ ಉತ್ತರಿಸಿ. (2 ಅಂಕಗಳು) 6X2=12**

**17. ಸೂಕ್ಷ್ಮ ಮತ್ತು ಸಮಗ್ರ ಅರ್ಥಶಾಸ್ತ್ರಗಳ ನಡುವಿನ ವ್ಯತ್ಯಾಸವನ್ನು ತಿಳಿಸಿ.**

| ಸೂಕ್ಷ್ಮ ಅರ್ಥಶಾಸ್ತ್ರ | ಸಮಗ್ರ ಅರ್ಥಶಾಸ್ತ್ರ |
|---|---|
| • ಅರ್ಥವ್ಯವಸ್ಥೆಯ ಅತ್ಯಂತ ಸಣ್ಣ ಸಣ್ಣ ಘಟಕಗಳನ್ನು ಕುಲಂಕಶವಾಗಿ ಅಧ್ಯಯನ ಮಾಡುತ್ತದೆ.<br>• **ಉದಾಹರಣೆ :** ಒಬ್ಬ ಅನುಭೋಗಿ, ಒಬ್ಬ ಉತ್ಪಾದಕ, ಒಂದು ಉದ್ಯಮ ಘಟಕ ಇತ್ಯಾದಿ.<br>• ಇದು ಸಂಕುಚಿತ ವ್ಯಾಪ್ತಿಯನ್ನು ಹೊಂದಿದೆ.<br>• ಇದು ಭಾಗಶಃ ಸಮತೋಲನ ವಿಶ್ಲೇಷಣೆಯಾಗಿದೆ. | • ಸಮಗ್ರ ಅರ್ಥಶಾಸ್ತ್ರ ಆರ್ಥಿಕತೆಯನ್ನು ಒಟ್ಟಾರೆಯಾಗಿ ಅಧ್ಯಯನ ಮಾಡುತ್ತದೆ.<br>• **ಉದಾಹರಣೆ:** ಸಮಗ್ರ ಬೇಡಿಕೆ, ಸಮಗ್ರ ಉತ್ಪಾದನೆ, ಸಮಗ್ರ ಪೂರೈಕೆ, ಸಮಗ್ರ ಬೆಲೆಗಳು, ಇತ್ಯಾದಿ.<br>• ಇದು ವಿಶಾಲ ವ್ಯಾಪ್ತಿಯನ್ನು ಹೊಂದಿದೆ.<br>• ಸಾಮಾನ್ಯ ಸಮತೋಲನ ವಿಶ್ಲೇಷಣೆಯಾಗಿದೆ. |

ಮುಂದುವರಿಯುತ್ತದೆ

Scanned with OKEN Scanner


# ನಿಮ್ಮ ಸಾಹಿತ್ಯಾಭಿರುಚಿಗೆ ನಮ್ಮ ಸವಾಲು

## ಆಂಡಯ್ಯ ಕವಿ ಈ ಕೆಳಗಿನ ಯಾವ ದೊರೆಯ ಆಸ್ಥಾನಿಕನಾಗಿದ್ದನು?

ATHARVA CLASSES
UGC NET
KANNADA LITERATURE

ಅ) ಮೂರನೇ ಕೃಷ್ಣ
ಆ) ಕಾಮದೇವ
ಇ) ಪ್ರೌಢದೇವರಾಯ
ಈ) ಮುಮ್ಮಡಿ ಕೃಷ್ಣರಾಜ ಒಡೆಯರ

**ಸ.ಉತ್ತರ : ಕಾಮದೇವ**



ಆಂಡಯ್ಯ (ಕ್ರಿ.ಶ. 1225) ಕನ್ನಡ ಭಾಷೆಯ ಮೊಟ್ಟ ಮೊದಲನೆಯ ಅಚ್ಚಗನ್ನಡ ಕಾವ್ಯ ರಚಿಸಿದ ಕವಿ. ಸಂಸ್ಕೃತದ ಒಂದೂ ಪದವನ್ನು ಬೆರಸದೆ, ಅಚ್ಚ ಕನ್ನಡದಲ್ಲಿ ಕಾವ್ಯ ರಚನೆಯನ್ನು ಮಾಡಿದ ಹೆಗ್ಗಳಿಕೆ ಆಂಡಯ್ಯನದು. ಈ ಕಾವ್ಯದ ಹೆಸರು 'ಕಬ್ಬಿಗರ ಕಾವಂ – ಕವಿಗಳ ರಕ್ಷಕ' ಎಂದು ತನ್ನ ಕೃತಿಗೆ ನಾಮಕರಣ ಮಾಡಿದನು.ಇದು ರಮ್ಯವಾಗಿರುವುದರಿಂದ ಇದಕ್ಕೆ 'ಸೊಬಗಿನ ಸುಗ್ಗಿ' ಎಂಬ ಹೆಸರು ಬಂದಿದೆ. ಸಂಸ್ಕೃತ ತಿಳಿದವರು ಇದನ್ನು ಮದನ ವಿಜಯ ಎಂದು ಕರೆಯುತ್ತಾರೆ.

'ಕನ್ನಡಮೆನಿಪ್ಪನಾಡು ಚಲ್ವಾಯ್ತು' ಕನ್ನಡ ಭಾಷೆಯ ಅಭಿಮಾನ, ತವರು ನೆಲ, ತಾಯಿನುಡಿಯ ಬಗ್ಗೆ ಕವಿಗೆ ಒಲವು ಅಪಾರವಾಗಿದೆ ಎಂಬುವುದನ್ನು ಸೂಚಿಸುತ್ತದೆ. ಈತನ ನೆಲೆ ಬನವಾಸಿಯ ಪ್ರಾಂತ್ಯ. 'ರಾಜಾಶ್ರಯ ಕದಂಬ ದೊರೆ ಕಾಮದೇವ.' ಆಂಡಯ್ಯ ತನ್ನ ಮೂಲ ಕೃತಿಗೆ ಕಾವನ ಗೆಲ್ಲಂ ಎಂದು ನಾಮಕರಣ ಮಾಡಿದ್ದಾನೆ. ಇದು ಚಂಪೂಕಾವ್ಯ. ಇದರಲ್ಲಿ ನಡು ನಡುವೆ ಬರುವ ಸಣ್ಣ ಸಣ್ಣ ಗದ್ಯ ಖಂಡಗಳ ಜೊತೆಗೆ ವೃತ್ತಗಳೂ ಕಂದಗಳೂ ಕೂಡಿ ಒಟ್ಟು 272 ಪದ್ಯಗಳಿವೆ.

Scanned with OKEN Scanner

# ಹೌದಲ್ವಾ...!

| ಈಗಿನ ಹೆಸರು | ಹಳೆಯ ಹೆಸರು |
|---|---|
| 1. ಬೆಂಗಳೂರು: | ಬೆಂದಕಾಳೂರು |
| 2. ಬೆಳಗಾವಿ: | ವೇಣುಗ್ರಾಮ |
| 3. ಹಾಸನ: | ಸಿಂಹಾಸನಪುರಿ |
| 4. ಬೇಲೂರು: | ವೇಲೂರು |
| 5. ಮೈಸೂರು: | ಮಹಿಷಪುರ |
| 6. ಬಾದಾಮಿ: | ವಾತಾಪಿ |
| 7. ಹಂಪಿ: | ಕಿಷ್ಕಿಂದೆ |
| 8. ಬನವಾಸಿ: | ವೈಜಯಂತಿಪುರ |
| 9. ಕೋಲಾರ: | ಕುವಲಾಲ |
| 10. ಹಳೇಬೀಡು: | ದ್ವಾರಸಮುದ್ರ |
| 11. ವಿಜಯಪುರ: | ಬಿಜಾಪುರ |
| 12. ಕಲಬುರ್ಗಿ | ಗುಲ್ಬರ್ಗಾ |

Scanned with OKEN Scanner

# ಗಣರಾಜ್ಯೋತ್ಸವ: ನೌಕಾಪಡೆಗೆ ಉತ್ತಮ ಪರೇಡ್ ಪ್ರಶಸ್ತಿ


ನವದೆಹಲಿ: ಗಣರಾಜ್ಯೋತ್ಸವದಂದು ಕರ್ತವ್ಯಪಥದಲ್ಲಿ ನಡೆದ ಪಥಸಂಚಲನದಲ್ಲಿ ಸೇನೆಯ 3 ಪಡೆಗಳ ಪೈಕಿ ನೌಕಾಪಡೆಗೆ ಅತ್ಯುತ್ತಮ ಪರೇಡ್ ಪ್ರಶಸ್ತಿ ಲಭಿಸಿದೆ. ಅಂತೆಯೇ ಸ್ತಬ್ಧಚಿತ್ರಗಳ ವಿಭಾಗದಲ್ಲಿ ಮಹಾರಾಷ್ಟ್ರಕ್ಕೆ ರಾಜ್ಯಗಳ ಪೈಕಿ ಪ್ರಥಮ ಹಾಗೂ 'ವಂದೇ ಮಾತರಂ' ಗೀತೆಯನ್ನು ಪ್ರದರ್ಶಿಸಿದ ಸಾಂಸ್ಕೃತಿಕ ಸಚಿವಾಲಯಕ್ಕೆ ಅಗ್ರ ಸ್ಥಾನ ಲಭಿಸಿದೆ. ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ(ಸಿಎಪಿಎಫ್) ಪೈಕಿ ದೆಹಲಿ ಪೊಲೀಸರನ್ನು ಉತ್ತಮ ಪಥಸಂಚಲನದ ದಳವೆಂದು ಗುರುತಿಸಲಾಯಿತು.


ನೌಕಾಪಡೆಯ 144 ಯೋಧರು ಪ್ರಗತಿಶೀಲ ಮತ್ತು ಬಲವನ್ನು ಪ್ರದರ್ಶಿಸುತ್ತ ಪಥಸಂಚಲನದಲ್ಲಿ ಹೆಜ್ಜೆ ಹಾಕಿದ್ದರು. ರಾಜ್ಯಗಳ ವಿಷಯಕ್ಕೆ ಬಂದರೆ, ಮೊದಲ ಸ್ಥಾನ ಪಡೆದಿರುವ ಮಹಾರಾಷ್ಟ್ರದ ಸ್ತಬ್ಧಚಿತ್ರವನ್ನು 'ಗಣೇಶೋತ್ಸವ' ಥೀಂನ ಅಡಿಯಲ್ಲಿ ತಯಾರಿಸಲಾಗಿತ್ತು. ಅದರ ಎರಡೂ ಬದಿಗಳಲ್ಲಿ ಮರಾಠಾ ಸ್ತ್ರೀಯರು ತಮ್ಮ ರಾಜ್ಯದ ಜಾನಪದ ನೃತ್ಯವಾದ ಲೇಝಿಂ ಮಾಡುತ್ತಿದ್ದರು. ಇದೇ ವಿಭಾಗದಲ್ಲಿ 2ನೇ ಸ್ಥಾನವನ್ನು ತಮ್ಮ ರಾಜ್ಯದ ಕರಕುಶಲ ವಸ್ತು ಮತ್ತು ಜಾನಪದ ನೃತ್ಯಗಳನ್ನು ಪ್ರದರ್ಶಿಸಿದ ಜಮ್ಮು ಕಾಶ್ಮೀರಕ್ಕೆ, 3ನೇ ಸ್ಥಾನವನ್ನು ವಾಟರ್‌ಮೆಟ್ರೋ ಮತ್ತು ಶೇ.100 ಡಿಜಿಟಲ್ ಸಾಕ್ಷರತೆಯನ್ನು ಪ್ರಸ್ತುತಪಡಿಸಿದ ಕೇರಳಕ್ಕೆ ನೀಡಲಾಯಿತು.

Scanned with OKEN Scanner

# ನಾಳೆ ರಾಜ್ಯದ ಹಲವು ಸಾಧಕರಿಗೆ ಗಾಂಧಿ ಪುರಸ್ಕಾರ ಪ್ರದಾನ

## ತುಮಕೂರಿನ ಗುಬ್ಬಿ ವೀರಣ್ಣ ಮಂದಿರದಲ್ಲಿ ಪ್ರದಾನ
## ಕನ್ನಡಪ್ರಭದ ರವಿ ಹೆಗಡೆ, ಬಿವಿಎಂಗೂ ಗೌರವ


ರವಿ ಹೆಗಡೆ


ಮಲ್ಲಿಕಾರ್ಜುನಯ್ಯ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ತುಮಕೂರಿನ ಗುಬ್ಬಿ ವೀರಣ್ಣ ಕಲಾ ಮಂದಿರದಲ್ಲಿ ಜ.30ರಂದು ಗಾಂಧಿ ಪುರಸ್ಕಾರ, ಮಾಧ್ಯಮ ರತ್ನ ಪುರಸ್ಕಾರ, ಪತ್ರಿಕಾ ವಿತರಕ ರತ್ನ ಪುರಸ್ಕಾರ ಮತ್ತು ಪ್ರಜಾನಿಧಿ ಪ್ರಶಸ್ತಿ ಸಮಾರಂಭ ನಡೆಯಲಿದೆ. ಯೋಗಕ್ಷೇಮ ಮೀಡಿಯಾ ಪ್ರೈ.ಲಿ., ವಿಶ್ವಂ ಟಿ.ವಿ. ಮತ್ತು ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಸಂಘದಿಂದ ಕಾರ್ಯಕ್ರಮ ಆಯೋಜಿಸಲಾಗಿದೆ. ಎಸ್.ಪಿ.ಚಿದಾನಂದ, ಕಲಾಶ್ರೀ ಡಾ.ಲಕ್ಷ್ಮಣದಾಸ ಸೇರಿ 10 ಸಾಧಕರಿಗೆ ಪ್ರಜಾನಿಧಿ ಪ್ರಶಸ್ತಿ, 'ಕನ್ನಡಪ್ರಭ' ಪ್ರಧಾನ ಸಂಪಾದಕ ರವಿ ಹೆಗಡೆ, ಮುಖ್ಯಮಂತ್ರಿಯವರಮಾಧ್ಯಮಸಲಹೆಗಾರಕೆ.ವಿ.ಪ್ರಭಾಕರ್, 'ವಿಶ್ವವಾಣಿ'ಯ ವಿಶ್ವೇಶ್ವರ ಭಟ್, ಪತ್ರಕರ್ತರ ಸಂಘದ ಶಿವಾನಂದ ತಗಡೂರು, 'ಕನ್ನಡಪ್ರಭ' ವಿಶೇಷ ಯೋಜನೆ ಸಂಪಾದಕ ಬಿ.ವಿ.ಮಲ್ಲಿಕಾರ್ಜುನಯ್ಯ ಸೇರಿ 14 ಸಾಧಕರಿಗೆ ಗಾಂಧಿ ಪುರಸ್ಕಾರ ಪ್ರದಾನವಾಗಲಿದೆ. ಮಾಧ್ಯಮ ಸೇವಾರತ್ನ ಪ್ರಶಸ್ತಿ, ಪತ್ರಿಕಾ ವಿತರಕ ಸೇವಾ ಪ್ರಶಸ್ತಿಯೂ ಪ್ರದಾನ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

Scanned with OKEN Scanner

# ವ್ಯಾಪಾರ ಒಪ್ಪಂದದ ಕ್ರಾಂತಿ ಇಕ್ಕಟ್ಟಿಗೆ ಸಿಲುಕಿದ ದೊಡ್ಡಣ್ಣ

ಕಳೆದ 20 ವರ್ಷಗಳಿಂದ ಆಗದ ವ್ಯಾಪಾರ ಒಪ್ಪಂದ ಈಗ ಏರ್ಪಟ್ಟಿರುವುದು ಇಡೀ ಜಗತ್ತಿನ ವಾಣಿಜ್ಯ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತರಲಿದೆ. ಇದು ಸಂಕ್ರಾಂತಿಯ ದ್ಯೋತಕ ಎಂದು ಐರೋಪ್ಯ ಒಕ್ಕೂಟದ ನಾಯಕರೇ ಹೇಳಿದ್ದಾರೆ. ಇದರಿಂದ ತತ್‌ಕ್ಷಣದ ಪರಿಣಾಮ ಎಂದರೆ ಅಮೆರಿಕದ ದೊಡ್ಡಣ್ಣನ ತೀಕ್ಷ್ಣ ಪ್ರತಿಕ್ರಿಯೆ. ಹಾಗೆ ನೋಡುವ ಹಾಗಿದ್ದರೆ ಇದಕ್ಕೆ ಟ್ರಂಪ್ ಕೈಗೊಂಡ ಸುಂಕ ಸಮರವೇ ಕಾರಣ. ರಷ್ಯಾ–ಉಕ್ರೇನ್ ಯುದ್ಧದಲ್ಲಿ ರಷ್ಯಾ ಮೇಲೆ ಅಮೆರಿಕ ಆರ್ಥಿಕ ದಿಗ್ಬಂಧನ ವಿಧಿಸಿತು. ಇದಕ್ಕೆ ಭಾರತ ಸೊಪ್ಪು ಹಾಕಲಿಲ್ಲ. ವ್ಯಾಪಾರವೇ ಬೇರೆ ರಾಜಕೀಯವೇ ಬೇರೆ ಎಂದು ಭಾರತ ತನ್ನ ವಾದ ಮಂಡಿಸಿ ಗೆದ್ದಿತು. ಅಮೆರಿಕದ ಕೆಂಗಣ್ಣು ಭಾರತದ ಮೇಲೆ ಬಿದ್ದಿತು. ರಷ್ಯಾದಿಂದ ಕಚ್ಚಾತೈಲ ಖರೀದಿ ಮಾಡಬಾರದು ಎಂದು ಅಮೆರಿಕ ತಾಕೀತು ಮಾಡಿತು. ಆದರೆ ಭಾರತ ಅದಕ್ಕೆ ಬಗ್ಗಲಿಲ್ಲ. ಅದರಿಂದ ಟ್ರಂಪ್ ಸುಂಕ ಸಮರ ಸಾರಿದರು. ಆದರೆ ಭಾರತದ ಪರ ಚೀನಾ ಮತ್ತು ರಷ್ಯಾ ನಿಂತಿದ್ದರಿಂದ ಟ್ರಂಪ್ ಇಕ್ಕಟ್ಟಿಗೆ ಸಿಲುಕಿದರು. ರಷ್ಯಾಗೆ ತನ್ನ ಕಚ್ಚಾ ತೈಲವನ್ನು ಭಾರತ ಖರೀದಿ ಮಾಡುವುದು ಅತ್ಯಗತ್ಯವಾಗಿತ್ತು. ಕಡಿಮೆ ದರದಲ್ಲಿ ತೈಲ ಪಡೆದು ಅದನ್ನು ಸಂಸ್ಕರಿಸಿ ಭಾರತ ಬೇರೆ ದೇಶಗಳಿಗೆ ಶುದ್ಧ ಇಂಧನ ನೀಡಿತು. ಇದರಿಂದ ಭಾರತಕ್ಕೆ ಉತ್ತಮ ಲಾಭ ಬಂದಿದ್ದು ನಿಜ. ಆಗ ಐರೋಪ್ಯ ದೇಶಗಳು ಭಾರತವನ್ನು ದೂಷಿಸಿದ್ದು ನಿಜ. ಆದರೆ ನಮ್ಮ ದೇಶದ ನಾಯಕರು ಎಲ್ಲ ದೇಶಗಳಿಗೆ ಹೋಗಿ ನಮ್ಮ ನಿಲುವನ್ನು ವಿವರಿಸಿದರು. ಇದರಿಂದ ಭಾರತದ ಬಗ್ಗೆ ಅಪವಾದ ನಿವಾರಣೆಯಾಯಿತು. ಅದೇವೇಳೆ ಅಮೆರಿಕ ಸುಂಕದ ಮೂಲಕ ಬೇರೆ ದೇಶವನ್ನು ಆಕ್ರಮಿಸಿಕೊಳ್ಳುವ ತಂತ್ರಗಾರಿಕೆ ಬಯಲಾಯಿತು. ವೆನಿಜುವೆಲಾ ಆಕ್ರಮಿಸಿಕೊಂಡಾಗ ಅಮೆರಿಕದ ಬಗ್ಗೆ ಇತರ ದೇಶಗಳಿಗೆ ಅಸಮಾಧಾನ ಮೂಡಿತ್ತು. ಗ್ರೀನ್ ಲ್ಯಾಂಡ್ ಮೇಲೆ ಅಮೆರಿಕದ ಕಣ್ಣು ಬಿದ್ದ ಮೇಲೆ ಐರೋಪ್ಯ ಒಕ್ಕೂಟ ತನ್ನ ಭ್ರಮೆಯಿಂದ ಹೊರಬಂದಿತು. ಹೀಗಾಗಿ ಅಮೆರಿಕ ಹೊರತುಪಡಿಸಿ ಇತರ ದೇಶಗಳು ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು ಮುಂದಾದವು. ಬ್ರಿಕ್ಸ್ ಶೃಂಗಸಭೆಯಲ್ಲಿ ಅಮೆರಿಕವನ್ನು ಕೈಬಿಟ್ಟು ಜಾಗತಿಕ ಮಟ್ಟದಲ್ಲಿ ದೇಶ–ದೇಶಗಳ ನಡುವಿನ ಸಂಬಂಧ ಬದಲಾಗಲು ಕಾರಣವಾಯಿತು. ಚೀನಾ–ರಷ್ಯಾ–ಭಾರತ ಒಂದಾಗಿದ್ದು ಅಮೆರಿಕಕ್ಕೆ ನುಂಗಲಾರದ ತುತ್ತು ಆಗಿದ್ದಂತೂ ನಿಜ. ಅದರ ಫಲವೇ ಸುಂಕ ಸಮರ. ಈಗ ಐರೋಪ್ಯ ಒಕ್ಕೂಟ ಅಮೆರಿಕದಿಂದ ದೂರ ಬಂದು ನೇರವಾಗಿ ಭಾರತದೊಂದಿಗೆ ಒಪ್ಪಂದ ಮಾಡಿಕೊಂಡಿರುವುದು 200 ಕೋಟಿ ಜನ ಸೇರಿ ಒಂದು ಬೃಹತ್ ಮಾರುಕಟ್ಟೆ ಕಂಡುಕೊಳ್ಳಲು ಸಾಧ್ಯವಾಗಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಡಾಲರ್ ಮಹತ್ವ ಕಡಿಮೆ ಮಾಡುವ ಎಲ್ಲ ಪ್ರಯತ್ನಗಳು ನಡೆಯುತ್ತಿದೆ. ಜಾಗತಿಕ ಜಿಡಿಪಿಯಲ್ಲಿ ಶೇ. 25 ಐರೋಪ್ಯ ಮತ್ತು ಭಾರತದ ಮಾರುಕಟ್ಟೆಯ ಪಾಲು ಎಂಬುದನ್ನು ಕಡೆಗಣಿಸಲು ಬರುವುದಿಲ್ಲ. ಐರೋಪ್ಯ ಕಾರುಗಳಿಂದ ಹಿಡಿದು ಉತ್ತಮ ವಿದೇಶಿ ಮದ್ಯದವರೆಗೆ ಹಲವು ವಸ್ತುಗಳ ಮೇಲಿನ ಸುಂಕ ಕಡಿಮೆಯಾಗಲಿದೆ. ಜವಳಿ ಉದ್ಯಮದಲ್ಲಿ ಭಾರತಕ್ಕೆ ಹೆಚ್ಚಿನ ಲಾಭವಿದೆ. ಐಟಿ–ಬಿಟಿ ಕಂಪನಿಗಳು ಸುಲಭವಾಗಿ ತನ್ನ ಸಿಬ್ಬಂದಿಯನ್ನು ಐರೋಪ್ಯ ದೇಶಗಳಿಗೆ ಕಳುಹಿಸಬಹುದು. ಗಣರಾಜ್ಯೋತ್ಸವ ಇದೇ ಮೊದಲ ಬಾರಿ ಹೊಸ ಒಪ್ಪಂದಗಳಿಗೆ ವೇದಿಕೆಯಾಗಿದೆ. ಚೀನಾ ಕೂಡ ಇದೇ ಮೊದಲ ಬಾರಿ ಭಾರತಕ್ಕೆ ಗಣರಾಜ್ಯೋತ್ಸವ ಶುಭಾಶಯ ನೀಡಿದೆ. ಟ್ರಂಪ್ ಭಾರತದ ಮೇಲೆ ಸುಂಕ ಸಮರ ಸಾರಿದಾಗ ಇದಕ್ಕೆ ಸರಿಯಾದ ಉತ್ತರ ನೀಡಬೇಕೆಂದು ಭಾರತದ ವಿದೇಶಾಂಗ ವ್ಯವಹಾರ ಮತ್ತು ವಾಣಿಜ್ಯ ವ್ಯಾಪಾರ ನಿರ್ದೇಶನಾಲಯ ಸದ್ದಿಲ್ಲದೆ ಕೆಲಸ ಮಾಡುತ್ತಿತ್ತು. ಕೊನೆಗೆ ಈಗ ಟ್ರಂಪ್‌ಗೆ ತಕ್ಕ ಉತ್ತರ ನೀಡಿದೆ. ಇದರಿಂದಲೇ ಶಶಿ ತರೂರ್ ಕಾಂಗ್ರೆಸ್‌ನಲ್ಲಿದ್ದರೂ ಕೇಂದ್ರಕ್ಕೆ ಬೆಂಬಲ ನೀಡಿದರು. ವಿದೇಶಾಂಗ ನೀತಿಯಲ್ಲಿ ರಾಜಕೀಯ ಬೆರೆಸಬಾರದು ಎಂದು ಅವರು ಹಲವು ಬಾರಿ ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಕಾಂಗ್ರೆಸ್ ಇತರ ನಾಯಕರು ಬಿಜೆಪಿಯನ್ನು ಟೀಕಿಸುವುದನ್ನು ನಿಲ್ಲಿಸಿಲ್ಲ. ಹೊರಗಿನ ದೇಶಗಳ ನಾಯಕರು ಬಂದಾಗ ನಮ್ಮ ದೇಶದ ಘನತೆ–ಗೌರವ ಉಳಿಸಿಕೊಳ್ಳಬೇಕು. ಅದರಲ್ಲಿ ನಮ್ಮ ಆಂತರಿಕ ಸಂಘರ್ಷ ಬಹಿರಂಗಗೊಳ್ಳಬಾರದು. ಟೀಕಿಸುವುದಷ್ಟೆ ಪ್ರತಿಪಕ್ಷದ ಕೆಲಸ ಅಲ್ಲ ಎಂದು ಲೋಹಿಯಾದಿಂದ ಹಿಡಿದು ಅಟಲ್ ಬಿಹಾರಿ ವಾಜಪೇಯಿವರೆಗೆ ಎಲ್ಲ ನಾಯಕರು ಮತ್ತೆ ಮತ್ತೆ ಪುನರುಚ್ಚರಿಸಿದ್ದಾರೆ. ಈ ವಿಷಯದಲ್ಲಿ ನಮ್ಮ ನಿಲುವು ಸ್ಪಷ್ಟವಾಗಿರಬೇಕು. ವಿದೇಶಾಂಗ ವ್ಯವಹಾರಗಳ ತೀರ್ಮಾನದ ವಿಚಾರದಲ್ಲಿ ಎಲ್ಲವನ್ನೂ ಸರ್ಕಾರ ಬಹಿರಂಗವಾಗಿ ಚರ್ಚಿಸಲು ಬರುವುದಿಲ್ಲ. ಅದರ ಅಗತ್ಯವೂ ಇಲ್ಲ. ತೀರ್ಮಾನಗಳನ್ನು ಜನಸಾಮಾನ್ಯರಿಗೆ ತಿಳಿಸಿದರೆ ಸಾಕು. ವಿದೇಶಾಂಗ ವ್ಯವಹಾರಗಳಲ್ಲಿ ಒಂದು ಸಮಸ್ಯೆಗಳಿಗೆ ಒಂದು ಪರಿಹಾರ ಎಂಬುದು ಇರುವುದಿಲ್ಲ. ಗುಪ್ತ ಸಮಾಚಾರಗಳು ಕೆಲವು ಇದ್ದೇ ಇರುತ್ತವೆ. ■

**ಗ್ರೀನ್ ಲ್ಯಾಂಡ್ ಮೇಲೆ ಅಮೆರಿಕದ ಕಣ್ಣು ಬಿದ್ದ ಮೇಲೆ ಐರೋಪ್ಯ ಒಕ್ಕೂಟ ತನ್ನ ಭ್ರಮೆಯಿಂದ ಹೊರಬಂದಿತು. ಹೀಗಾಗಿ ಅಮೆರಿಕ ಹೊರತುಪಡಿಸಿ ಇತರ ದೇಶಗಳು ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು ಮುಂದಾದವು.**

Scanned with OKEN Scanner

# ಹುಗಲೂರಿನಲ್ಲಿ ರಾಷ್ಟ್ರಕೂಟರ ಶಾಸನ ಪತ್ತೆ



**ಹೂವಿನಹಡಗಲಿ (ವಿಜಯನಗರ):** ತಾಲೂಕಿನ ಹುಗಲೂರು ರಾಮಲಿಂಗೇಶ್ವರ ದೇಗುಲದ ನವರಂಗ ಮಂಟಪದಲ್ಲಿ ರಾಷ್ಟ್ರಕೂಟರ ಕಾಲದ ಅಪರೂಪದ ಶಾಸನ ಪತ್ತೆಯಾಗಿದೆ.

ಮೂರೂವರೆ ಅಡಿ ಎತ್ತರ ಹಾಗೂ 2 ಅಡಿ ಅಗಲವಿರುವ ಶಾಸನದಲ್ಲಿ 25 ಸಾಲುಗಳಿವೆ. ಕನ್ನಡ ಲಿಪಿ ಹಾಗೂ ಭಾಷೆಯಲ್ಲಿರುವ ಶಾಸನದ ಕಾಲ ಕ್ರಿ.ಶ. 952ಕ್ಕೆ ಸರಿಹೊಂದುತ್ತದೆ. ರಾಷ್ಟ್ರಕೂಟ ಅರಸ ಅಕಾಲವರ್ಷ ಕನ್ನರದೇವನ (ಮೂರನೆಯ ಕೃಷ್ಣ) ಆಡಳಿತದ ವೇಳೆ ಆತನ ಸಾಮಂತ ರೊಟ್ಟಯ್ಯನು ಕೋಗಳಿ, ಮಾಸವಾಡಿ, ಕುಕನೂರುಗಳನ್ನು ಆಳುತ್ತಿದ್ದ. ಆತನ ಅಣ್ಣಯ್ಯನ ಮೊಮ್ಮಗ ಗೊಗ್ಗಯ್ಯನು ಪುಗ್ಗಿಲೂರನ್ನು (ಹುಗಲೂರು) ಆಳ್ವಿಕೆ ಮಾಡುತ್ತಿದ್ದ. ಗಾವುಂಡನಾದ ಗೊಗ್ಗಯ್ಯನು ಮಲ್ಲಿಕಾರ್ಜುನ ದೇವರ ಸೇವೆಗಾಗಿ 54 ಮತ್ತರು ಭೂಮಿಯನ್ನು ವೀಳ್ಯದೆಲೆ ಬೆಳೆಯುವುದಕ್ಕೆ ದಾನ ನೀಡಿದ್ದ ಎಂಬ ವಿವರವನ್ನು ಈ ಶಾಸನ ಒಳಗೊಂಡಿದೆ. ಶಾಸನದ ಮೇಲ್ಭಾಗದಲ್ಲಿ ಕುಂಭದೊಳಗೆ ಶಿವಲಿಂಗವನ್ನು ಅದರ ಎದುರು ಆಕಳು ಹಾಲುಣಿಸುತ್ತಿರುವ ಹಾಗೂ ತುದಿಯಲ್ಲಿ ಸೂರ್ಯ, ಚಂದ್ರರ ಸಂಕೇತಗಳಿವೆ.

Scanned with OKEN Scanner

# ರಸಗೊಬ್ಬರಗಳ ಅತಿಯಾದ ಬಳಕೆ ತಡೆಯಲು ಸರ್ಕಾರದ ಯೋಜನೆ

**ನವದೆಹಲಿ:** ಬೆಳೆಯ ಮೇಲೆ ಉಂಟಾಗುವ ಪ್ರತಿಕೂಲ ಪರಿಣಾಮ ತಡೆಯುವ ನಿಟ್ಟಿನಲ್ಲಿ ರಸಗೊಬ್ಬರಗಳ ಅತಿಯಾದ ಬಳಕೆಯನ್ನು ತಡೆಯಲು ಸರ್ಕಾರದ ಯೋಜನೆ

ಜಮೀನು, ರಸಗೊಬ್ಬರ ಬಳಕೆ ಮತ್ತು ಬೆಳೆಗಳನ್ನು ಪರಸ್ಪರ ಸಂಪರ್ಕಿಸಲು 'ಅಗ್ರಿಸ್ಟಾಕ್' ನಂತಹ ತಾಂತ್ರಿಕ ವೇದಿಕೆಗಳನ್ನು ಬಳಸಿಕೊಂಡು ಪ್ರಾಯೋಗಿಕ ಯೋಜನೆಗಳನ್ನು ಸರ್ಕಾರ ನಡೆಸುತ್ತಿದೆ.

ಆ ಮೂಲಕ ಭೂಮಿಗೆ ಬೇಕಾದ ಆದರ್ಶ ಪೋಷಕಾಂಶಗಳ ಪ್ರಮಾಣವನ್ನು ನಿಗದಿಪಡಿಸುವ ಗುರಿ ಹೊಂದಿದೆ ಎಂದು ಕೇಂದ್ರ ಕೃಷಿ ಕಾರ್ಯದರ್ಶಿ ರಜತ್ ಕುಮಾರ್ ಮಿಶ್ರಾ ಮಂಗಳವಾರ ತಿಳಿಸಿದ್ದಾರೆ.

ಮಿಶ್ರಾ ಅವರ ಈ ಹೇಳಿಕೆಯು ಸದ್ಯಕ್ಕೆ ಬೆಲೆ ನಿಯಂತ್ರಣದ ಬಗ್ಗೆ ನಡೆಯುತ್ತಿರುವ ಚರ್ಚೆಗಳನ್ನು ಬದಿಗಿಟ್ಟಿದೆ. ಐಸಿಆರ್‌ಐಇಆರ್ ಆಯೋಜಿಸಿದ್ದ 'ಭಾರತದಲ್ಲಿ ಮಣ್ಣಿನ ಪುನಶ್ಚೇತನ' ಕುರಿತ ಸಂವಾದದಲ್ಲಿ ಮಾತನಾಡಿದ ಮಿಶ್ರಾ, ನಾಲ್ಕು ರಾಜ್ಯಗಳಲ್ಲಿ ಸರ್ಕಾರವು ಏಳು ಪ್ರಾಯೋಗಿಕ ಯೋಜನೆಗಳನ್ನು ನಡೆಸುತ್ತಿದೆ ಎಂದು ಹೇಳಿದರು.

ಅಲ್ಲಿ ಭೂಮಿ, ರಸಗೊಬ್ಬರ ಬಳಕೆ ಮತ್ತು ಬೆಳೆಯುವ ಬೆಳೆಗಳ ಶೇಕಡಾ 60 ರಷ್ಟು ದತ್ತಾಂಶವು ತಾಳೆಯಾಗಿದೆ.

ಒಮ್ಮೆ ಈ ಅಂಕಿಅಂಶವು ಶೇಕಡಾ 80 ರಷ್ಟು ತಾಳೆಯಾದ ನಂತರ, ಯೂರಿಯಾದ ಅತಿಯಾದ ಬಳಕೆಯ ವಿರುದ್ಧ ರೈತರನ್ನು ಜಾಗೃತಗೊಳಿಸಲು ಸರ್ಕಾರವು ಮುಂದಾಗಲಿದೆ ಎಂದು ಅವರು ಹೇಳಿದರು.

ಯೂರಿಯಾ ಬಳಕೆಯನ್ನು ಕಡಿಮೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುವ ಪೂರಕ ಅಂಶಗಳ ವಿಷಯದಲ್ಲಿ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಮಿಶ್ರಾ, ಯಾವುದೇ ಅಡಚಣೆಯಾಗದಂತೆ



ಈ ಅಂಶವನ್ನೂ ಸೇರಿಸಿಕೊಳ್ಳಲಾಗುತ್ತಿದೆ ಎಂದು ಹೇಳಿದರು.

ತಮ್ಮ ಹೆಸರಿನಲ್ಲಿ ಭೂಮಿ ಇಲ್ಲದವರು ಶೇಕಡಾ 60 ರಷ್ಟು ರಸಗೊಬ್ಬರವನ್ನು ಬಳಸುತ್ತಿದ್ದಾರೆ ಎಂದು ಸರ್ಕಾರದ ಅಂಕಿಅಂಶಗಳು ತೋರಿಸಿವೆ ಎಂದು ಅವರು ತಿಳಿಸಿದರು.

ಹರಿಯಾಣದಲ್ಲಿ, ಅಗ್ರಿಸ್ಟಾಕ್ ಬಳಸಿ ಭೂಮಿ, ರಸಗೊಬ್ಬರ ಬಳಕೆ ಮತ್ತು ಬೆಳೆಗಳನ್ನು ಸಂಪರ್ಕಿಸುವ ಪ್ರಯೋಗ ನಡೆಸಲಾಗಿದ್ದು, ಇದು ಗಮನಾರ್ಹ ಫಲಿತಾಂಶಗಳನ್ನು ತೋರಿಸಿದೆ ಎಂದು ಮಿಶ್ರಾ ಹೇಳಿದರು.

ಈ ವಿಚಾರಗೋಷ್ಠಿಯಲ್ಲಿ ಮಾತನಾಡಿದ ನೀತಿ ಆಯೋಗದ ಸದಸ್ಯ ರಮೇಶ್ ಚಂದ್ ಅವರು, ದೇಶವು 4:2:1 ರ ಆದರ್ಶ ಎನ್‌ಪಿಕೆ ಅನುಪಾತವನ್ನು ಗಂಭೀರವಾಗಿ ಮರುಪರಿಶೀಲಿಸುವ ಅಗತ್ಯವಿದೆ ಎಂದು ಹೇಳಿದರು.

ಏಕೆಂದರೆ ಈ ಅನುಪಾತಗಳನ್ನು ನಿಗದಿಪಡಿಸಿದ ಕಾಲಕ್ಕೆ ಹೋಲಿಸಿದರೆ ಈಗ ಬೆಳೆ ಇಳುವರಿಯು ಹಲವು ಪಟ್ಟು ಹೆಚ್ಚಾಗಿದೆ ಎಂದು ಅವರು ತಿಳಿಸಿದರು.

Scanned with OKEN Scanner

## ಒಎನ್‌ಜಿಸಿ ಹೆಗ್ಗಳಿಕೆ | ಭಾರತ ಇಂಧನ ಸಪ್ತಾಹದಲ್ಲಿ ಪ್ರಾತ್ಯಕ್ಷಿಕೆ

# ವಿಪತ್ತು ನಿರ್ವಹಣೆಗೆ ತಂತ್ರಜ್ಞಾನ

■ ಪಿ.ಕೆ. ರವಿಕುಮಾರ್ ಗೋವಾ

ತೈಲ, ಅನಿಲ ಸೋರಿಕೆ, ಇನ್ನಿತರ ತುರ್ತು ಸಂದರ್ಭದಲ್ಲಿ ಅವಘಡವನ್ನು ಸಮರ್ಥವಾಗಿ ಎದುರಿಸಲು ತೈಲ ಮತ್ತು ನೈಸರ್ಗಿಕ ಅನಿಲ ನಿಗಮ (ಒಎನ್‌ಜಿಸಿ) ಅತ್ಯಾಧುನಿಕ ತಂತ್ರಜ್ಞಾನವನ್ನು ಹೊಂದಿದ್ದು, ಬುಧವಾರ ಸಂಸ್ಥೆಯ ಆವರಣದಲ್ಲಿ ಬೆಂಕಿ ನಿರ್ವಹಣೆ ಪ್ರಾತ್ಯಕ್ಷಿಕೆ ನಡೆಸಿಕೊಟ್ಟಿತು.



ಗೋವಾದ ಒಎನ್‌ಜಿಸಿ ಆವರಣದಲ್ಲಿ ಬುಧವಾರ ಬೆಂಕಿ ನಂದಿಸುವ ಪ್ರಾತ್ಯಕ್ಷಿಕೆ.

ಆಕಾಶ, ನೆಲದ ಮೇಲೆ ಹಾಗೂ ನೀರಿನಲ್ಲಿ ಸಂಭವಿಸುವ ಬೆಂಕಿ ಆಪತ್ತುಗಳನ್ನು ನುರಿತ ತಂತ್ರಜ್ಞರು ನಿರ್ವಹಣೆ ಮಾಡಿ ನಂದಿಸುವ ರೋಚಕ ದೃಶ್ಯ ಎಲ್ಲರ ಗಮನ ಸೆಳೆಯಿತು. 100 ಅಡಿ ಎತ್ತರದಲ್ಲಿ ಇದ್ದ ಹೆಲಿಕಾಪ್ಟರ್‌ಗೆ ಬೆಂಕಿ ತಗುಲಿದಾಗ ಸಂಸ್ಥೆಯ ಹತ್ತಾರು ತಂತ್ರಜ್ಞರು ರಕ್ಷಣಾ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಇನ್ನು ನೆಲದ ಮೇಲಿದ್ದ ಟ್ಯಾಂಕರ್‌ನಲ್ಲಿ ಅನಿಲ ಸೋರಿಕೆಯಾಗಿ ಬೆಂಕಿ ತಗುಲಿದಾಗ ಸೋರಿಕೆ ತಡೆಗಟ್ಟಿದರು. ಕಾರ್ಯಾಚರಣೆಯಲ್ಲಿ ರೋಬಾಟ್ ಕೂಡ ನೀರನ್ನು ಚಿಮ್ಮಿಸಿತು. ಅಲ್ಲದೆ ವಿಮಾನ ಪತನವಾಗಿ ಕಡಲಿಗೆ ಬಿದ್ದ ಸಂದರ್ಭದಲ್ಲಿ ಪ್ರಯಾಣಿಕರನ್ನು ರಕ್ಷಿಸುವ ಕಾರ್ಯಾಚರಣೆ ರೋಮಾಂಚನ ಮೂಡಿಸಿತು.



**ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಅಡಿ ಸ್ಥಾಪಿತವಾಗಿರುವ ಒಎನ್‌ಜಿಸಿ ಅತ್ಯಾಧುನಿಕ ತರಬೇತಿ ಸಂಸ್ಥೆಯನ್ನು ಹೊಂದಿದ್ದು, ರಕ್ಷಣಾ ಕಾರ್ಯಾಚರಣೆ ಯಲ್ಲಿ ವಿಶ್ವದಲ್ಲೇ ಮುಂಚೂಣಿಯಲ್ಲಿದೆ. ಇಲ್ಲಿನ ಸಿಬ್ಬಂದಿಗೆ ಬೆಂಕಿ ನಿರ್ವಹಣೆ ಸಂಬಂಧ ಉನ್ನತಮಟ್ಟದ ತರಬೇತಿ ನೀಡಲಾಗುತ್ತದೆ. ತುರ್ತು ಸಿದ್ಧತೆ ಯನ್ನು ಬಲಪಡಿಸಲು ಅನಿಲ ಸೋರಿಕೆ ನಿರ್ವಹಣೆಯ ಕಲ್ಪಿತ ಪ್ರದರ್ಶನವನ್ನು ಆಗಾಗ್ಗೆ ಹಮ್ಮಿಕೊಳ್ಳಲಾಗುತ್ತದೆ. ಒಟ್ಟಿನಲ್ಲಿ ಬೆಂಕಿ ಅವಘಡ ಎದುರಿಸಲು ಹಾಗೂ ಜನರ ಜೀವ ಉಳಿಸಲು ನಮ್ಮ ಸಿಬ್ಬಂದಿ ಸದಾ ಸಿದ್ಧರಿರುತ್ತಾರೆ.**

**| ಅಮಿತಾ ಟಂಡನ್**

**ಕಾರ್ಪೊರೇಟ್ ಕಮ್ಯುನಿಕೇಶನ್ ಮುಖ್ಯಸ್ಥೆ ಒಎನ್‌ಜಿಸಿ**

**ಸಾಗರ ಸೇತು:** ಒಎಂಜಿಸಿ ಆವರಣಕ್ಕೆ ಹೊಂದಿಕೊಂಡಂತೆ ಅರಬ್ಬಿ ಸಮುದ್ರವಿದ್ದು, ಇಲ್ಲಿ ಸಾಗರ ಸೇತು ಹೆಸರಿನಲ್ಲಿ ಜಟ್ಟಿ ನಿರ್ಮಾಣ ಮಾಡಲಾಗಿದೆ. ಉನ್ನತ ಮಟ್ಟದ ಸಚಿವರು, ಗಣ್ಯರು ಸಮುದ್ರದ ನಿಗದಿತ ತೀರದಿಂದ ಬೋಟ್‌ನಲ್ಲಿ ಅತಿ ಕಡಿಮೆ ಸಮಯದಲ್ಲಿ ಸಂಸ್ಥೆಯನ್ನು ಪ್ರವೇಶಿಸಲು ಈ ಜಟ್ಟಿ ಅನುಕೂಲವಾಗಿದೆ.

ಸಂಸ್ಥೆಯು ಸಪ್ತಾಹ ಹಾಗೂ ಇನ್ನಿತರ ದೊಡ್ಡ ಮಟ್ಟದ ವಿಚಾರಸಂಕಿರಣ ಆಯೋಜಿಸಿದಾಗ ಗಣ್ಯರು ಚಿಕ್ಕ ರಸ್ತೆ ಮಾರ್ಗದಲ್ಲಿ ಬರಲು ಕಷ್ಟದಾಯಕವಾಗಿತ್ತು. ಆದರೆ ಈ ಜಟ್ಟಿ ಸಂಪರ್ಕ ಕೊಂಡಿಯಾಗಿದೆ. ಕ್ರೂಸ್ ಪ್ರವಾಸೋದ್ಯಮ, ಸಾಗರ ಪ್ರವಾಸೋದ್ಯಮಕ್ಕೆ ಸಹಕಾರಿಯಾಗಿದೆ.

# ಫೆಬ್ರವರಿಯಿಂದ ಒಟಿಎಸ್

## ಫೆ.1ರಿಂದ ಮೇ 1ರವರೆಗೆ ಯೋಜನೆ ಅನುಷ್ಠಾನಗೊಳ್ಳುವ ನಿರೀಕ್ಷೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ನೀರಿನ ಬಿಲ್ ಬಾಕಿ ಮೊತ್ತವನ್ನು ತ್ವರಿತಗತಿಯಲ್ಲಿ ವಸೂಲಾತಿ ಮಾಡುವ ನಿಟ್ಟಿನಲ್ಲಿ ಬೆಂಗಳೂರು ಜಲಮಂಡಳಿಯು ಒನ್‌ಟೈಮ್ ಸೆಟಲ್‌ಮೆಂಟ್ ಯೋಜನೆ ಜಾರಿಗೆ ತರಲು ಮುಂದಾಗಿದ್ದು, ಸದರಿ ಯೋಜನೆ ಫೆ.1ರಿಂದ ಮೇ 1ರವರೆಗೆ ಅನುಷ್ಠಾನಗೊಳ್ಳುವ ನಿರೀಕ್ಷೆ ಇದೆ.

ನೀರು ಮತ್ತು ಒಳಚರಂಡಿ ಶುಲ್ಕವೇ ಮಂಡಳಿಗೆ ಪ್ರಮುಖ ಆದಾಯವಾಗಿರುವಾಗ ದೀರ್ಘಕಾಲದ ನೀರಿನ ಬಿಲ್ ಬಾಕಿ ಮೊತ್ತ ಹಾಗೆ ಉಳಿದು ಕೊಂಡಿರುವುದು ಸಮಸ್ಯೆಯಾಗಿತ್ತು. ಆ ಮೊತ್ತವನ್ನು ಗ್ರಾಹಕರಿಗೆ ಅನುಕೂಲವಾಗುವಂತೆ ತ್ವರಿತಗತಿಯಲ್ಲಿ ವಸೂಲಿ ಮಾಡುವ ಉದ್ದೇಶದಿಂದ ಮಂಡಳಿ ಒನ್‌ಟೈಮ್ ಸೆಟಲ್‌ಮೆಂಟ್ ಯೋಜನೆ ಜಾರಿಗೆ ತರುತ್ತಿದೆ. ಅಂದರೆ ಬಾಕಿ ಇರುವ ನೀರಿನ ಬಿಲ್‌ನ ಅಸಲು ಮೊತ್ತವನ್ನು ಏಕಕಾಲದಲ್ಲಿ ಪಾವತಿಸಿದರೆ, ಬಡ್ಡಿ ಮತ್ತು ದಂಡದ ಮೊತ್ತವನ್ನು ಶೇ.100 ಮನ್ನಾ ಮಾಡಲಾಗುತ್ತದೆ ಎಂದು ಮಂಡಳಿ ತಿಳಿಸಿದೆ.

■ **ಜಲಮಂಡಳಿಗೆ ₹534.13 ಕೋಟಿ ಅಸಲು ಸಂಗ್ರಹ**

**534.13 ಕೋಟಿ ರೂ. ಸಂಗ್ರಹ:** ಸದ್ಯ ಇರುವ 6,21,939 ಲಕ್ಷ ಕಾವೇರಿ ನೀರಿನ ಗ್ರಾಹಕರು ದೀರ್ಘಕಾಲದಿಂದ ಬಾಕಿ ಇರುವ 534.13 ಕೋಟಿ ರೂ. ಅಸಲನ್ನು ಕಟ್ಟಿದರೆ 299 ಕೋಟಿ ರೂ. ಬಡ್ಡಿ ಮನ್ನಾ ಆಗಲಿದೆ. ಇದರಿಂದ ಮಂಡಳಿಗೆ 534.13 ಕೋಟಿ ರೂ. ಅಸಲು ಮೊತ್ತ ಸಂಗ್ರಹವಾಗಲಿದೆ.

ಈ ಯೋಜನೆಯನ್ನು ಮೊದಲು ಜ.1ರಿಂದಲೇ ಜಾರಿಗೆ ತರಲು ತೀರ್ಮಾನಿಸಲಾಗಿತ್ತು. ಕಾರಣಾಂತರಗಳಿಂದ ಇಲ್ಲಿಯವರೆಗೆ ಜಾರಿಯಾಗಿಲ್ಲ. ಮುಂದೆ ಫೆಬ್ರವರಿ ತಿಂಗಳ ಮಾಸಿಕ ಬಿಲ್‌ನ ಆವರ್ತನ ಆರಂಭವಾಗುವುದರಿಂದ ಫೆಬ್ರವರಿ ತಿಂಗಳ ಆರಂಭದಲ್ಲೇ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಯೋಜನೆಗೆ ಚಾಲನೆ ನೀಡುವ ಸಾಧ್ಯತೆಯಿದೆ.



### ನೀರಿನ ಶುಲ್ಕ ಬಾಕಿ ವಿವರ

| ವಿಭಾಗ | ಸುಸ್ತಿದಾರರ ಸಂಖ್ಯೆ | ಅಸಲು | ಬಡ್ಡಿ | ಒಟ್ಟು ಮೊತ್ತ (ಕೋಟಿ ರೂ.ಗಳಲ್ಲಿ) |
|---|---|---|---|---|
| ವಾಣಿಜ್ಯ | 48,307 | 104.04 | 60.70 | 164.74 |
| ವಸತಿ | 5,29,075 | 228.75 | 144.25 | 373.00 |
| ಕೈಗಾರಿಕೆ | 1,484 | 8.58 | 4.27 | 12.85 |
| ಸೇನೆ | 212 | 61.53 | 44.88 | 106.41 |
| ಇತರೆ | 15 | 2.67 | 3.65 | 6.33 |
| ಒಟ್ಟು | 6,21,939 | 5341.13 | 299.00 | 833.14 |

### ಪಾವತಿ ಹೇಗೆ?

**ಈ** ಯೋಜನೆಯು 3 ತಿಂಗಳ ಅವಧಿಗೆ ಸೀಮಿತವಾಗಿ ಜಾರಿಗೊಳಿಸಲಾಗುತ್ತಿದೆ. ಅವಧಿಯೊಳಗೆ ಪಾವತಿಸಿದ ಗ್ರಾಹಕರಿಗೆ ಮಾತ್ರ ಬಡ್ಡಿ ಮನ್ನಾ ಆಗಲಿದೆ. ಗ್ರಾಹಕರು ಒಂದು ಅಥವಾ ಹೆಚ್ಚಿನ ಕಂತುಗಳಲ್ಲಿ ಮೂಲಧನವನ್ನು ಪಾವತಿಸಬಹುದು. ಆದರೆ, ಅವಧಿಯೊಳಗೆ ಸಂಪೂರ್ಣ ಪಾವತಿ ಮಾಡುವುದು ಕಡ್ಡಾಯವಾಗಿದೆ. ನೀರಿನ ಬಿಲ್ ಪಾವತಿಯನ್ನು ನೇರವಾಗಿ ಜಲಮಂಡಳಿ ಕಚೇರಿಗೆ ಹೋಗಿ ನಗದು ಪಾವತಿಸಬಹುದು. ಇಲ್ಲದಿದ್ದಲ್ಲಿ ಡಿಮಾಂಡ್ ಡ್ರಾಫ್ಟ್, ಪೇಮೆಂಟ್ ಗೇಟ್‌ವೇ, ಬೆಂಗಳೂರು ಒನ್ ಹಾಗೂ ವರ್ಚುವಲ್ ಅಕೌಂಟ್ ಮೂಲಕವೂ ಪಾವತಿಸಬಹುದಾಗಿದೆ.

Scanned with OKEN Scanner

# ಎಟಿಎಂನಿಂದ ವಿತ್‌ಡ್ರಾ ಪ್ರಮಾಣ ಇಳಿಕೆ

**ಮುಂಬೈ:** ದೇಶದಲ್ಲಿ ಎಟಿಎಂ ಕೇಂದ್ರಗಳಿಂದ ನಗದು ತೆಗೆದುಕೊಳ್ಳುವ ಪ್ರಮಾಣ 2025ರಲ್ಲಿ ಇಳಿಕೆಯ ಹಾದಿಯಲ್ಲಿದೆ ಎಂದು ಎಟಿಎಂ ನಿರ್ವಹಣಾ ಸಂಸ್ಥೆಯಾದ ಸಿಎಂಎಸ್ ಇನ್ಫೋ ಸಿಸ್ಟಮ್ಸ್ ಬುಧವಾರ ತಿಳಿಸಿದೆ. ಕಳೆದ ವರ್ಷದಲ್ಲಿ ಡಿಜಿಟಲ್ ಪಾವತಿಗಳ ಬಳಕೆ ಹೆಚ್ಚಾಗಿರುವುದು ಮತ್ತು ಮಾಸಿಕ ವಹಿವಾಟುಗಳು ಹೊಸ ಎತ್ತರಕ್ಕೆ ತಲುಪಿರುವುದು ನಗದು ಬಳಕೆಯ ಇಳಿಕೆಗೆ ಪ್ರಮುಖ ಕಾರಣವಾಗಿದೆ. 2025ರಲ್ಲಿ ದೇಶಾದ್ಯಂತ ಪ್ರತಿ ಎಟಿಎಂನಿಂದ ವಿತರಿಸಲಾದ ಮಾಸಿಕ ಸರಾಸರಿ ನಗದು 1.21 ಕೋಟಿ ರೂ.ನಷ್ಟಿದೆ. ಇದು 2024-25ರ ಹಣಕಾಸು ವರ್ಷದಲ್ಲಿದ್ದ 1.30 ಕೋಟಿ ರೂ.ಗೆ ಹೋಲಿಸಿದರೆ ಗಮನಾರ್ಹ ಕುಸಿತ. ಆದರೂ, ಜನ ಒಂದು ಬಾರಿಗೆ ಹಿಂಪಡೆಯುವ ಸರಾಸರಿ ಮೊತ್ತ ಶೇಕಡಾ 4.5ರಷ್ಟು ಹೆಚ್ಚಳವಾಗಿದ್ದು, 5,586 ರೂ.ಯಿಂದ 5,835 ರೂ.ಗೆ ಏರಿದೆ.

ನಗರ ಪ್ರದೇಶಗಳಿಗಿಂತ ಅರೆ-ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ನಗದು ಹಿಂಪಡೆಯುವ ಪ್ರವೃತ್ತಿ ಹೆಚ್ಚಿದ್ದು, ಮೆಟ್ರೋ ನಗರಗಳಿಗಿಂತ ಇಲ್ಲಿನ ಎಟಿಎಂಗಳಲ್ಲಿ ಹೆಚ್ಚು ಹಣ ಚಲಾವಣೆಯಾಗಿದೆ. ಮಾನ್ಸೂನ್, ಬಿಸಿಲ ಹೆಚ್ಚಳ ಮತ್ತು ಹಬ್ಬಗಳಂತಹ ಅಂಶಗಳು ಸಹ ನಗದು ಬಳಕೆಯ ಮೇಲೆ ಪ್ರಭಾವ ಬೀರಿವೆ. ಇದೇ ವೇಳೆ, ಕಳೆದ ವರ್ಷದ ಜಿಎಸ್‌ಟಿ ಸುಧಾರಣೆಗಳ ನಂತರ ವಿಮಾ ಕ್ಷೇತ್ರದಲ್ಲಿನ ಖರ್ಚು ಶೇಕಡಾ 32ರಷ್ಟು ವೃದ್ಧಿಯಾಗಿದ್ದರೆ, ಶಿಕ್ಷಣ ಮತ್ತು ಮನರಂಜನಾ ಕ್ಷೇತ್ರಗಳಲ್ಲಿನ ವೆಚ್ಚ ಇಳಿಕೆ ಕಂಡಿದೆ.

## ಕರ್ನಾಟಕ ನಂ.1

**ಕುತೂಹಲಕಾರಿ ವಿಷಯ ಎಂದರೆ, ಕರ್ನಾಟಕದ ಎಟಿಎಂಗಳು ಪ್ರತಿ ಯಂತ್ರಕ್ಕೆ 1.73 ಕೋಟಿ ರೂ. ನಗದು ವಿತರಿಸುವ ಮೂಲಕ ದೇಶದಲ್ಲೇ ಮೊದಲ ಸ್ಥಾನದಲ್ಲಿವೆ. ಜಮ್ಮು ಕಾಶ್ಮೀರದಲ್ಲಿ ಈ ಪ್ರಮಾಣ ಅತಿ ಕಡಿಮೆ, ಅಂದರೆ 83 ಲಕ್ಷ ರೂ. ಇದೆ.**




Scanned with OKEN Scanner

# 3 ರಾಜ್ಯಗಳಲ್ಲಿ ಮಾತ್ರ ಈ ವರ್ಷ ಜಾತಿಗಣತಿ: ಕೇಂದ್ರ ಸರ್ಕಾರ ಸ್ಪಷ್ಟನೆ

ನವದೆಹಲಿ: ಪ್ರಸಕ್ತ ವರ್ಷದಲ್ಲಿ ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡ ಹೊರತುಪಡಿಸಿ ದೇಶದ ಬೇರೆ ಯಾವುದೇ ರಾಜ್ಯವು ಜಾತಿ ಮತ್ತು ಸಮುದಾಯ ಆಧಾರಿತ ಜನಗಣತಿಯನ್ನು ನಡೆಸುತ್ತಿಲ್ಲ ಎನ್ನುವ ಮೂಲಕ 2027ರ ಸಾಲಿನ ಜನಗಣತಿಗೆ ಸಂಬಂಧಿಸಿದಂತೆ ದೇಶದ ನಾಗರಿಕರಲ್ಲಿ ಉಂಟಾಗಿರುವ ಗೊಂದಲವನ್ನು ಈಗ ಗೃಹ ಸಚಿವಾಲಯ ನಿವಾರಿಸಿದೆ. 2027ರ ಜನಗಣತಿಯನ್ನು ಎರಡು ಹಂತಗಳಲ್ಲಿ ನಡೆಸಲಾಗುತ್ತದೆ. ಮೊದಲ ಹಂತದಲ್ಲಿ ಮನೆ ದಾಸ್ತಾನು ಮತ್ತು ವಸತಿ ಜನಗಣತಿ ನಡೆಯಲಿದೆ. ಗೃಹೋಪಯೋಗಿ ವಸ್ತುಗಳು, ಮನೆಯಲ್ಲಿ ವಾಸಿಸುವ ವಿವಾಹಿತ ದಂಪತಿಗಳ ಸಂಖ್ಯೆ, ಮನೆಯ ಮುಖ್ಯಸ್ಥರ ಲಿಂಗ, ಆಹಾರ ಧಾನ್ಯಗಳ ಬಳಕೆ ಪದ್ಧತಿ, ಮೂಲಭೂತ ಮತ್ತು ಆಧುನಿಕ ರೀತಿಯ ಅವಶ್ಯಕತೆಗಳೂ ಸೇರಿದಂತೆ ಹಲವಾರು ವಿಷಯಗಳ ಕುರಿತು ಸರ್ಕಾರವು ಅಂಕಿಅಂಶಗಳನ್ನು ಸಂಗ್ರಹಿಸಲಿದೆ.

Scanned with OKEN Scanner

# 2026ರ ಮಹಿಳಾ ಟಿ20 ವಿಶ್ವಕಪ್‌ಗೆ ಅರ್ಹತೆ ಪಡೆದ ಬಾಂಗ್ಲಾ, ನೆದರ್‌ಲ್ಯಾಂಡ್

ಕಠ್ಮಂಡು: ಮುಂದಿನ ಜೂನ್–ಜುಲೈನಲ್ಲಿ ನಡೆಯಲಿರುವ 2026ರ ಐಸಿಸಿ ಮಹಿಳಾ ಟಿ20 ವಿಶ್ವಕಪ್‌ಗೆ ಬಾಂಗ್ಲಾದೇಶ ಹಾಗೂ ನೆದರ್‌ಲ್ಯಾಂಡ್ ಅರ್ಹತೆ ಗಿಟ್ಟಿಸಿಕೊಂಡಿವೆ. ನೆದರ್‌ಲೆಂಡ್ ಇದೇ ಮೊದಲ ಬಾರಿ ಟಿ20 ವಿಶ್ವಕಪ್ ಆಡಲಿದೆ. ಕ್ವಾಲಿಫೈಯರ್‌ನ ಸೂಪರ್–6 ಹಂತದಲ್ಲಿ ಗೆಲ್ಲುವ ಮೂಲಕ ಈ 2 ತಂಡಗಳು ವಿಶ್ವಕಪ್ ಪ್ರವೇಶಿಸಿದವು. ಬಾಂಗ್ಲಾದೇಶ ತಂಡ ಥಾಯ್ಲೆಂಡ್ ವಿರುದ್ಧ 39 ರನ್‌ಗಳಿಂದ ಗೆದ್ದರೆ, ನೆದರ್‌ಲೆಂಡ್ ತಂಡ ಯುಎಸ್‌ಎ ವಿರುದ್ಧ ಜಯಭೇರಿ ಬಾರಿಸಿತು. ಟೂರ್ನಿಯಲ್ಲಿ ಒಟ್ಟು 12 ತಂಡ ಪಾಲ್ಗೊಳ್ಳಲಿವೆ. 10 ತಂಡಗಳು ವಿಶ್ವಕಪ್ ಪ್ರವೇಶಿಸಿದ್ದು, 2 ಸ್ಥಾನಗಳು ಬಾಕಿ ಇವೆ.

Scanned with OKEN Scanner

# ದೇಶಹಿತ ವಿಚಾರದಲ್ಲಿ ಒಗ್ಗಟ್ಟು: ಎಲ್ಲ ಪಕ್ಷಗಳಿಗೆ ಮುರ್ಮು ಕರೆ

## ಬಜೆಟ್ ಅಧಿವೇಶನದ ಮೊದಲ ದಿನ ಸಂಸತ್ತಿನ ಉಭಯ ಸದನ ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಷಣ

**ನವದೆಹಲಿ:** ವಿಕಸಿತ ಭಾರತ, ಸ್ವದೇಶಿ ಅಭಿಯಾನ ಮತ್ತು ರಾಷ್ಟ್ರೀಯ ಭದ್ರತಾ ವಿಷಯದಲ್ಲಿ ಎಲ್ಲ ಪಕ್ಷಗಳೂ ತಮ್ಮಲ್ಲಿನ ರಾಜಕೀಯ ಭಿನ್ನಾಭಿಪ್ರಾಯ ಬದಿಗೊತ್ತಿ ಒಗ್ಗಟ್ಟಿನಿಂದ ನಿಲ್ಲಬೇಕೆಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಬುಧವಾರ ಒತ್ತಾಯಿಸಿದ್ದಾರೆ. ಇವು ಎಲ್ಲಾ ಭಿನ್ನಾಭಿಪ್ರಾಯಗಳನ್ನು ಮೀರಿದ ವಿಷಯಗಳು ಎಂದು ಪ್ರತಿಪಾದಿಸಿದ್ದಾರೆ.

ಬಜೆಟ್ ಅಧಿವೇಶನದ ಆರಂಭವನ್ನು ಗುರುತಿಸಿದ ಸಂಸತ್ತಿನ ಎರಡೂ ಸದನಗಳ ಜಂಟಿ ಅಧಿವೇಶನವನ್ನುದ್ದೇಶಿಸಿ ಸರ್ಕಾರ ಸಿದ್ಧಪಡಿಸಿದ ಭಾಷಣ ಓದಿದ ಅವರು, 'ಸರ್ಕಾರವು 'ಸುಧಾರಣಾ ಎಕ್ಸ್‌ಪ್ರೆಸ್'ನ ಆವೇಗವನ್ನು ಹೆಚ್ಚಿಸುವುದನ್ನು ಮುಂದುವರಿಸುತ್ತದೆ' ಎಂದು ಹೇಳಿದರು ಮತ್ತು 2047 ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡಲು ತೆಗೆದುಕೊಂಡ ವಿವಿಧ ಆರ್ಥಿಕ ಮತ್ತು ಸಾಮಾಜಿಕ ಉಪಕ್ರಮಗಳನ್ನು ಪಟ್ಟಿ ಮಾಡಿದರು.

### ಹಿರಿಯರ ನೋಡಿ ಕಲಿಯಿರಿ

ಮುರ್ಮು ಅವರು ತಮ್ಮ ಭಾಷಣದಲ್ಲಿ ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರು, ಬಾಬಾಸಾಹೇಬ್ ಅಂಬೇಡ್ಕರ್, ಸರ್ದಾರ್ ವಲ್ಲಭಭಾಯಿ ಪಟೇಲ್, ಜಯಪ್ರಕಾಶ್ ನಾರಾಯಣ್, ರಾಮ್ ಮನೋಹರ್ ಲೋಹಿಯಾ, ಪಂಡಿತ್ ದೀನದಯಾಳ್ ಉಪಾಧ್ಯಾಯ ಮತ್ತು ಅಟಲ್ ಬಿಹಾರಿ ವಾಜಪೇಯಿ ಅವರನ್ನು ಉಲ್ಲೇಖಿಸಿದರು ಮತ್ತು ಪ್ರಜಾಪ್ರಭುತ್ವದಲ್ಲಿ ಕೆಲವು ಭಿನ್ನಾಭಿಪ್ರಾಯಗಳು ಸಹಜ. ವಿಕಸಿತ ಭಾರತದ ಸಂಕಲ್ಪ, ಭಾರತದ ಭದ್ರತೆ, ಆತ್ಮನಿರ್ಭರತ, ಸ್ವದೇಶಿ ಅಭಿಯಾನ, ರಾಷ್ಟ್ರೀಯ ಏಕತೆಗಾಗಿ ಪ್ರಯತ್ನಗಳು, ಸ್ವಚ್ಛತೆ ಮತ್ತು ರಾಷ್ಟ್ರಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಸಂಸದರು ಒಗ್ಗಟ್ಟಿನಿಂದ ನಿಲ್ಲಬೇಕು. ಇದು ಸಂವಿಧಾನದ ಸ್ಫೂರ್ತಿ' ಎಂದು ಪ್ರತಿಪಾದಿಸಿದರು.

'ದೇಶದ ಅಭಿವೃದ್ಧಿ ಹಾಗೂ ರಾಷ್ಟ್ರೀಯ ಹಿತಾಸಕ್ತಿಯ ವಿಷಯಗಳ ಬಗ್ಗೆ ಎಲ್ಲಾ ಸಂಸದರು ಏಕೀಕೃತ ನಿಲುವನ್ನು ತೆಗೆದುಕೊಳ್ಳಬೇಕು. ಅದರ ಪ್ರಗತಿಗೆ ಹೊಸ ಶಕ್ತಿಯನ್ನು ತುಂಬಬೇಕು' ಎಂದು ಮುರ್ಮು ಒತ್ತಾಯಿಸಿದರು.

### ಆಪರೇಷನ್ ಸಿಂದೂರಕ್ಕೆ ಭೇಷ್

ಆಪರೇಷನ್ ಸಿಂಧೂರ್‌ಮೂಲಕ ಭಾರತೀಯ ಸಶಸ್ತ್ರ ಪಡೆಗಳು ತಮ್ಮ ಸ್ವಂತ ಸಂಪನ್ಮೂಲಗಳ ಬಲದಿಂದ ಭಯೋತ್ಪಾದಕ ಶಿಬಿರಗಳನ್ನು ನಾಶಪಡಿಸಿವೆ. ಅವರ ಶೌರ್ಯವನ್ನು ಜಗತ್ತು ನೋಡಿದೆ. ಯಾವುದೇ ಭಯೋತ್ಪಾದಕ ಕೃತ್ಯಕ್ಕೆ ನಿರ್ಣಾಯಕ ಕ್ರಮದೊಂದಿಗೆ ಪ್ರತಿಕ್ರಿಯಿಸಲಾಗುವುದು ಎಂದು ಪ್ರತಿಪಾದಿಸಿದರು.

ಅಧಿಕಾರವನ್ನು ಜವಾಬ್ದಾರಿ ಮತ್ತು ಬುದ್ಧಿವಂತಿಕೆಯಿಂದ ಬಳಸಬಹುದು ಎಂಬುದನ್ನು ಭಾರತ ಸಾಬೀತುಪಡಿಸಿದೆ ಎಂದು ಅವರು ಹೇಳಿದರು.



- ರಾಷ್ಟ್ರೀಯ ವಿಷಯಗಳಲ್ಲಿ ಮಹಾತ್ಮ ಗಾಂಧಿ, ನೆಹರು, ವಾಜಪೇಯಿ ಅವರನ್ನು ನೋಡಿ ಕಲಿಯಬೇಕು
- ರಾಷ್ಟ್ರಹಿತ, ಭದ್ರತೆ, ವಿಕಸಿತ ಭಾರತ ವಿಷಯಗಳು ರಾಜಕೀಯ ಮೀರಿ ಒಗ್ಗಟ್ಟು ಪ್ರದರ್ಶಿಸುವ ವಿಷಯ
- ಜಾಗತಿಕ ಬಿಕ್ಕಟ್ಟು ಇದ್ದರೂ ಇಂದು ಭಾರತ ಅಚಲ, 2047ಕ್ಕೆ ದೇಶ ವಿಕಸಿತ ಆಗಬೇಕು: ರಾಷ್ಟ್ರಪತಿ

### ಎಲ್ಲ ವರ್ಗಗಳಿಗೂ ಆದ್ಯತೆ

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ದಲಿತ, ಒಬಿಸಿ ವಿದ್ಯಾರ್ಥಿಗಳ ದೂರು ಆಲಿಸಲು ಸಮಿತಿ ರಚಿಸುವ ಯುಜಿಸಿ ನಿರ್ಧಾರಕ್ಕೆ ಸಾಮಾನ್ಯ ವರ್ಗದ ವಿದ್ಯಾರ್ಥಿಗಳ ಆಕ್ರೋಶ ವ್ಯಕ್ತವಾಗಿರುವ ನಡಯುವೆಯೇ, 'ಸರ್ಕಾರವು ಎಲ್ಲರಿಗೂ – ದಲಿತರು, ಹಿಂದುಳಿದ ವರ್ಗಗಳು, ಅಂಚಿನಲ್ಲಿರುವವರು ಮತ್ತು ಬುಡಕಟ್ಟು ಸಮುದಾಯಗಳ ಜತೆ– ಪೂರ್ಣ ಸಂವೇದನೆ ಯೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಸಾಮಾಜಿಕ ನ್ಯಾಯಕ್ಕೆ ಸರ್ಕಾರ ಬದ್ಧ' ಎಂದರು

### ಬಡವರ ಸಬಲೀಕರಣ

ಸರ್ಕಾರದ 3ನೇ ಅವಧಿಯಲ್ಲಿ, ಬಡವರನ್ನು ಮತ್ತಷ್ಟು ಸಬಲೀಕರಣಗೊಳಿಸುವ ಕೆಲಸ ಮಾಡಲಾಗುತ್ತಿದೆ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳು ಈಗ ಸುಮಾರು 95 ಕೋಟಿ ನಾಗರಿಕರಿಗೆ ಲಭ್ಯವಿವೆ. ಕಳೆದ 10 ವರ್ಷಗಳಲ್ಲಿ 25 ಕೋಟಿ ಭಾರತೀಯರು ಬಡತನದಿಂದ ಹೊರಬಂದಿದ್ದಾರೆ ಎಂದು ಹೇಳಿದರು.

### ಭ್ರಷ್ಟಾಚಾರಕ್ಕೆ ಅಂಕುಶ

ಭ್ರಷ್ಟಾಚಾರಮತ್ತು ಹಗರಣಗಳನ್ನು ಹತ್ತಿಕ್ಕುವಲ್ಲಿ ಮತ್ತು ಸಾರ್ವಜನಿಕ ನಿಧಿಯ ಸರಿಯಾದ ಬಳಕೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಸರ್ಕಾರ ಯಶಸ್ವಿಯಾಗಿದೆ. ಕಳೆದ 10 –11 ವರ್ಷಗಳಲ್ಲಿ, ಭಾರತವು ಪ್ರತಿಯೊಂದು ವಲಯದಲ್ಲೂ ತನ್ನ ಅಡಿಪಾಯವನ್ನು ಬಲಪಡಿಸಿದೆ' ಎಂದು ಅವರು ಹೇಳಿದರು.

### ವ್ಯಾಪಾರ ಒಪ್ಪಂದಕ್ಕೆ ಸಂತಸ

ಯುರೋಪ್ ಒಕ್ಕೂಟದೊಂದಿಗೆ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಿರುವುದನ್ನು ರಾಷ್ಟ್ರಪತಿಗಳು ಶ್ಲಾಘಿಸಿದರು, ಇದು ಉತ್ಪಾದನೆ ಮತ್ತು ಸೇವಾ ವಲಯಗಳಿಗೆ ಉತ್ತೇಜನ ನೀಡುತ್ತದೆ ಮತ್ತು ದೇಶದ ಯುವಕರಿಗೆ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ ಎಂದು ಹೇಳಿದರು.

### ಬಿಕ್ಕಟ್ಟು ನಡುವೆಯೂ ಸದೃಢ

ಕಳೆದ 11 ವರ್ಷಗಳಲ್ಲಿ, ದೇಶದ ಆರ್ಥಿಕ ಅಡಿಪಾಯ ಗಮನಾರ್ಹವಾಗಿ ಬಲಗೊಂಡಿದೆ ಮತ್ತು ವಿವಿಧ ಜಾಗತಿಕ ಬಿಕ್ಕಟ್ಟುಗಳ ಹೊರತಾಗಿಯೂ, ಭಾರತವು ವಿಶ್ವದಲ್ಲೇ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಉಳಿದಿದೆ ಎಂದು ಅವರು ಹೇಳಿದರು.

### ಬಾಹ್ಯಾಕಾಶ ವಿಕ್ರಮಕ್ಕೆ ಸಂತಸ

ಕಳೆದ ವರ್ಷ ಗಗನಯಾತ್ರಿ, ಶುಭಾಂಶು ಶುಕ್ಲಾ ಅವರು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕೈಗೊಂಡ ಯಾತ್ರೆ ಒಂದು ಐತಿಹಾಸಿಕ ಪ್ರಯಾಣದ ಆರಂಭವಾಗಿದೆ ಮತ್ತು ಬಾಹ್ಯಾಕಾಶ ಪ್ರವಾಸೋದ್ಯಮವು ಭಾರತದ ಕೈಗೆಟಕುವಂಥದ್ದಲ್ಲ ಎಂಬ ಊಹೆಗಳನ್ನು ಸುಳ್ಳು ಮಾಡಿದೆ. ಮುಂಬರುವ ವರ್ಷಗಳಲ್ಲಿ ದೇಶವು ಬಾಹ್ಯಾಕಾಶದಲ್ಲಿ ಭಾರತೀಯ ನಿಲ್ದಾಣವನ್ನು ಸ್ಥಾಪಿಸುವತ್ತ ಗಮನ ಹರಿಸಲಿದೆ. ಗಗನಯಾನ ಮಿಷನ್‌ನಲ್ಲಿ ದೇಶವು ಉತ್ಸಾಹದಿಂದ ಕೆಲಸ ಮಾಡುತ್ತಿದೆ ಎಂದು ಮುರ್ಮು ಹೇಳಿದರು.

Scanned with OKEN Scanner

ಪುಸ್ತಕ ಮ್ಯೂಸಿಯಂ ಸ್ಥಾಪನೆಯಾದ್ರೆ ನನ್ನ ಬದುಕು ಸಾರ್ಥಕ | ಕನ್ನಡಪ್ರಭ ಅಸಾಮಾನ್ಯ ಕನ್ನಡಿಗ, 'ಪದ್ಮಶ್ರೀ' ಪುರಸ್ಕೃತ ಎಂ.ಅಂಕೇಗೌಡ

# ಸಂಗ್ರಹಿಸಿರೋ ಪುಸ್ತಕಗಳಿಗೆ ಶಾಶ್ವತ ನೆಲೆ ಬೇಕು

**ಕನ್ನಡಪ್ರಭ ಸಂದರ್ಶನ**

ಮಂಡ್ಯ ಮಂಜುನಾಥ

ಮುಖಾ ಮುಖಿ

ಹರಿತ ಪ್ರಶ್ನೆ. ಚುರುಕು ಉತ್ತರ

**• ಡಿಜಿಟಲೀಕರಣ ಯುಗದಲ್ಲಿ ಓದಿನ ಬಗ್ಗೆ ಯುವಕರಿಗೆ ನಿಮ್ಮ ಸಲಹೆ ಏನು?**

ಇದು ಸರ್ಕಲ್ ರೀತಿ. ಎಲ್ಲಿ ಆರಂಭವಾಗುವುದೋ ಅಲ್ಲಿಗೇ ಬಂದು ನಿಲ್ಲಬೇಕು. ಮೂಲವನ್ನು ಹುಡುಕಿ ಬಂದಾಗ ಮತ್ತೆ ಪುಸ್ತಕ ಕಡೆಗೆ ಬರಲೇಬೇಕು. ಕಂಪ್ಯೂಟರ್, ತಂತ್ರಜ್ಞಾನ ಎಲ್ಲವೂ ಬೇಕು. ಆದರೆ, ಪುಸ್ತಕ ಸಂಸ್ಕೃತಿಯನ್ನು ಕಳೆದುಕೊಳ್ಳಬಾರದು. ಯುವಕರು ಓದಿನ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳಬೇಕು. ಯಾವುದೇ ಒಂದು ಪುಸ್ತಕವನ್ನು ಹಿಡಿದು ಓದಿದಾಗ ಸಿಗುವಷ್ಟು ಅನುಭವ, ತನ್ಮಯತೆ ಕಂಪ್ಯೂಟರ್‌ನಲ್ಲಿ ಓದುವುದರಿಂದ ಸಿಗುವುದಿಲ್ಲ.

ಪುಸ್ತಕವೇ ತಮ್ಮ ಉಸಿರು, ಬದುಕು ಎಂದು ಭಾವಿಸಿ ದುಡಿಮೆಯ ಬಹುತೇಕ ಭಾಗವನ್ನು ಪುಸ್ತಕ ಸಂಗ್ರಹಕ್ಕೆ ಖರ್ಚು ಮಾಡಿ 25ಲಕ್ಷಕ್ಕೂ ಹೆಚ್ಚು ಪುಸ್ತಕ ಸಂಗ್ರಹಿಸಿ ಅಪರೂಪದ ಸಾಧನೆ ಮಾಡಿರುವ ಮಂಡ್ಯ ಜಿಲ್ಲೆ ಪಾಂಡವಪುರದ ಎಂ. ಅಂಕೇಗೌಡ ಅವರು ಪ್ರತಿಷ್ಠಿತ 'ಪದ್ಮಶ್ರೀ' ಪ್ರಶಸ್ತಿಗೆ ಭಾಜನರಾಗಿದ್ದಾರೆ. 76ನೇ ವಯಸ್ಸಿನಲ್ಲೂ ಅವರ ಪುಸ್ತಕ ಸಂಗ್ರಹದ ದಾಹ ಇಂಗಿಲ್ಲ. ಈಗಲೂ ಮಹತ್ವದ್ದೆನಿಸಿದ ಪುಸ್ತಕಗಳನ್ನು ಎಷ್ಟೇ ಹಣ ಕೊಟ್ಟಾದರೂ ಖರೀದಿಸಿ ಪುಸ್ತಕ ಮನೆಯಲ್ಲಿ ಇಡುತ್ತಾರೆ. ಇಂತಹ ವಿಶಿಷ್ಟವಾದ ಪುಸ್ತಕ ಸಂಗ್ರಹ ಆರಂಭವಾದ ಬಗೆ, ಪುಸ್ತಕ ಮನೆಯಲ್ಲಿರುವ ಪುಸ್ತಕಗಳ ವಿಶೇಷತೆ, ಪಟ್ಟ ಶ್ರಮ, ಪುಸ್ತಕ ಮನೆಯ ಭವಿಷ್ಯದ ಕನಸಿನ ಬಗ್ಗೆ ಚರ್ಚಿಸಲು 'ಕನ್ನಡಪ್ರಭ'ದೊಂದಿಗೆ ಮುಖಾಮುಖಿಯಾಗಿದ್ದಾರೆ ಪುಸ್ತಕ ಮನೆಯ ಎಂ.ಅಂಕೇಗೌಡ.

**• ರಾಷ್ಟ್ರದ ಅತ್ಯುನ್ನತ ಪದ್ಮಶ್ರೀ ಪ್ರಶಸ್ತಿ ಬಂದಿದೆ. ಈ ಬಗ್ಗೆ ನಿಮಗೆ ಹೇಗನಿಸುತ್ತೆ?**

ನಾನೆಂದೂ ಪ್ರಶಸ್ತಿಗಳ ಹಿಂದೆ ಹೋದವನಲ್ಲ. ಬೇಕಿದ್ದರೆ ನನಗೆ ಬಂದಿರುವ ಪ್ರಶಸ್ತಿಗಳನ್ನೆಲ್ಲ ವಾಪಸ್ ತೆಗೆದುಕೊಳ್ಳಲಿ. ನನ್ನಲ್ಲಿರುವ ಪುಸ್ತಕಗಳಿಗೊಂದು ಆಶ್ರಯ ಕಲ್ಪಿಸಿದರಷ್ಟೇ ಸಾಕು. ನನ್ನನ್ನು ಗುರುತಿಸಿ ಪದ್ಮಶ್ರೀ ಪ್ರಶಸ್ತಿ ನೀಡಿರುವುದು ಸಂತೋಷ, ಖುಷಿ ಕೊಟ್ಟಿದೆ. ಅದೇ ಆಸಕ್ತಿ, ಪ್ರೀತಿಯನ್ನು ಪುಸ್ತಕಗಳ ವ್ಯವಸ್ಥಿತ ಜೋಡಣೆಗೆ, ಓದುಗರ ವೀಕ್ಷಣೆಗೆ, ಅಧ್ಯಯನಕ್ಕೆ ನೀಡಬೇಕೆಂಬುದು ನನ್ನ ಅಭಿಪ್ರಾಯ.

**• ಪ್ರಚಾರದಿಂದ ಸದಾ ದೂರ ಇರುವ ನಿಮ್ಮ ನಿರೀಕ್ಷೆ, ಹಂಬಲವೇನು?**


ನನಗೆಪ್ರಚಾರಬೇಕಿಲ್ಲ.ಪುಸ್ತಕಗಳುಬೇಕು.ನಾನುಬದುಕಿರುವ ಸಮಯದಲ್ಲೇ ಈ ಎಲ್ಲಾ ಪುಸ್ತಕಗಳು ಅಚ್ಚುಕಟ್ಟಾಗಿ ಜೋಡಣೆಯಾಗಬೇಕು. ಅದಕ್ಕೆ 10 ಎಕರೆ ಭೂಮಿ, ಅದರಲ್ಲೊಂದು ಭವ್ಯವಾದ ಸುಂದರ ಕಟ್ಟಡ. ಎಲ್ಲಾ ಪುಸ್ತಕಗಳನ್ನು ವಿಂಗಡಿಸಿ ವ್ಯವಸ್ಥಿತ ರೀತಿಯಲ್ಲಿ ಜೋಡಿಸಿಡಬೇಕು. ಓದುಗರಿಗೆ ಇಂಥ ಪುಸ್ತಕ, ಇದೇ ಸ್ಥಳದಲ್ಲಿದೆ ಎಂಬ ಮಾಹಿತಿ ಸುಲಭವಾಗಿ ಸಿಗಬೇಕು. ಅದೊಂದು ಪುಸ್ತಕ ಮ್ಯೂಸಿಯಂ ಆಗಿರಬೇಕು. ಯಾರಿಂದಲೂ ಒಂದು ರುಪಾಯಿ ಹಣವನ್ನೂ ಪಡೆಯದೆ ಓದುಗರಿಗೆ ಉಚಿತವಾಗಿ ಪುಸ್ತಕಗಳು ಸಿಗಬೇಕು. ಅಲ್ಲೊಂದು ಗಾರ್ಡನ್ ಇರಬೇಕು. ಬರುವವರು ತಂಗಲು ವಿಶ್ರಾಂತಿ ಕೊಠಡಿಗಳಿರಬೇಕು. ಕ್ಯಾಂಟೀನ್, ಕುಡಿಯುವ ನೀರಿನ ವ್ಯವಸ್ಥೆ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಿಕೊಡುವಂಥ ಮನಸ್ಸು ಸರ್ಕಾರಗಳಿಗೆ ಬರಬೇಕು. ಆಗ ಪುಸ್ತಕ ಸಂಗ್ರಹದ ಉದ್ದೇಶ, ನನ್ನ ಬದುಕು ಎರಡೂ ಸಾರ್ಥಕಗೊಳ್ಳುತ್ತದೆ. ಇದಿಷ್ಟೇ ನನ್ನ ಬದುಕಿನ ಕೊನೆಯ ಆಸೆ.

**• ಪುಸ್ತಕ ಸಂಗ್ರಹಿಸುವ ಹವ್ಯಾಸ ಆರಂಭವಾಗಿದ್ದು ಹೇಗೆ? ಸ್ಫೂರ್ತಿ ಯಾರು?**

ನಾನು ಮೂಲತಃ ಹಳ್ಳಿಯಿಂದ ಬಂದವನು. ಹೈಸ್ಕೂಲ್‌ವರೆಗೆ ಲೈಬ್ರರಿಯನ್ನೇ ನೋಡಿರಲಿಲ್ಲ. ನನಗೆ ಸಣ್ಣ ವಯಸ್ಸಿನಿಂದಲೂ ಪುಸ್ತಕಗಳನ್ನು ಕಂಡರೆ ಬಹಳ ಪ್ರೀತಿ. ರಾಮಕೃಷ್ಣ ಆಶ್ರಮದ ಪುಸ್ತಕಗಳನ್ನು ಓದಿ ಆಕರ್ಷಿತನಾದೆ. ಮಹಾರಾಜ ಕಾಲೇಜಿನ ವಿದ್ಯಾಗುರು ಕೆ.ಅನಂತರಾಮ್ ಅವರು ಜಗತ್ತಿನ ಒಳ್ಳೆಯ ಪುಸ್ತಕಗಳನ್ನು ಸಂಗ್ರಹಿಸುವಂತೆ ಹೇಳಿದ ಮಾತು ಪುಸ್ತಕಗಳ ಸಂಗ್ರಹಕ್ಕೆ ಸ್ಫೂರ್ತಿಯಾಯಿತು.

**• ಪುಸ್ತಕ ಖರೀದಿಗೆ ನಿವೇಶನ ಕೂಡ ಮಾರಾಟ ಮಾಡಿದರಂತೆ? ಕಷ್ಟದಲ್ಲಿ ನಿಮ್ಮ ಕೈಹಿಡಿದವರು ಯಾರು?**

ನಾನು ಪುಸ್ತಕ ಖರೀದಿಗೆ ನಿವೇಶನವೊಂದನ್ನು ಮಾರಾಟ



**ಎಂ.ಅಂಕೇಗೌಡ**
ಸಂಸ್ಥಾಪಕರು, ಅಂಕೇಗೌಡ ಪುಸ್ತಕ ಮನೆ
ಪಾಂಡವಪುರ, ಮಂಡ್ಯ ಜಿಲ್ಲೆ

ಮಾಡಿದೆ. ನನಗೆ ಕಷ್ಟ ಕೈ ಹಿಡಿಯಿರಿ ಎಂದು ಯಾರ ಮನೆ ಬಾಗಿಲಿಗೂ ಹೋಗಲಿಲ್ಲ. ಹಣಕ್ಕಾಗಿ ಕೈಚಾಚಲೂ ಇಲ್ಲ. ಇದೆಲ್ಲವನ್ನೂ ಪುಸ್ತಕದ ಮೇಲಿನ ಪ್ರೀತಿಯಿಂದ ಮಾಡಿದೆ. ನನ್ನನ್ನು ಕೆಲವರು ಪುಸ್ತಕಗಳ ಸಂತ ಎನ್ನುತ್ತಾರೆ. ಆ ಭಾವನೆ ನನ್ನಲ್ಲಿಲ್ಲ. ನಾನೊಬ್ಬ ಸಾಮಾನ್ಯ ಮನುಷ್ಯ. ಒಪ್ಪತ್ತು ಗಂಜಿ ಕುಡಿಯುವೆ, ಒಂದು ಹೊತ್ತು ಊಟ ಮಾಡುವೆ. ಅದಕ್ಕೆ ಎಷ್ಟು ಹಣ ಬೇಕೋ ಅಷ್ಟು ನನ್ನಲ್ಲಿದೆ. ಈ ಪುಸ್ತಕ ಮನೆ ಮೇಲೆ ನನ್ನ ಕುಟುಂಬದವರಿಗೆ ಯಾವುದೇ ಅಧಿಕಾರವಿಲ್ಲ. ಇದು ಸಾರ್ವಜನಿಕರ ಆಸ್ತಿ. ನನಗೆ ಹಣ ಮಾಡಬೇಕೆಂಬ ಆಸೆ ಇಲ್ಲ. ನಾನು ಕಷ್ಟಪಟ್ಟು ಸಂಗ್ರಹಿಸಿರುವ ಪುಸ್ತಕಗಳಿಗೊಂದು ಶಾಶ್ವತ ನೆಲೆ ಸಿಗಬೇಕು. ಅಲ್ಲಿಗೆ ನಿತ್ಯ ನೂರಾರು ವಿದ್ಯಾರ್ಥಿಗಳು, ಸಂಶೋಧಕರು, ಪುಸ್ತಕ ಪ್ರೇಮಿಗಳು ಬರಬೇಕು. ಅವರ ಜ್ಞಾನದಾಹವನ್ನು ನನ್ನ ಪುಸ್ತಕಗಳು ತಣಿಸಬೇಕು. ಇದರಿಂದ ಅವರ ಭವಿಷ್ಯ ಉಜ್ವಲವಾಗಬೇಕೆನ್ನುವುದಷ್ಟೇ ನನ್ನ ಕನಸು. ಆ ಕನಸು ನನಸಾದರೆ ಅದೇ ನನಗೆ ಸ್ವರ್ಗ. ಈಗಲೂ ನನ್ನ ಪುಸ್ತಕ ಲೋಕದೊಳಗಿರುವುದನ್ನೇ ನಾನು ಬಯಸುತ್ತೇನೆ. ಇದು ನನಗೆ ಅತ್ಯಂತ ಪ್ರಿಯವಾದ ಸ್ಥಳ. ಓದಲು ಬರುವ ಜನರೆಲ್ಲರಿಗೂ ಪುಸ್ತಕ ಮನೆಗೆ ಸದಾ ಸ್ವಾಗತ.

**• ನಿಮ್ಮ ಪುಸ್ತಕಾಲಯದಲ್ಲಿ ಇರುವ ಪುಸ್ತಕಗಳ ಸಂಗ್ರಹ ಎಷ್ಟು? ಯಾವ ಯಾವ ಕೃತಿಗಳು ಇವೆ?**

ಪುಸ್ತಕ ಮನೆಯಲ್ಲಿ 25 ಲಕ್ಷ ಪುಸ್ತಕಗಳಿವೆ. ಕನ್ನಡ, ಇಂಗ್ಲೀಷ್, ಹಿಂದಿ, ತಮಿಳು, ತೆಲುಗು, ಮಲಯಾಳಂ, ಉರ್ದು, ಕೊಡವ, ಕೊಂಕಣಿ, ತುಳು ಸೇರಿದಂತೆ ಇನ್ನೂ ಅನೇಕ ಭಾಷೆಯ ಪುಸ್ತಕಗಳಿವೆ. ಎರಡೂವರೆ ಸಾವಿರ ಭಗವದ್ಗೀತೆ, ಮೂರು ಸಾವಿರ ರಾಮಾಯಣ ಗ್ರಂಥಗಳಿವೆ. ಕಾವ್ಯ, ವಿಮರ್ಶೆ, ಗದ್ಯ, ವ್ಯಾಖ್ಯಾನ ಹೀಗೆ ಎಲ್ಲಾ ಮಾದರಿಗಳಲ್ಲೂ ಓದಲು ಸಿಗಲಿವೆ. ಕನ್ನಡ ಕವಿವರ್ಯರ ಎಲ್ಲಾ ಕೃತಿಗಳು, ಕಾದಂಬರಿಗಳು, ಜ್ಞಾನಪೀಠ ಪ್ರಶಸ್ತಿ ಪಡೆದವರ ಪುಸ್ತಕಗಳು, ಲೇಖಕರ ಸಮಗ್ರ ಕೃತಿಗಳು, 15 ಭಾಷೆಯಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದವರ ಅನುವಾದಿತ ಕೃತಿಗಳು ಇವೆ.

**• ಅತ್ಯಮೂಲ್ಯ ಪುಸ್ತಕಗಳನ್ನು ನೀವು ಸಂಗ್ರಹಿಸಿದ್ದು ಹೇಗೆ?**

ಗೋದಾಮಿನಿಂದ ಹಿಡಿದು ಬುಕ್ ಹೌಸ್‌ಗಳವರೆಗೆ ಸುತ್ತಾಡಿದ್ದೇನೆ. 37ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗಿಯಾಗಿದ್ದೇನೆ. ಮೈಸೂರು, ಬೆಂಗಳೂರು, ನವೆಂಬರ್‌ತಿಂಗಳಲ್ಲಿ ರಿಯಾಯಿತಿ ದರದಲ್ಲಿ ಮಾರಾಟ ಮಾಡುವ ಪುಸ್ತಕದ ಅಂಗಡಿಗಳಿಗೆ ಅಲೆದಾಡಿದ್ದೇನೆ. ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಅಕಾಡೆಮಿ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹೀಗೆ ಪುಸ್ತಕಗಳಿಗಾಗಿ ಖುಷಿಯಿಂದ ಸುತ್ತಾಡಿದ್ದೇನೆ. ಅತ್ಯಮೂಲ್ಯವಾದ ಪುಸ್ತಕಗಳನ್ನು ಸಂಗ್ರಹಿಸಿದ್ದೇನೆ. ಪುಸ್ತಕಗಳ ಖರೀದಿಗೆ ಖರ್ಚಾದ ಹಣ ಎಷ್ಟು ಎಂದು ನಾನು ಲೆಕ್ಕ ಇಟ್ಟಿಲ್ಲ, ಅಂದಾಜನ್ನೂ ಹೇಳಲಾರೆ. ಒಟ್ಟಾರೆ 33 ವರ್ಷದಲ್ಲಿ ನನ್ನ ದುಡಿಮೆಯ ಶೇ.70ರಷ್ಟು ಹಣವನ್ನು ಪುಸ್ತಕಗಳ ಖರೀದಿಗೇ ಹಾಕಿದ್ದೇನೆ. ಉಳಿದ ಶೇ.30ರಷ್ಟು ಹಣದಲ್ಲಿ ನನ್ನ ಜೀವನ ನಡೆಸಿಕೊಂಡು ಬಂದಿದ್ದೇನೆ. ಪುಸ್ತಕಕ್ಕೆ ಹಣ ಸಾಲದೆಂಬ ಕಾರಣಕ್ಕೆ ಹಸುವನ್ನು ಸಾಕಿ ಹಾಲು ಮಾರಿ ಅದರಿಂದ ಬಂದ ಹಣವನ್ನೂ ಪುಸ್ತಕ ಸಂಗ್ರಹಕ್ಕೆ ಹಾಕಿದ್ದೇನೆ. ನನ್ನ ಹೆಸರಿನಲ್ಲಿದ್ದ ಒಂದು ನಿವೇಶನವನ್ನೂ ಮಾರಿ ಅದರಿಂದ ಬಂದ ಹಣದಲ್ಲಿ ಪುಸ್ತಕಗಳನ್ನು ಖರೀದಿಸಿ ಪುಸ್ತಕ ಮನೆಯೊಳಗೆ ಸೇರಿಸಿದ್ದೇನೆ.

**• ಪುಸ್ತಕ ಮನೆಗೆ ಈವರೆಗೆ ಭೇಟಿ ನೀಡಿರುವ ಗಣ್ಯರು ಯಾರ್‍ಯಾರು? ಬಂದಂಥ ಪ್ರಶಸ್ತಿಗಳ ಸಂಖ್ಯೆ ಎಷ್ಟು?**

ಪುಸ್ತಕ ಮನೆಗೆ ಸುಪ್ರೀಂಕೋರ್ಟ್ ಜಸ್ಟೀಸ್ ವೆಂಕಟಾಚಲಯ್ಯ, ಅಮೆರಿಕ ಹೈಕೋರ್ಟ್ ಜಡ್ಜ್ ಥಾಮ್ಸನ್, ನ್ಯಾಯಮೂರ್ತಿ ಗೋಪಾಲಗೌಡ, ನಾಡೋಜ ದೇ. ಜವರೇಗೌಡ, ಹಿರಿಯ ಸಾಹಿತಿ ಎಸ್.ಎಲ್.ಭೈರಪ್ಪ, ಸಾಹಿತಿ-ನಿರ್ದೇಶಕ ನಾಗತೀಹಳ್ಳಿ ಚಂದ್ರಶೇಖರ್, ಕಾಂಗ್ರೆಸ್ ಯುವ ನಾಯಕ ರಾಹುಲ್‌ಗಾಂಧಿ, ಇನ್ಫೋಸಿಸ್‌ನ ಕೆ. ಸುಧಾಮೂರ್ತಿ, ಆದಿ ಚುಂಚನ ಗಿರಿಯ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೀಗೆ ಅನೇಕ ಗಣ್ಯಮಹಾಶಯರು ಭೇಟಿ ನೀಡಿ ವೀಕ್ಷಣೆ ಮಾಡಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.ಕೆಲವರುತಮ್ಮಅನಿಸಿಕೆ-ಅಭಿಪ್ರಾಯಗಳನ್ನು ಪುಸ್ತಕದಲ್ಲಿ ಬರೆದಿದ್ದಾರೆ. ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ವಿಶ್ವಪುಸ್ತಕ ಮೇಳದಲ್ಲಿ ನನ್ನ ಸಂಗ್ರಹದ ಪುಸ್ತಕ ಮಳಿಗೆಗೆ ಅತ್ಯುತ್ತಮ ಪುಸ್ತಕ ಸಂಗ್ರಹ ಮಳಿಗೆ ಎಂದು ಪ್ರಶಂಸಿಸಿ ನಟ ಪುನೀತ್‌ರಾಜ್‌ಕುಮಾರ್‌ಅವರಿಂದ ಪ್ರಶಸ್ತಿಯನ್ನು ಕೊಡಲಾಗಿತ್ತು. ಉಳಿದಂತೆ ಲಿಮ್ಕಾ ಬುಕ್ ಆಫ್ ಅವಾರ್ಡ್ಸ್, ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್, ರಾಜ್ಯೋತ್ಸವ ಪ್ರಶಸ್ತಿ, ಕನ್ನಡಪ್ರಭ ಪತ್ರಿಕೆಯಿಂದ ಅಸಾಮಾನ್ಯ ಕನ್ನಡಿಗ ಪ್ರಶಸ್ತಿ, ಪಬ್ಲಿಕ್ ಹೀರೋ, ನಮ್ಮ ಬಾಹುಬಲಿ, ಏಳನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಸ್ಥಾನ ಸೇರಿ ವಿವಿಧ ಸಂಘ ಸಂಸ್ಥೆಗಳಿಂದ ನೂರಾರು ಪ್ರಶಸ್ತಿಗಳು ಬಂದೊದಗಿವೆ.

**• ನಿಮ್ಮ ಪುಸ್ತಕ ಸಂಗ್ರಹಾಲಯದಲ್ಲಿ ಯಾವ ಯಾವ ಭಾಷೆಯ ಎಷ್ಟು ಪುಸ್ತಕಗಳು ಇವೆ?**

ಹತ್ತು ಲಕ್ಷ ಕನ್ನಡ ಪುಸ್ತಕಗಳು, ಐದು ಲಕ್ಷ ಇಂಗ್ಲಿಷ್, 10 ಸಾವಿರ ತಮಿಳು, ತೆಲುಗಿನ ತಲಾ ಹತ್ತು ಸಾವಿರ, ಐದು ಸಾವಿರ ಉರ್ದು, ಪರ್ಷಿಯನ್ ಭಾಷೆಯ ಪುಸ್ತಕಗಳು, ಕೊಡವ, ಕೊಂಕಣಿ, ತುಳು ಸೇರಿ ಇನ್ನಿತರ ಭಾಷೆಯ ಐದು ಸಾವಿರ ಪುಸ್ತಕಗಳು ಇವೆ. ಎರಡೂವರೆ ಸಾವಿರ ಭಗವದ್ಗೀತೆ, ಐದು ಸಾವಿರ ಡಿಕ್ಷನರಿಗಳು, 100 ಕುರಾನ್, 500 ಬೈಬಲ್, ಎರಡೂವರೆ ಸಾವಿರ ರಾಮಾಯಣ, ಮಹಾಭಾರತ ಎಲ್ಲವೂ ನನ್ನ ಪುಸ್ತಕ ಮನೆಯಲ್ಲಿ ಅಡಕವಾಗಿವೆ.



Scanned with OKEN Scanner

# ಪ್ರಾಚೀನ ಜ್ಞಾನದಿಂದ ಆಧುನಿಕ ಶಿಕ್ಷಣಕ್ಕೆ ಪಯಣ

## ಎನ್‌ಇಪಿ 2020ರ ಅಡಿ ಆಧುನಿಕ ಬದಲಾವಣೆಗಳನ್ನು ಪ್ರದರ್ಶಿಸಿದ ಶಾಲಾ ಶಿಕ್ಷಣ ಇಲಾಖೆಯ ಟ್ಯಾಬ್ಲೋ



**ನವದೆಹಲಿ:** ಗಣರಾಜ್ಯೋತ್ಸವದ ಮೆರವಣಿಗೆಯಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಟ್ಯಾಬ್ಲೋವನ್ನು ಪ್ರದರ್ಶಿಸಲಾಯಿತು. ಇದು ಭಾರತದ ಪ್ರಾಚೀನ ಜ್ಞಾನ ಸಂಪ್ರದಾಯ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) 2020ರ ಅಡಿಯಲ್ಲಿ ನಡೆಯುತ್ತಿರುವ ಆಧುನಿಕ ಬದಲಾವಣೆಗಳನ್ನು ಪ್ರದರ್ಶಿಸಿತು. ಈ ಟ್ಯಾಬ್ಲೋ 'ಅಭಿವೃದ್ಧಿ ಹೊಂದಿದ ಭಾರತ 2047' ಗೆ ಶಾಲಾ ಶಿಕ್ಷಣವು ಪ್ರಮುಖ ಆಧಾರಸ್ತಂಭವಾಗಿದೆ ಎಂಬುದನ್ನು ಪ್ರಸ್ತುತಪಡಿಸಿತು.

ಈ ಟ್ಯಾಬ್ಲೋದ ಕತೆ ಪ್ರಾಚೀನ ಭಾರತದ ಜ್ಞಾನ ಸಂಪ್ರದಾಯದೊಂದಿಗೆ ಪ್ರಾರಂಭವಾಗಿ ಭವಿಷ್ಯಕ್ಕೆ ಸಿದ್ಧವಾದ ಶಿಕ್ಷಣ ವ್ಯವಸ್ಥೆಯತ್ತ ಸಾಗುತ್ತದೆ. ಟ್ಯಾಬ್ಲೋದ ಕೇಂದ್ರ ಸಂಕೇತವಾಗಿ ಕಾರ್ಯನಿರ್ವಹಿಸುತ್ತಿದ್ದ ಪಿಎಂ ಶ್ರೀ ಶಾಲೆಯ ಪ್ರವೇಶದ್ವಾರದಲ್ಲಿ ಈ ಸಂಪೂರ್ಣ ಪರಿಕಲ್ಪನೆಯನ್ನು ಪ್ರಸ್ತುತಪಡಿಸಲಾಯಿತು.

ಟ್ಯಾಬ್ಲೋದ ಮುಂಭಾಗದಲ್ಲಿ ಆರ್ಯಭಟನ ಪ್ರತಿಮೆ ಇದ್ದು, ಅದರ ಪಕ್ಕದಲ್ಲಿ 'ಶೂನ್ಯ' ಮತ್ತು ಭೂಮಿಯ ಗೋಳವನ್ನು ಹಿಡಿದು ನಗುತ್ತಿರುವ ಮಕ್ಕಳು ಇದ್ದರು. ಇದು ಜಾಗತಿಕ ಜ್ಞಾನಕ್ಕೆ ಭಾರತದ ಕೊಡುಗೆಯನ್ನು ಮತ್ತು ಆ ಪರಂಪರೆಯನ್ನು ಭವಿಷ್ಯದ ಪೀಳಿಗೆಗೆ ರವಾನಿಸುವುದನ್ನು ಸಂಕೇತಿಸುತ್ತದೆ.

ಮಕ್ಕಳ ಹಿಂದಿನ ರೆಕ್ಕೆಗಳು ಎನ್‌ಇಪಿ 2020 ಅನ್ನು ಪ್ರತಿನಿಧಿಸುತ್ತಿದ್ದವು. ಇದು ಸ್ವಾವಲಂಬನೆಯ ಆಧಾರದ ಮೇಲೆ ಆತ್ಮವಿಶ್ವಾಸ, ಅವಕಾಶ ಮತ್ತು ಜಾಗತಿಕ ಸಿದ್ಧತೆಯನ್ನು ಉತ್ತೇಜಿಸುತ್ತದೆ.

ವಿಆರ್ ಹೆಡ್‌ಸೆಟ್‌ಗಳನ್ನು ಧರಿಸಿದ ಮಕ್ಕಳು 'ಪ್ರಾಚೀನ ಬೇರುಗಳು, ಡಿಜಿಟಲ್ ರೆಕ್ಕೆಗಳು' ಎಂಬ ಪರಿಕಲ್ಪನೆಯನ್ನು ಪ್ರದರ್ಶಿಸಿದರು. 'ಮ್ಯಾಜಿಕ್ ಬಾಕ್ಸ್' ಭಾರತೀಯ ಆಟಿಕೆಗಳು ಮತ್ತು ಬಹುಭಾಷಾ ವಿಷಯವನ್ನು ಬಳಸಿಕೊಂಡು ಮಾತೃಭಾಷೆಯಲ್ಲಿ ಆಟ ಆಧಾರಿತ ಮತ್ತು ಸಂತೋಷದಾಯಕ ಮೂಲಭೂತ ಶಿಕ್ಷಣವನ್ನು ಪ್ರದರ್ಶಿಸಿತು.

ಟ್ಯಾಬ್ಲೋದಲ್ಲಿ ಪಿಎಂ ಶ್ರೀ ಶಾಲೆಯ ದ್ವಾರದಲ್ಲಿ ಮಕ್ಕಳು ಸಸಿಗಳನ್ನು ನೆಡುವುದನ್ನು ಒಳಗೊಂಡಿತ್ತು. ಇದು ಸಮಗ್ರ ಶಿಕ್ಷಣ, ಪರಿಸರ ಜಾಗೃತಿ ಪ್ರತಿಬಿಂಬಿಸುತ್ತದೆ.

## ಕೌಶಲ್ಯ ಶಿಕ್ಷಣದ ಮಹತ್ವ

ಪ್ರಾಥಮಿಕ ಹಂತದಿಂದಲೇ ಕೌಶಲ್ಯ ಶಿಕ್ಷಣದ ಮಹತ್ವವನ್ನು, ಉಪಕರಣಗಳನ್ನು ಹೊಂದಿರುವ ವಿದ್ಯಾರ್ಥಿಯನ್ನು ಚಿತ್ರಿಸುವ ಮೂಲಕ ಎತ್ತಿ ತೋರಿಸಲಾಯಿತು. ಟ್ಯಾಬ್ಲೋದ ಕೇಂದ್ರ ಭಾಗವು ಸಮರ ಕಲೆಗಳು, ಪ್ರದರ್ಶನ ಕಲೆಗಳು ಮತ್ತು ಕ್ರೀಡೆಗಳನ್ನು ಶಿಕ್ಷಣದೊಂದಿಗೆ ಸಂಯೋಜಿಸಿ, ಸಮಗ್ರ ಅಭಿವೃದ್ಧಿಯ ಸಂದೇಶ ಸಾರಿತು. ರೋಬೋಟಿಕ್ ತೋಳು ಸಂಪ್ರದಾಯ ಮತ್ತು ತಂತ್ರಜ್ಞಾನದ ಸಮ್ಮಿಲನವನ್ನು ಪ್ರದರ್ಶಿಸಿತು, ಸ್ಮಾರ್ಟ್ ತರಗತಿ ಕೊಠಡಿಗಳು, ಟಿಂಕರಿಂಗ್ ಲ್ಯಾಬ್‌ಗಳು ಮತ್ತು ನಾವೀನ್ಯತೆ ಕೇಂದ್ರಗಳನ್ನು ಪ್ರದರ್ಶಿಸುವ ಮೂಲಕ ಅಭಿವೃದ್ಧಿ ಹೊಂದಿದ ಭಾರತ 2047 ಟವರ್‌ನಲ್ಲಿ ಟ್ಯಾಬ್ಲೋ ಮುಕ್ತಾಯಗೊಂಡಿತು.

Scanned with OKEN Scanner

# ಕೇಂದ್ರ-ರಾಜ್ಯ ತೆರಿಗೆ ಪಾಲು ಬಜೆಟ್‌ನಲ್ಲಿ ಬಹಿರಂಗ

## ಹದಿನಾರನೇ ಹಣಕಾಸು ಆಯೋಗದ ಶಿಫಾರಸು ಪರಿಗಣಿಸಲಿರುವ ಕೇಂದ್ರ ವಿತ್ತ ಸಚಿವಾಲಯ

**ನವದೆಹಲಿ:** ಮುಂಬರುವ 2026-27ರ ಬಜೆಟ್‌ನಲ್ಲಿ 16ನೇ ಹಣಕಾಸು ಆಯೋಗದ ಶಿಫಾರಸುಗಳನ್ನು ಕೇಂದ್ರ ಸರ್ಕಾರ ಅಳವಡಿಸಿಕೊಳ್ಳಲಿದೆ. ಅರವಿಂದ್ ಪನಗಾರಿಯಾ ನೇತೃತ್ವದ ಆಯೋಗ ಈಗಾಗಲೇ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ವರದಿ ಸಲ್ಲಿಸಿದ್ದು, ಅದರ ಪ್ರತಿಗಳನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೂ ನೀಡಲಾಗಿದೆ.



ಕೇಂದ್ರ ಮತ್ತು ರಾಜ್ಯಗಳ ನಡುವೆ ತೆರಿಗೆ ಹಂಚಿಕೆಯ ಸೂತ್ರವನ್ನು ಈ ಆಯೋಗ ನಿರ್ಧರಿಸುತ್ತದೆ. 2026ರ ಏ.1ರಿಂದ 2031ರ ಮಾ. 31ರವರೆಗಿನ ಐದು ವರ್ಷಗಳ ಅವಧಿಗೆ ಸಂಬಂಧಿಸಿದಂತೆ ತೆರಿಗೆಗಳ ಹಂಚಿಕೆ, ರಾಜ್ಯಗಳಿಗೆ ನೀಡಬೇಕಾದ ಅನುದಾನ ಮತ್ತು ವಿಪತ್ತು ನಿರ್ವಹಣಾ ನಿಧಿಯ ಕುರಿತು ಆಯೋಗ ತನ್ನ ಪ್ರಮುಖ ಶಿಫಾರಸುಗಳನ್ನು ನೀಡಿದೆ.

ಈ ಹಿಂದೆ ಎನ್.ಕೆ. ಸಿಂಗ್ ನೇತೃತ್ವದ 15ನೇ ಹಣಕಾಸು ಆಯೋಗ ಕೇಂದ್ರದ ತೆರಿಗೆ ಪೂಲ್‌ನಿಂದ ರಾಜ್ಯಗಳಿಗೆ ಶೇ. 41ರಷ್ಟು ಪಾಲು ನೀಡಲು ಶಿಫಾರಸು ಮಾಡಿತ್ತು. 14ನೇ ಆಯೋಗ ಈ ಪಾಲನ್ನು ಶೇ. 32ರಿಂದ 42ಕ್ಕೆ ಏರಿಸಿತ್ತು. ತೆರಿಗೆ ಹಂಚಿಕೆಯನ್ನು ಜನಸಂಖ್ಯೆ, ವಿಸ್ತೀರ್ಣ, ಜನಸಂಖ್ಯಾ ಸಾಧನೆ ಮತ್ತು ಅರಣ್ಯ ವ್ಯಾಪ್ತಿಯಂತಹ ಮಾನದಂಡಗಳ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ.

ಆದರೆ, ಜನಸಂಖ್ಯೆಯನ್ನು ಮಾನದಂಡವಾಗಿ ಬಳಸುವ ವಿಷಯದಲ್ಲಿ ಕೇಂದ್ರ ಮತ್ತು ದಕ್ಷಿಣದ ರಾಜ್ಯಗಳ ನಡುವೆ ದೀರ್ಘಕಾಲದ ಭಿನ್ನಾಭಿಪ್ರಾಯವಿದೆ. ಜನಸಂಖ್ಯಾ ನಿಯಂತ್ರಣದಲ್ಲಿ ಯಶಸ್ವಿಯಾದ ರಾಜ್ಯಗಳಿಗೆ ಇದರಿಂದ ಅನ್ಯಾಯವಾಗುತ್ತಿದೆ ಎಂಬುದು ದಕ್ಷಿಣದ ರಾಜ್ಯಗಳ ವಾದ. ವರದಿ ಬಹಿರಂಗಗೊಂಡ ನಂತರ, ಹೊಸ ಆಯೋಗ ರಾಜ್ಯಗಳ ಪಾಲನ್ನು ಎಷ್ಟು ನಿಗದಿಪಡಿಸಿದೆ ಎಂಬುದು ಕುತೂಹಲ ಮೂಡಿಸಿದೆ. ಮೊದಲಿನಿಂದಲೂ ಆಯೋಗದ ಶಿಫಾರಸುಗಳನ್ನು ಕೇಂದ್ರ ಸರ್ಕಾರ ಅಂಗೀಕರಿಸುತ್ತ ಬಂದಿದ್ದು, ಈ ಬಾರಿಯೂ ಅದೇ ನಿರೀಕ್ಷೆಯಿದೆ.

### ವರದಿಯ ಅಂಶಗಳು ಇನ್ನೂ ರಹಸ್ಯ...

ಹದಿನಾರನೇ ಆಯೋಗದ ವರದಿಯಲ್ಲಿರುವ ಅಂಶಗಳನ್ನು ಇನ್ನೂ ಬಹಿರಂಗಪಡಿಸಿಲ್ಲ. ಸಾಮಾನ್ಯವಾಗಿ ಕೇಂದ್ರ ಸರ್ಕಾರ ಸಂಸತ್ತಿನಲ್ಲಿ ಮಂಡಿಸುವವರೆಗೆ ಗೌಪ್ಯವಾಗಿಡಲಾಗುತ್ತದೆ. ಆದ್ದರಿಂದ, ಈ ಬಾರಿ ರಾಜ್ಯಗಳಿಗೆ ಎಷ್ಟು ಪಾಲು ಸಿಗಲಿದೆ ಎಂಬುದು ಅಧಿಕೃತವಾಗಿ ತಿಳಿದುಬಂದಿಲ್ಲ. ಅನೇಕ ರಾಜ್ಯಗಳು, ವಿಶೇಷವಾಗಿ ದಕ್ಷಿಣದ ರಾಜ್ಯಗಳು, ತಮ್ಮ ಪಾಲನ್ನು ಶೇ. 41ರಿಂದ ಶೇ. 50ಕ್ಕೆ ಏರಿಸಬೇಕೆಂದು ಬೇಡಿಕೆ ಇಟ್ಟಿವೆ. ತೆರಿಗೆ ಹಂಚಿಕೆಯಲ್ಲಿ ಜನಸಂಖ್ಯೆಗಿಂತ ಹೆಚ್ಚಾಗಿ 'ಆರ್ಥಿಕ ಕಾರ್ಯಕ್ಷಮತೆ' ಮತ್ತು 'ತೆರಿಗೆ ಸಂಗ್ರಹದ ದಕ್ಷತೆ'ಗೆ ಆದ್ಯತೆ ನೀಡಬೇಕೆಂದು ಕೆಲವು ರಾಜ್ಯಗಳು ಒತ್ತಾಯಿಸಿವೆ. ಕೇಂದ್ರ ಬಜೆಟ್ ಮಂಡನೆ ವೇಳೆ ಆಯೋಗದ ವರದಿಯ ಶಿಫಾರಸುಗಳು ಮತ್ತು ರಾಜ್ಯಗಳಿಗೆ ಸಿಗಲಿರುವ ನಿಖರವಾದ ಪಾಲಿನ ಮಾಹಿತಿ ಹೊರಬೀಳುವ ಸಾಧ್ಯತೆಯಿದೆ.

Scanned with OKEN Scanner

## ಸದನದಲ್ಲಿ ತುಳುವಿನಲ್ಲಿ ಸಂಭಾಷಣೆ! ಸರ್ಕಾರಕ್ಕೆ ಒಕ್ಕೊರಲ ಒತ್ತಾಯ

# ತುಳು 2ನೇ ಅಧಿಕೃತ ಭಾಷೆಯಾಗಲಿ

■ **ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ತುಳು ಭಾಷೆಯನ್ನು ರಾಜ್ಯದ ಎರಡನೇ ಅಧಿಕೃತ ಭಾಷೆಯನ್ನಾಗಿಸಿ ಘೋಷಣೆ ಮಾಡಬೇಕು ಎಂದು ಸ್ಪೀಕರ್ ಸೇರಿ ಕರಾವಳಿ ಭಾಗದ 13 ಶಾಸಕರು ಒಕ್ಕೊರಲಿನಿಂದ ವಿಧಾನಸಭೆಯಲ್ಲಿ ಒತ್ತಾಯಿಸಿದರು.

ತುಳು ಭಾಷೆ ಬಗ್ಗೆ ಪುತ್ತೂರಿನ ಅಶೋಕ್ ಕುಮಾರ್ ರೈ ಕೇಳಿದ ಪ್ರಶ್ನೆಗೆ ಒಗ್ಗಟ್ಟಾಗಿ ಚರ್ಚೆಗಿಳಿದ ತುಳುನಾಡಿನ ಶಾಸಕರು, ತುಳುವಿನಲ್ಲಿ ಮಾತನಾಡಿಕೊಂಡರು. ಸ್ಪೀಕರ್ ಜತೆಗೆ ತುಳುವಿನಲ್ಲಿ ಮಾತನಾಡಿದ್ದು ಸದನದ ಹುಬ್ಬೇರುವಂತೆ ಮಾಡಿತ್ತು. ಚರ್ಚೆಗೆ ಪ್ರತಿಕ್ರಿಯಿಸಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ತುಳು ಭಾಷೆಯನ್ನು ಅಧಿಕೃತ ಭಾಷೆಯನ್ನಾಗಿ ಮಾಡುವ ಕುರಿತು ರಚನೆಯಾಗಿರುವ ತಂಡ ಆಂಧ್ರಪ್ರದೇಶ ಸೇರಿ ಹಲವೆಡೆ ತೆರಳಿ ಅಧ್ಯಯನ ಮಾಡಿದೆ. ಈ ವರದಿಯನ್ನು ಸಲ್ಲಿಸಿದ ನಂತರ ಪರಿಶೀಲಿಸಲು ರಾಜ್ಯ ಸರ್ಕಾರ ತೀರ್ಮಾನ ತೆಗೆದುಕೊಳ್ಳಲಿದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ ರಚಿಸಿರುವ ಅಧ್ಯಯನ ತಂಡ ವಿವಿಧ ರಾಜ್ಯಗಳಲ್ಲಿ ಎರಡನೇ ಭಾಷೆಯನ್ನು ಅಧಿಕೃತ ಭಾಷೆಯೆಂದು ಘೋಷಿಸಲು ಅನುಸರಿಸಿರುವ ಮಾನದಂಡಗಳ ಕುರಿತು 3 ತಿಂಗಳಲ್ಲಿ ಸಂಪೂರ್ಣ ಅಧ್ಯಯನ ನಡೆಸುವ ಜವಾಬ್ದಾರಿ ನೀಡಲಾಗಿದೆ ಎಂದರು.



**ಪ್ರತಿ ಅಧಿವೇಶನದಲ್ಲೂ ಇದೇ ಪ್ರಶ್ನೆ ಕೇಳುತ್ತಿದ್ದೇನೆ. ಇದಕ್ಕೆ ಆರ್ಥಿಕ ನೆರವು ಬೇಕಾಗಿಲ್ಲ. ಯಾರಿಂದಲೂ ತಕರಾರು ಇಲ್ಲ. ಸರ್ಕಾರ ಯಾವ ಕಾಲಮಿತಿಯಲ್ಲಿ ಘೋಷಣೆ ಮಾಡುತ್ತದೆ ಎಂದು ತಿಳಿಸಬೇಕು.**

| **ಅಶೋಕ್ ಕುಮಾರ್ ರೈ (ಪುತ್ತೂರು)** ಕಾಂಗ್ರೆಸ್ ಶಾಸಕ

ಆಂಧ್ರಪ್ರದೇಶದಲ್ಲಿ ಉರ್ದು ಭಾಷೆಯನ್ನು 2ನೇ ಅಧಿಕೃತ ಭಾಷೆಯಾಗಿ ಘೋಷಿಸಲು ಅನುಸರಿಸಿರುವ ಮಾನದಂಡಗಳ ಕುರಿತು ಪರಿಶೀಲಿಸಲು ಜ.19 ಮತ್ತು 20ರಂದು ಅಲ್ಲಿಗೆ ಭೇಟಿ ಅಧ್ಯಯನ ಮಾಡಿದೆ ಎಂದರು.

**ಬೈದರೋ, ಹೊಗಳಿದರೋ!:** ತುಳುವನ್ನು ಎರಡನೇ ಅಧಿಕೃತ ಭಾಷೆಯನ್ನಾಗಿ ಘೋಷಣೆ ಮಾಡಬೇಕೆಂದು ಕಾಂಗ್ರೆಸ್‌ನ ಅಶೋಕಕುಮಾರ್ ರೈ ಪ್ರಸ್ತಾಪಕ್ಕೆ ಬಿಜೆಪಿಯ ಡಿ.ವೇದವ್ಯಾಸ್ ಕಾಮತ್ ಸೇರಿ ಹಲವರು ದನಿಗೂಡಿಸಿದರು. ಈ ವೇಳೆ ಯು.ಟಿ.ಖಾದರ್ ಮತ್ತು ಕಾಮತ್ ನಡುವೆ ತುಳುವಿನಲ್ಲಿ ಸಂಭಾಷಣೆ ನಡೆಯಿತು.

ತಕ್ಷಣವೇ ಎದ್ದುನಿಂತ ಸಚಿವ ಶಿವರಾಜ್ ಎಸ್. ತಂಗಡಗಿ, ನನ್ನ ರಕ್ಷಣೆಗೆ ನೀವು (ಸಭಾಧ್ಯಕ್ಷರು) ಬರಬೇಕು. ಕಾಮತ್ ತುಳುವಿನಲ್ಲಿ ನನಗೆ ಬೈದರೋ ಅಥವಾ ಹೊಗಳಿದರೋ ಗೊತ್ತಾಗುತ್ತಿಲ್ಲ. ಹೊಗಳಿದ್ದಾರೆ ಎನ್ನುವುದು ನನ್ನ ಅನಿಸಿಕೆ. ಆದರೆ ಕಾಮತ್ ಯಾವಾಗಲೂ ಪಾಸಿಟಿವ್ ಆಗಿ ಮಾತನಾಡಲ್ಲ. ಅವರು ಏನೆಂದು ಬೈದರು ಎಂದು ನೀವೇ ತಿಳಿಸಬೇಕೆಂದರು.

ಅದಕ್ಕೆ ಸ್ಪೀಕರ್ ಯು.ಟಿ.ಖಾದರ್ ಪ್ರತಿಕ್ರಿಯಿಸಿ, ನಿಮಗೆ ಸಂಶಯ ಬೇಡ. ನಮ್ಮ ತುಳುನಾಡಿನವರು ಏನೇ ಬೈದರೂ ಅಥವಾ ಹೊಗಳಿದರೂ ಪ್ರೀತಿಯಲ್ಲದೆ ಕೋಪ ಇರುವುದಿಲ್ಲ ಎಂದರು.

Scanned with OKEN Scanner

### ಸದ್ಯ ಶ್ರಮದಾಯಕ ಕೆಲಸಗಳಿಗೆ ನಿಯೋಜನೆ | ಮೊದಲ ಹಂತದಲ್ಲಿ ತಾಕತ್ತು ಪರಿಶೀಲನೆಯ ಜಾಣ ನಡೆ

# ರಷ್ಯಾದಲ್ಲಿ ಭಾರತೀಯರ ಸಾಮರ್ಥ್ಯ ಪರೀಕ್ಷೆ!

**ಹೊಸದಿಲ್ಲಿ:** ಕಾರ್ಮಿಕರ ತೀವ್ರ ಕೊರತೆ ಎದುರಿಸುತ್ತಿರುವ ರಷ್ಯಾ, ಇದನ್ನು ನೀಗಿಕೊಳ್ಳಲು ಮಾನವ ಸಂಪನ್ಮೂಲ ಹೆಚ್ಚಿರುವ ಭಾರತದತ್ತ ಕಣ್ಣು ನೆಟ್ಟಿದೆ. ಈ ವರ್ಷ ಕನಿಷ್ಠ 40,000 ಭಾರತೀಯ ನಾಗರಿಕರು ಕಾರ್ಮಿಕರಾಗಿ ರಷ್ಯಾಗೆ ಪದಾರ್ಪಣೆ ಮಾಡಲಿದ್ದಾರೆ ಎಂದು ಅಂದಾಜಿಸಲಾಗಿದೆ. ಕಳೆದ ವರ್ಷ ಅಂದರೆ 2025ರ ಅಂತ್ಯದ ವೇಳೆಗೆ ಸುಮಾರು 80,000 ಭಾರತೀಯರು ರಷ್ಯಾದಲ್ಲಿ ಉದ್ಯೋಗಿಗಳಾಗಿದ್ದಾರೆ.

### ಕುಶಲಿಗಳಿಗೆ ಭಾರಿ ಬೇಡಿಕೆ

ಕಳೆದ ವರ್ಷ ಡಿಸೆಂಬರ್‌ನಲ್ಲಿ ಭಾರತದಿಂದ ರಷ್ಯಾಕ್ಕೆ ಅರೆಕುಶಲಿ ಮತ್ತು ಕುಶಲ ಕಾರ್ಮಿಕರು ತೆರಳಲು ಅನುವಾಗುವಂತೆ ಎರಡು ಒಪ್ಪಂದಗಳಿಗೆ ಉಭಯ ದೇಶಗಳು ಸಹಿ ಹಾಕಿದ್ದವು. ಈ ಸಂದರ್ಭದಲ್ಲಿ ರಷ್ಯಾ ಅಧ್ಯಕ್ಷ ಭಾರತಕ್ಕೆ ಭೇಟಿ ನೀಡಿ, ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ವಿಸ್ತೃತ ಮಾತುಕತೆ ನಡೆಸಿದ್ದರು. ಅಕ್ರಮ ವಲಸೆ ತಡೆಗಟ್ಟಲು ಈ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಇದರಿಂದ ರಷ್ಯಾದಲ್ಲಿ ಭಾರತೀಯ ಕಾರ್ಮಿಕರು ಉದ್ಯೋಗವನ್ನು ಪಡೆಯಲು ಮತ್ತು ಮಧ್ಯವರ್ತಿಗಳಿಂದ ವಂಚನೆಗೆ ಒಳಗೊಳಗಾಗುವುದನ್ನು ತಪ್ಪಿಸುವ ಆಶಯವೂ ಈ ಒಪ್ಪಂದದ ಗುರಿಯಾಗಿದೆ.

ಭಾರತೀಯ ಸಾಫ್ಟ್‌ವೇರ್ ಉದ್ಯೋಗಿಯೊಬ್ಬರು ರಷ್ಯಾದ ಬೀದಿಗಳಲ್ಲಿ ರಸ್ತೆ ಕಾಮಗಾರಿ ಕೆಲಸ ಮಾಡುತ್ತಿರುವುದರ ಬಗ್ಗೆ ಪ್ರಕಟವಾದ ಇತ್ತೀಚಿನ ವರದಿಯೊಂದು ಎಲ್ಲರ ಗಮನ ಸೆಳೆದಿತ್ತು. ಕೆಲ ತಿಂಗಳ ಹಿಂದೆಯಷ್ಟೇ ಮುನ್ಸಿಪಲ್ ರಸ್ತೆ ನಿರ್ವಹಣೆ ಮಾಡುವ ಸಲುವಾಗಿ 15 ಮಂದಿ ಭಾರತೀಯ ಕಾರ್ಮಿಕರು ಸೇಂಟ್ ಪೀಟರ್ಸ್‌ಬರ್ಗ್‌ಗೆ ಬಂದಿಳಿದಿದ್ದರು. ಅವರಲ್ಲಿ ಸಾಫ್ಟ್‌ವೇರ್ ಕುಶಲಿ ಕೂಡ ಒಬ್ಬರಾಗಿದ್ದರು. ರಷ್ಯಾದ ರಸ್ತೆ ನಿರ್ವಹಣಾ ಸಂಸ್ಥೆ ಕೊಲೊಮ್ಯಾಜ್ಸ್ಕೊಯೆ ಈ ನೇಮಕ ಮಾಡಿಕೊಂಡಿತ್ತು. ರಸ್ತೆ ಗುಡಿಸುವುದು, ಚಳಿಗಾಲದಲ್ಲಿ ರಸ್ತೆ ನಿರ್ವಹಣೆಯನ್ನು ಭಾರತೀಯ ಉದ್ಯೋಗಿಗಳಿಗೆ ನೀಡಲಾಗಿತ್ತು.

ಇದಕ್ಕೆ ರಷ್ಯಾದ ಆರ್ಥಿಕ ತಜ್ಞರು ನೀಡುವ ವಿವರಣೆಯೇ ಬೇರೆ. ''ಭಾರತೀಯ ಉದ್ಯೋಗಿಗಳಿಗೆ ರಷ್ಯಾ ಹೆಚ್ಚು ಆದ್ಯತೆ ನೀಡುತ್ತಿದೆ. ಏಕೆಂದರೆ ನಮ್ಮ ದೇಶದಲ್ಲಿ ಮುಸ್ಲಿಮರ ಸಂಖ್ಯೆಯನ್ನು ಮಿತಗೊಳಿಸುವ ಉದ್ದೇಶವಿದೆ. ಹಿಂದೂ ಉದ್ಯೋಗಿಗಳು ಹೆಚ್ಚು ಬರುತ್ತಾರೆ ಎಂದು ಸರಕಾರ ಭಾವಿಸಿದೆ. ನಮ್ಮಲ್ಲಿ ರಸ್ತೆ, ಬೀದಿಗಳನ್ನು ಶುಚಿಗೊಳಿಸುವುದೂ ಸೇರಿದಂತೆ ಕುಶಲರಹಿತ ಕೆಲಸಗಾರರ ಕೊರತೆಯೇನೂ ಇಲ್ಲ. ನಮಗೆ ಬೇಕಿರುವುದು ಹೆಚ್ಚು ಕುಶಲಿಗಳು. ಆದರೆ ಈಗ ಪರೀಕ್ಷೆ ನಡೆಯುತ್ತಿದೆ. ಈ ಜನ ನಿಜಕ್ಕೂ ರಷ್ಯಾ ಆರ್ಥಿಕತೆಗೆ ಹೊಂದಿಕೊಳ್ಳಬಲ್ಲರೇ ಎಂಬುದನ್ನು ಕಂಡುಕೊಳ್ಳಲಾಗುತ್ತಿದೆ,'' ಎಂದು ಅರ್ಥಶಾಸ್ತ್ರಜ್ಞ ಆಂಡ್ರೆ ಯಾಕೊವ್ಲೆವ್ ಹೇಳಿದ್ದಾರೆ.

''ರಷ್ಯಾಗೆ ಕಾರ್ಮಿಕರ ಅಗತ್ಯ ತುಂಬ ಇದೆ. ಭಾರತಕ್ಕೆ ನಿರುದ್ಯೋಗವನ್ನು ರಫ್ತು ಮಾಡುವ ಅಗತ್ಯವಿದೆ,'' ಎಂದು ಭಾರತೀಯ ರಾಜತಾಂತ್ರಿಕರೊಬ್ಬರು ಹೇಳಿರುವುದಾಗಿ ಡಿಡಬ್ಲ್ಯು ನ್ಯೂಸ್ ಏಜೆನ್ಸಿ ವರದಿ ಮಾಡಿದೆ.

**₹ 50,835 - ₹ 1,01,764**

ರಷ್ಯಾದಲ್ಲಿ ಭಾರತೀಯ ಅರೆಕುಶಲಿಗಳು ಗಳಿಸುವ ಮಾಸಿಕ ವೇತನ



**80,000**

2025ರ ಅಂತ್ಯದ ಹೊತ್ತಿಗೆ ರಷ್ಯಾದಲ್ಲಿ ಕೆಲಸ ಮಾಡುತ್ತಿರುವ ಭಾರತೀಯರು

**40,000**

2026ರಲ್ಲಿ ರಷ್ಯಾಗೆ ತೆರಳಲಿರುವ ಭಾರತೀಯ ಕಾರ್ಮಿಕರ ಅಂದಾಜು ಸಂಖ್ಯೆ

**5,00,000**

ರಷ್ಯಾಗೆ ಈಗ ಅಗತ್ಯವಿರುವ ಅರೆ ಕುಶಲ ಕಾರ್ಮಿಕರ ಪ್ರಮಾಣ

### ಕಸ ಗುಡಿಸುವ ಕಾರ್ಮಿಕರಿಗೆ ಒಂದೂ ಕಾಲು ಲಕ್ಷ ರೂ. ಸಂಬಳ!

ಸೇಂಟ್ ಪೀಟರ್ಸ್‌ಬರ್ಗ್‌ನ ಬೀದಿಗಳ ಕಸ ಗುಡಿಸುವ ಭಾರತೀಯ ಕಾರ್ಮಿಕರಿಗೆ ತಿಂಗಳಿಗೆ 1,20,541 ರೂ. ವೇತನ ನೀಡಲಾಗುತ್ತಿದೆ ಎಂದು ಫಾಂಟಂಕಾ ಎಂಬ ಸಂಸ್ಥೆ ವರದಿ ಮಾಡಿದೆ. ''ನಾವು ಭಾರಿ ಸಂಬಳ ನೀಡುತ್ತಿದ್ದೇವೆ. ಉಚಿತ ಊಟ, ವಸತಿ ವ್ಯವಸ್ಥೆ ಇದೆ. ಇದರೊಂದಿಗೆ ರಷ್ಯಾ ಕಲಿಸುವ ಕೋರ್ಸ್ ಕೂಡ ಇದೆ. ಸೇಂಟ್ ಪೀಟರ್ಸ್‌ಬರ್ಗ್‌ವೊಂದರಲ್ಲೇ ಕೆಲಸ ಮಾಡಲು 3 ಸಾವಿರಕ್ಕೂ ಹೆಚ್ಚು ಮಂದಿ ಭಾರತೀಯರು ತುದಿಗಾಲ ಮೇಲೆ ನಿಂತಿದ್ದಾರೆ,'' ಎಂದು ನಗರಾಡಳಿತದ ಅಧಿಕಾರಿಗಳು ತಿಳಿಸಿದ್ದಾರೆ.

Scanned with OKEN Scanner

# ಶ್ರೀಮಂತ ರಾಷ್ಟ್ರವಾಗಬೇಕಿದ್ದ ವೆನಿಜುವೆಲಾ: ಆದರೆ ಈಗ...?

**ಕಳೆದ ದಶಕದಾಚೆ ಇಡಿ ವಿಶ್ವವೆ ಕಚ್ಚಾತ್ತೈಲದ ಮೇಲೆ ಅವಲಂಬಿತವಾಗಿದ್ದಾಗ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಆರ್ಥಿಕವಾಗಿ ಶ್ರೀಮಂತವಾಗಬೇಕಿದ್ದ ವೆನಿಜುವೆಲಾ ತನ್ನ ಆಂತರಿಕ ತಪ್ಪಿನಿಂದ ಆರ್ಥಿಕ ಹೊಡೆತಕ್ಕೆ ಸಿಲುಕಿ ಜರ್ಜರಿತವಾಗಿದೆ. ಒಂದು ಕಾಲದಲ್ಲಿ ವರ್ಷಕ್ಕೆ 303 ಬಿಲಿಯನ್ ಬ್ಯಾರಲ್ ಕಚಾತ್ತೈಲವನ್ನು ಉತ್ಪಾದಿಸುತ್ತಿದ್ದ ವೆನಿಜುವೆಲಾ ದೇಶ 1998ರಲ್ಲಿ ಪ್ರತಿದಿನ 3.2 ಮಿಲಿಯನ್ ಬ್ಯಾರಲ್ ಉತ್ಪಾದಿಸುವ ಸಾಮರ್ಥ್ಯಕ್ಕೆ ತಲುಪಿತ್ತು ...**

ವೆನಿಜುವೆಲಾ ಇತ್ತೀಚೆಗೆ ವಿಶ್ವದಾದ್ಯಂತ ಬಹುಚರ್ಚಿತ ದೇಶ. 916.445 ಚ.ಕಿ.ಮಿ ವಿಸ್ತೀರ್ಣ ಹೊಂದಿರುವ ಈ ದೇಶ ಒಟ್ಟಾರೆ 85% ನಗರೀಕರಣ ಹೊಂದಿದ ವಿಶ್ವದ ಬೆರಳೆಣಿಕೆಯ ದೇಶಗಳಲ್ಲಿ ಒಂದಾಗಿದೆ. ಅಂದಾಜು ಮೂರು ಕೋಟಿಯಷ್ಟು ಜನಸಂಖ್ಯೆ ಹೊಂದಿರುವ ವೆನಿಜುವೆಲಾ ವಿಶ್ವದಲ್ಲಿಯೇ ಸುಂದರವಾದ ನಿಸರ್ಗ ಸಂಪತ್ತು ಮತ್ತು ಫಲವತ್ತಾದ ಮಣ್ಣನ್ನು ಹೊಂದಿರುವುದು ವಿಶೇಷ. ಸ್ಪಾನಿಷ್ ಭಾಷೆಯನ್ನಾಡುವ ಇಲ್ಲಿಯ ಜನರು ಬಹುತೇಕವಾಗಿ ಅಮೇರಿಕಾದ ಸಂಸ್ಕೃತಿ ಮತ್ತು ಸಂಪ್ರದಾಯ ಹೊಂದಿದ್ದಾರೆ.

ಸಂಪದ್ಭರಿತವಾದ ವೆನಿಜುವೆಲಾ ದೇಶ ಇಂದಿಗೂ ವಿಶ್ವದಲ್ಲಿಯೆ ಅತಿ ಹೆಚ್ಚು ತೈಲ ಭಂಡಾರವನ್ನು ಹೊಂದಿರುವುದು ಗಮನಾರ್ಹವಾಗಿದೆ. ಇಷ್ಟೆಲ್ಲಾ ಪ್ರಕೃತಿದತ್ತ ಶ್ರೀಮಂತ ಸಂಪತ್ತನ್ನು ಹೊಂದಿದ್ದರೂ, ವೆನಿಜುವೆಲಾ ಕಾಲಕ್ಕೆ ತಕ್ಕಂತೆ ಅಭಿವೃದ್ಧಿ ಹೊಂದದಿರುವುದು ಗಮನಾರ್ಹ.

ಕಳೆದ ದಶಕದ ಆಚೆ ಒಟ್ಟಾರೆ ವಿಶ್ವ ಸಂಪೂರ್ಣವಾಗಿ ಕಚ್ಚಾ ತೈಲದ ಮೇಲೆಯೇ ಅವಲಂಬಿತವಾಗಿತ್ತು. ಕಾರಣ ಮೂಲಭೂತ ಸೌಕರ್ಯ, ಸರಕು ಸಾಗಾಣೆ ಮತ್ತು ಯಂತ್ರೋಪಕರಣಗಳ ಬಳಕೆಗೆ ಕಚ್ಚಾತ್ತೈಲ ಅನಿವಾರ್ಯ. ಆದರೆ, ದಿನಕಳೆದಂತೆ ಅತಿಯಾದ ಕಚ್ಚಾತ್ತೈಲದ ಬಳಕೆಯು ಪರಿಸರ ಮಾಲಿನ್ಯಕ್ಕೆ ಕಾರಣವಾಯಿತು. ಇದರಿಂದಾಗಿ ವಿಶ್ವದಾದ್ಯಂತ ಮನುಕುಲದ ಆರೋಗ್ಯವು ಹದಗೆಡಲು ಪ್ರಾರಂಭವಾಯಿತಲ್ಲದೆ, ಭವಿಷ್ಯದಲ್ಲಿ ಅನಾರೋಗ್ಯವು ಮತ್ತಷ್ಟು ಉಲ್ಬಣಗೊಳ್ಳುವ ಸೂಚನೆ ಗೋಚರವಾಯಿತು. ತಕ್ಷಣ ಎಚ್ಚೆತ್ತುಕೊಂಡ ವಿಶ್ವವು ಭವಿಷ್ಯದಲ್ಲಿ ಕಚ್ಚಾತ್ತೈಲದಿಂದ ಉಂಟಾಗುವ ಕಲುಷಿತ ವಾತಾವರಣ ತಡೆಗಟ್ಟಲು ಪರ್ಯಾಯ ಇಂಧನದ ಮೂಲಗಳನ್ನು ಆವಿಷ್ಕರಿಸಲು ಪ್ರಾರಂಭಿಸಿತು. ಈ ನಿಟ್ಟಿನಲ್ಲಿ ಕಳೆದ ದಶಕದಿಂದ ವಿಶ್ವದೆಲ್ಲೆಡೆ ಹಸಿರು ಇಂಧನ, ನವೀಕರಿಸಬಹುದಾದ ಇಂಧನ, ಪವನ ವಿದ್ಯುತ್, ಇಥೆನಾಲ್ ಮತ್ತು ಸೌರಶಕ್ತಿಯಂತಹ ಪರಿಸರಸ್ನೇಹಿ ಇಂಧನಗಳ ಉತ್ಪಾದನೆಗೆ ಹೆಚ್ಚು ಒತ್ತು ಕೊಡಲಾಗುತ್ತಿದೆ. ಸಧ್ಯದ ಪರಿಸ್ಥಿತಿಯಲ್ಲಿ ಪರಿಸರ ಸಂರಕ್ಷಣೆಗೋಸ್ಕರ ಮತ್ತು ಭವಿಷ್ಯದಲ್ಲಿ ಖಾಲಿಯಾಗಬಹುದಾದ ಕಚ್ಚಾತ್ತೈಲದ ಮೇಲಿನ ಅವಲಂಬನೆ ಕಡಿಮೆ ಮಾಡುವ ಸದುದ್ದೇಶದಿಂದ ಹಸಿರು ಇಂಧನಗಳ ಉತ್ಪಾದನೆ ಮತ್ತು ಬಳಕೆ ಅನಿವಾರ್ಯವಾಗಿದೆ. ಕಳೆದ ದಶಕದಾಚೆ ಇಡಿ ವಿಶ್ವವೆ ಕಚ್ಚಾತ್ತೈಲದ ಮೇಲೆ ಅವಲಂಬಿತವಾಗಿದ್ದಾಗ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಆರ್ಥಿಕವಾಗಿ ಶ್ರೀಮಂತವಾಗಬೇಕಿದ್ದ ವೆನಿಜುವೆಲಾ ತನ್ನ ಆಂತರಿಕ ತಪ್ಪಿನಿಂದ ಆರ್ಥಿಕ ಹೊಡೆತಕ್ಕೆ ಸಿಲುಕಿ ಜರ್ಜರಿತವಾಗಿದೆ. ಒಂದು ಕಾಲದಲ್ಲಿ ವರ್ಷಕ್ಕೆ 303 ಬಿಲಿಯನ್ ಬ್ಯಾರಲ್ ಕಚಾತ್ತೈಲವನ್ನು ಉತ್ಪಾದಿಸುತ್ತಿದ್ದ ವೆನಿಜುವೆಲಾ ದೇಶ 1998ರಲ್ಲಿ ಪ್ರತಿದಿನ 3.2 ಮಿಲಿಯನ್ ಬ್ಯಾರಲ್ ಉತ್ಪಾದಿಸುವ ಸಾಮರ್ಥ್ಯಕ್ಕೆ ತಲುಪಿತ್ತು. ಆದರೆ, ದೇಶದಲ್ಲಿ ಆಡಳಿತದ ಚುಕ್ಕಾಣಿ ಹಿಡಿದ ಸರಕಾರಗಳಿಂದ ಸಮರ್ಪಕ ಹಾಗೂ ಸಮಯಾನುಸಾರದ ನಿರ್ಧಾರಗಳ ಕೊರತೆಯಿಂದಾಗಿ ಮತ್ತು ವ್ಯಾಪಕ ಭ್ರಷ್ಟಾಚಾರಗಳ ಫಲವಾಗಿ ದೇಶ ದಿನಕಳೆದಂತೆ ಆರ್ಥಿಕ ಹಿನ್ನಡೆ ಅನುಭವಿಸಿತು. ಇದಲ್ಲದೆ ವೆನಿಜುವೆಲಾ ತೈಲದಿಂದ ಬಂದ ಹಣವನ್ನು ತನ್ನ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ವಿನಿಯೋಗಿಸಲಿಲ್ಲ. ಬದಲಾಗಿ ವಾಮಮಾರ್ಗದಿಂದ ರಾಜಕೀಯದಲ್ಲಿ ಬಳಕೆ ಮಾಡಲು ಪ್ರಾರಂಭಿಸಿತು. ಆದರಂತೆ ನೆರೆಹೊರೆಯ ದೇಶಗಳೊಂದಿಗಿನ ಸೌಹಾರ್ದ ಸಂಬಂಧಗಳಿಗೂ ಪ್ರಾಧಾನ್ಯತೆ ಕೊಡಲಿಲ್ಲ. ಹೀಗೆ ವೆನಿಜುವೆಲಾ ಸ್ವಯಂಕೃತ ರಾಷ್ಟ್ರೀಯ ಹಾನಿಗಳಿಂದಾಗಿ ಮತ್ತು ಬಲಾಢ್ಯ ದೇಶಗಳ ಏಕಚಕ್ರಾಧಿಪತ್ಯದಲ್ಲಿ ಸಿಲುಕಿ ವಿಶ್ವದ ಇತಿಹಾಸದಲ್ಲಿ ದಾಖಲಾದ ಅತ್ಯಂತ ಕೆಟ್ಟ ದುರಂತಕ್ಕೆ ಸಾಕ್ಷಿಯಾಯಿತು ಅಂದರೆ ತಪ್ಪಾಗಲಿಕ್ಕಿಲ್ಲ. ತೊಂಭತ್ತರ ದಶಕದಲ್ಲಿ ವಿಶ್ವದ ಗರಿಷ್ಠ ಕಚ್ಚಾತ್ತೈಲದ ಪೂರೈಕೆದಾರನಾಗಿದ್ದ ವೆನಿಜುವೆಲಾ ತನ್ನ ಭವಿಷ್ಯಕ್ಕೋಸ್ಕರ ಮೂಲಭೂತ ಸೌಕರ್ಯಗಳಿಗೆ ಒತ್ತು ಕೊಡಲಿಲ್ಲ. ಹಲವು ನಮೂನೆಯ ಇನ್ನಿತರ ಉದ್ಯೋಗಗಳನ್ನು ಸೃಷ್ಟಿಸಲಿಲ್ಲ, ಪ್ರಜೆಗಳಿಗೆ ಕೈತುಂಬ ಕೆಲಸ ದೊರಕಿಸಲಿಲ್ಲ, ನೆರೆಯಲ್ಲಿಯೇ ವಿಶ್ವದ ದೊಡ್ಡಣ್ಣ ಎನಿಸಿರುವ ಅಮೇರಿಕದೊಂದಿಗೆ ಸೌಹಾರ್ದ ಸಂಬಂಧ ಹೊಂದಲಿಲ್ಲ. ಈ ಕಾರಣಗಳಿಂದಲೂ ಇಂದು ವೆನಿಜುವೆಲಾ ಅಸಹಾಯಕ ಸ್ಥಿತಿಗೆ ತಲುಪಿರುವುದು ಆಚ್ಚರಿ ಏನಲ್ಲ. ಇದೇಸಮಯದಲ್ಲಿ ಕಚ್ಚಾತ್ತೈಲದ ಉತ್ಪಾದನೆಯಲ್ಲಿ ಉತ್ತುಂಗ ಸ್ಥಿತಿಯಲ್ಲಿದ್ದ ಅರಬ್ ರಾಷ್ಟ್ರಗಳು ಮೂಲಭೂತ ಸೌಕರ್ಯ, ಉದ್ಯೋಗ ಸೃಷ್ಟಿ ಮತ್ತು ಹೊಸ ಪ್ರವಾಸಿ ತಾಣಗಳ ನಿರ್ಮಾಣಗಳಿಂದಾಗಿ ಇಂದಿಗೂ ಶ್ರೀಮಂತಿಕೆಯ ವೈಭವದಲ್ಲಿ ಮುನ್ನಡೆಯುತ್ತಿವೆ. ಸಾಕಷ್ಟು ನೀರಿನ ಕೊರತೆ ಅನುಭವಿಸುತ್ತಿರುವ ಅರಬ್ ರಾಷ್ಟ್ರಗಳು ಸಮರ್ಪಕ ವ್ಯವಸ್ಥೆಗಳ ಅಳವಡಿಕೆ ಮತ್ತು ಕಾರ್ಯವೈಖರಿಯಿಂದಾಗಿ ಸಫಾರಿ ಫಾರೆಸ್ಟ್, ಬೃಹತ್ ಉದ್ಯಾನವನಗಳು ಮತ್ತು ಅತ್ಯಂತ ದುಸ್ತರವಾದ ಸ್ಥಳಗಳಲ್ಲಿ ವಾಟರ್ ಪಾರ್ಕ್ ಗಳನ್ನು ನಿರ್ಮಿಸುವ ಮೂಲಕ ವಿಶ್ವದ ಗಮನ ಸೆಳೆದಿವೆ. ಹೀಗೆ ವೆನಿಜುವೆಲಾ ದೇಶವು ಅರಬ್ ರಾಷ್ಟ್ರಗಳ ಕಾರ್ಯನೀತಿಯತ್ತ ಗಮನಹರಿಸದೆ ತನ್ನ ಶ್ರೀಮಂತಿಕೆಯನ್ನು ತಾನೆ ಕಳೆದುಕೊಂಡಿದೆ.

ವೆನಿಜುವೆಲಾ ದೇಶದಲ್ಲಿನ ಕಚ್ಚಾತ್ತೈಲವು ವಿಶ್ವದ ಇನ್ನಿತರ ದೇಶಗಳಲ್ಲಿರುವ ಕಚಾತ್ತೈಲದಂತೆ ತೆಳುವಾಗಿಲ್ಲ, ಅಂದರೆ ಗಡುಸಾಗಿದೆ. ಈ ಗಡುಸಾದ ಕಚ್ಚಾತ್ತೈಲದ ಸಂಸ್ಕರಣೆಗೆ ಆಧುನಿಕ ಯಂತ್ರಗಳು ಅವಶ್ಯವಾಗಿವೆ. ಆದರೆ, ವೆನಿಜುವೆಲಾ ತನ್ನ ಹಳೆಯ ಯಂತ್ರಗಳಿಂದಲೆ ಕಚ್ಚಾತ್ತೈಲದ ಸಂಸ್ಕರಣೆ ಮುಂದುವರೆಸಿತು ಮತ್ತು ಆಧುನಿಕ ಯಂತ್ರೋಪಕರಣಗಳ ಅಳವಡಿಕೆಗೆ ಗಮನಹರಿಸಲಿಲ್ಲ. ಇದರಿಂದ ಆ ಹಳೆಯ ಕಾಲದ ಯಂತ್ರೋಪಕರಣಗಳು ಗಡುಸಾದ ಕಚಾತ್ತೈಲದಿಂದ ಗುಣಮಟ್ಟದ ಮುಖ್ಯ ತೈಲವನ್ನು ಉತ್ಪಾದನೆ ಮಾಡಲು ಸಾಧ್ಯವಾಗಲಿಲ್ಲ ಹಾಗೂ ಆ ಪುರಾತನ ಕಾಲದ ಯಂತ್ರಗಳಿಂದ ಉತ್ಪಾದನಾ ವೆಚ್ಚವು ಹೆಚ್ಚಳವಾಯಿತು. ಹೀಗೆ ಬದಲಾವಣೆಯತ್ತ ಸಾಗದ ವೆನಿಜುವೆಲಾದೇಶವು ಕಠಿಣ ಪರಿಸ್ಥಿ ಎದುರಿಸುತ್ತಿದೆಯಲ್ಲದೆ, ಮತ್ತೊಬ್ಬರ ಕೈಗೊಂಬೆಯಾಗಿರುವುದು ದುರಂತವಾಗಿದೆ. ಸಂದಿಗ್ಧ ಪರಿಸ್ಥಿತಿಯಲ್ಲಿರುವ ಮತ್ತು ಸಾರ್ವಭೌಮತ್ವಕ್ಕೆ ಧಕ್ಕೆಯಾಗಿರುವ ವೆನಿಜುವೆಲಾ ದೇಶಕ್ಕೆ ಸೂಕ್ತ ಮಾರ್ಗದರ್ಶನದ ಅವಶ್ಯಕತೆ ಇದೆ ಎಂದರೆ ತಪ್ಪಾಗಲಿಕ್ಕಿಲ್ಲ.

**- ಬಸವರಾಜ ಶಿವಪ್ಪ ಗಿರಗಾಂವಿ**
**ಲೇಖಕ**
**ಮೊ: 99805244010**



Scanned with OKEN Scanner

**ಭೂಮಿಗೇ ನೀರಿಳಿಸಲಿವೆ ಸಾವಿರ ಕೊಳವೆಬಾವಿಗಳು** | **ನೀರಿನ ಕೊರತೆ ನೀಗಿಸಲು ವಿಶೇಷ ಪ್ರಯತ್ನ**

# ಅಂತರ್ಜಲ ವೃದ್ಧಿಗೆ $H_2O$ ಇಂಜೆಕ್ಷನ್!

■ **ಗಜಾನನ ಹೆಗಡೆ** ಬೆಳಗಾವಿ
gajanan.hegde@timesofindia.com

ಸಾವಿರ 'ಇಂಜೆಕ್ಷನ್ ಬೋರ್‌ವೆಲ್' ಮೂಲಕ ಅಂತರ್ಜಲ ವೃದ್ಧಿಸುವ ಯೋಜನೆ ಬರದ ನಾಡು ಅಥಣಿಯಲ್ಲಿ 'ಜೀವ ಜಲ'ದ ಭರವಸೆ ಮೂಡಿಸಿದೆ. ಜಲ ಮರುಪೂರಣದ ಈ ವಿಶಿಷ್ಟ ಯೋಜನೆ ಅನುಷ್ಠಾನವಾದರೆ ರಾಜ್ಯಕ್ಕೇ ಮಾದರಿಯಾಗಲಿದೆ.

ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಪೂರ್ವ ಭಾಗದಲ್ಲಿ ಮಳೆ ಪ್ರಮಾಣ ತೀರಾ ಕಡಿಮೆ. 700ರಿಂದ 800ರಿಂದ ಅಡಿ ಆಳಕ್ಕೆ ಬೋರ್‌ವೆಲ್ ಕೊರೆಸಿದರೂ ಸರಿಯಾಗಿ ನೀರು ಸಿಗುವುದಿಲ್ಲ. ಇರುವ ಸ್ವಲ್ಪ ನೀರೂ ಬೇಸಿಗೆಯಲ್ಲಿ ಬರಿದಾಗುತ್ತದೆ. ವರ್ಷವೂ ನೀರಿನ ಕೊರತೆ ಸಾಮಾನ್ಯ ಎನ್ನುವಂಥ ಸ್ಥಿತಿ. ಈ ಸಮಸ್ಯೆಗೆ ಮುಕ್ತಿ ನೀಡಲು ಅಥಣಿ ಶಾಸಕ ಲಕ್ಷ್ಮಣ ಸವದಿ ಅವರ ಆಶಯದಂತೆ ಸಣ್ಣ ನೀರಾವರಿ ಮತ್ತು ಅಂತರ್ಜಲ ಇಲಾಖೆ ಒಂದು ಸಾವಿರ 'ಇಂಜೆಕ್ಷನ್ ಬೋರ್‌ವೆಲ್' (ನೀರು ಮರುಪೂರಣ ಕೊಳವೆಬಾವಿ) ನಿರ್ಮಿಸಿ ಅಂತರ್ಜಲ ವೃದ್ಧಿಸಲು ಯೋಜನೆ ರೂಪಿಸಿದೆ.

**ಭೂಮಿಗೆ ನೀರಿಳಿಸುವ ಬೋರ್‌ವೆಲ್:** ಬೋರ್‌ವೆಲ್ ಕೊರೆದು ನೀರೆತ್ತುವುದು ಸಾಮಾನ್ಯ. ಆದರೆ, 'ಇಂಜೆಕ್ಷನ್ ಬೋರ್‌ವೆಲ್'ಗಳು ಭೂಮಿಯಿಂದ ನೀರೆತ್ತುವುದಿಲ್ಲ. ಬದಲಾಗಿ ನೂರಾರು ಅಡಿ ಆಳಕ್ಕೆ ನೀರು ತಲುಪಿಸುತ್ತವೆ. ಈ ಮೂಲಕ ಅಂತರ್ಜಲ ಪಾತ್ರೆ ಭರ್ತಿ ಮಾಡುತ್ತವೆ. ಕಾಲುವೆ, ಹಳ್ಳದಲ್ಲಿ ಹರಿಯುವ ನೀರನ್ನು ಪೈಪ್‌ಲೈನ್ ಮೂಲಕ ಕೊಂಡೊಯ್ದು ಫಿಲ್ಟರ್ ಮಾಡಿ 'ಇಂಜೆಕ್ಷನ್ ಬೋರ್‌ವೆಲ್' ಮೂಲಕ ಭೂಗರ್ಭಕ್ಕೆ ಸೇರಿಸಲು ಉದ್ದೇಶಿಸಲಾಗಿದೆ. ಅಂದಾಜು 800 ಅಡಿ ಆಳದಲ್ಲೂ ಅಂತರ್ಜಲ ಇಲ್ಲದ ಸ್ಥಳ ಗುರುತಿಸಿ ಅಂಥಲ್ಲೇ ಜಲ ಮರುಪೂರಣ ಕೊಳವೆಬಾವಿ ಕೊರೆಸಲಾಗುತ್ತದೆ.

**ಕಾಲುವೆ, ಹಳ್ಳದ ನೀರು ಮರುಪೂರಣ:** ಅಥಣಿ ತಾಲೂಕಿನ ಪೂರ್ವ ಭಾಗದ ಐಗಳಿ, ಕೋಹಳ್ಳಿ, ಅಡಹಳ್ಳಿ, ಅಡಹಳ್ಳಟ್ಟಿ, ಕಕಮರಿ, ಯಂಕಚ್ಚಿ ಸೇರಿದಂತೆ ಸುಮಾರು 18 ಗ್ರಾಮಗಳ ವ್ಯಾಪ್ತಿಯಲ್ಲಿ ನೀರು ಮರುಪೂರಣ ಕೊಳವೆ ಬಾವಿ ಕೊರೆಸಲು ಉದ್ದೇಶಿಸಲಾಗಿದೆ. ಈ ಭಾಗದ ಜೋಗದ ನಾಲೆ, ಬನದ ನಾಲೆ ಸೇರಿದಂತೆ ಹಳ್ಳಗಳು ಮಳೆಗಾಲದಲ್ಲಿ ಮೂರ್ನಾಲ್ಕು ತಿಂಗಳು ಹರಿಯುತ್ತವೆ. ಈ ನಾಲಾಗಳ ನೀರು ಹಾಗೂ ಅಮ್ಮಾಜೇಶ್ವರಿ ಮತ್ತು ಹಲ್ಯಾಳ ಏತ ನೀರಾವರಿ ಯೋಜನೆ ಕಾಲುವೆ ನೀರನ್ನು ಕೊಳವೆಬಾವಿಗಳ ಮೂಲಕ ಭೂಮಿಗೆ ಮರುಪೂರಣ ಮಾಡಲು ಯೋಜನೆ ರೂಪಿಸಲಾಗಿದೆ.



**ಹಳ್ಳ, ಕಾಲುವೆ ನೀರು ಇಂಗಿಸಲು ಮುಂದಾದ ಅಥಣಿ**

## ಈ ಹಿಂದೆಯೂ ಯಶ ಕಂಡಿದೆ

ಅಥಣಿ ತಾಲೂಕಿನ ಮದಬಾವಿ ಗ್ರಾಮದ ಕೆರೆ ಬಳಿ ದಶಕಗಳ ಹಿಂದೆ ಇಂಜೆಕ್ಷನ್ ಬೋರ್‌ವೆಲ್ ಕೊರೆಸಿ, ನೀರು ಮರುಪೂರಣ ಮಾಡಿದಾಗ ಸುತ್ತಲಿನ 2 – 3 ಕಿ.ಮೀ ವ್ಯಾಪ್ತಿಯಲ್ಲಿ ಅಂತರ್ಜಲ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿತ್ತು. ಅಂತೆಯೇ ಖಿಳೇಗಾಂವ, ಸಂಬರಗಿ ಹಾಗೂ ಜಂಬಗಿ ಬಳಿ ಕೊಳವೆಬಾವಿ ಮೂಲಕ ಹಳ್ಳದ ನೀರು ಮರುಪೂರಣ ಮಾಡಲಾಗಿತ್ತು. ಅಲ್ಲೂ ಅಂತರ್ಜಲ ಏರಿಕೆಯಾಗಿತ್ತು.

ಅಥಣಿಯ ಹಳ್ಳ, ಕಾಲುವೆ ನೀರು ಹಾಗೂ ಕೆರೆ ತುಂಬಿ ಹರಿಯುವ ನೀರನ್ನು ಒಂದು ಸಾವಿರ ಮರುಪೂರಣ ಕೊಳವೆಬಾವಿಗಳ ಮೂಲಕ ಭೂಮಿಗೆ ಇಂಗಿಸಲು ಯೋಜನೆ ರೂಪಿಸಲಾಗಿದೆ. ನಾಲ್ಕು ತಿಂಗಳ ಅವಧಿಯಲ್ಲಿ ಅಂದಾಜು 1 ಟಿಎಂಸಿ ನೀರನ್ನು ಭೂಮಿಗೆ ಇಂಗಿಸಬಹುದು. ಯೋಜನೆಗೆ ಬಜೆಟ್‌ನಲ್ಲಿ ಅನುದಾನ ಕೊಡುವಂತೆ ಸರಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ.

– **ಲಕ್ಷ್ಮಣ ಸವದಿ** ಅಥಣಿ ಶಾಸಕ

ಜುಲೈ ಅಂತ್ಯದಿಂದ ಅಕ್ಟೋಬರ್ ಅವಧಿಯಲ್ಲಿ ಕೊಳವೆಬಾವಿಗಳ ಮೂಲಕ ಭೂಮಿಗೆ ನೀರು ಮರುಪೂರಣ ಮಾಡಿದರೆ ಸುತ್ತಮುತ್ತಲಿನ ಪ್ರದೇಶದಲ್ಲಿ ಅಂತರ್ಜಲ ಮಟ್ಟ ಏರಿಕೆಯಾಗುತ್ತದೆ. ಇದರಿಂದ ಬೇಸಿಗೆ ಅವಧಿಯಲ್ಲೂ ಬೋರ್‌ವೆಲ್‌ಗಳಲ್ಲಿ ನೀರು ಸಿಗಲಿದೆ

–**ಪ್ರವೀಣ ಪಾಟೀಲ,** ಎಇಇ,ಸಣ್ಣ ನೀರಾವರಿ ಮತ್ತು ಅಂತರ್ಜಲ ಇಲಾಖೆ

Scanned with OKEN Scanner

# ಜನರ ಖರೀದಿ ಶಕ್ತಿ ವೃದ್ಧಿಸುವರೇ ನಿರ್ಮಲಾ?

**ಹೊಸದಿಲ್ಲಿ:** ಕೇಂದ್ರದ ಬಜೆಟ್ ಮಂಡನೆಗೆ ದಿನಗಣನೆ ಆರಂಭವಾಗಿದ್ದು, ದೇಶದ ವೇತನ ವರ್ಗ ಮತ್ತು ಮಧ್ಯಮ ವರ್ಗದ ತೆರಿಗೆದಾರರಲ್ಲಿ ನಿರೀಕ್ಷೆಗಳು ಗರಿಗೆದರಿವೆ. ನೇರ ಮತ್ತು ಪರೋಕ್ಷ ತೆರಿಗೆ ಸಂಗ್ರಹದಲ್ಲಿ ಸರಕಾರ ಉತ್ತಮ ಪ್ರಗತಿ ಸಾಧಿಸಿರುವ ಹಿನ್ನೆಲೆಯಲ್ಲಿ ಈ ಬಾರಿ ಜನಸಾಮಾನ್ಯರ ಆರ್ಥಿಕ ಹೊರೆಯನ್ನು ತಗ್ಗಿಸುವಂತಹ ಮಹತ್ವದ




ಘೋಷಣೆಗಳು ಹೊರಬೀಳುವ ಸಾಧ್ಯತೆಯಿದೆ. ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಲು ಮತ್ತು ಆರ್ಥಿಕತೆಗೆ ಉತ್ತೇಜನ ನೀಡಲು ಹೆಚ್ಚಿನ ವಿನಾಯಿತಿಗಳನ್ನು ಘೋಷಿಸುವ ಸಾಧ್ಯತೆಗಳು ದಟ್ಟವಾಗಿವೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

**ಸ್ಟ್ಯಾಂಡರ್ಡ್ ಡಿಡಕ್ಷನ್ ಮಿತಿ ಹೆಚ್ಚಳ?:** ಕಳೆದ ಬಜೆಟ್‌ನಲ್ಲಿ ಹೊಸ ತೆರಿಗೆ ವ್ಯವಸ್ಥೆಯನ್ನು ಘೋಷಿಸಲಾಯಿತು. ಇದರಿಂದ ವಾರ್ಷಿಕ ಒಟ್ಟು 12 ಲಕ್ಷ ರೂ.ತನಕ (ಅಂದರೆ ತಿಂಗಳಿಗೆ ಸರಾಸರಿ 1 ಲಕ್ಷ ರೂ.ವರೆಗಿನ ಬಂಡವಾಳ ಲಾಭ ಪಡೆಯುವವರನ್ನು ಹೊರತುಪಡಿಸಿ ) ಆದಾಯಕ್ಕೆ ತೆರಿಗೆಯನ್ನು ಪಾವತಿಸುವಂತಿಲ್ಲ. ವೇತನ ಪಡೆಯುವ ತೆರಿಗೆ ಪಾವತಿದಾರರಿಗೆ ಈ ಮಿತಿ 75,000 ರೂ. ನಿಗದಿತ ಕಡಿತ (ಸ್ಟ್ಯಾಂಡರ್ಡ್ ಡಿಡಕ್ಷನ್) ನಿಂದಾಗಿ 12.75 ಲಕ್ಷ ರೂ.ಗಳಾಗಿರುತ್ತದೆ. ಹಳೆಯ ತೆರಿಗೆ ಪದ್ಧತಿ ಅಡಿಯಲ್ಲಿ ಆದಾಯ ತೆರಿಗೆ ದರಗಳು 2017-18ರಿಂದಲೂ ಬದಲಾಗದೆ ಸ್ಥಿರವಾಗಿವೆ. 75 ಸಾವಿರ ರೂ. ಇರುವ ಸ್ಟ್ಯಾಂಡರ್ಡ್ ಡಿಡಕ್ಷನ್ ಮಿತಿಯನ್ನು ಇನ್ನಷ್ಟು ಏರಿಸುವ ನಿರೀಕ್ಷೆ ವೇತನ ಪಡೆಯುವ ತೆರಿಗೆ ಪಾವತಿದಾರರಲ್ಲಿ ತೀವ್ರವಾಗಿದೆ.

**ಡಿಡಕ್ಷನ್ ಮಿತಿ ಏರುವ ನಿರೀಕ್ಷೆ:** ಮನೆಗಳ ಬೆಲೆ ಮತ್ತು ಬ್ಯಾಂಕ್ ಬಡ್ಡಿ ದರಗಳು ಗಗನಕ್ಕೇರಿದ್ದರೂ, ಆದಾಯ ತೆರಿಗೆ ಕಾಯಿದೆ ಅಡಿ ಗೃಹ ಸಾಲದ ಬಡ್ಡಿಯ ಮೇಲಿನ ಕಡಿತದ ಮಿತಿ ಅಂದರೆ ಡಿಡಕ್ಷನ್ ಲಿಮಿಟ್ ಕಳೆದ ಹಲವು ವರ್ಷಗಳಿಂದ ವಾರ್ಷಿಕ 2 ಲಕ್ಷ ರೂ.ಗಳಲ್ಲೇ ಉಳಿದಿದೆ. ಇದನ್ನು 5 ಲಕ್ಷ ರೂ.ಗಳಿಗೆ ಏರಿಸಬೇಕು ಎಂಬುದು ಪ್ರಮುಖ ಬೇಡಿಕೆಯಾಗಿದೆ. ಅಲ್ಲದೆ ಗೃಹ ಸಾಲದ ನಷ್ಟವನ್ನು ಇತರ ಆದಾಯದ ಮೂಲಗಳೊಂದಿಗೆ ಸರಿದೂಗಿಸಲು ಅವಕಾಶ ನೀಡಿದರೆ ಸ್ವಂತ ಮನೆಯ ಕನಸು ಕಾಣುವವರಿಗೆ ಹೆಚ್ಚು ನೆರವಾಗಲಿದೆ.

**ಮತ್ತೆ ವೃತ್ತಿಗೆ ಬರುವ ಮಹಿಳೆಯರಿಗೆ ಉತ್ತೇಜನ**

ಮಹಿಳಾ ಸಬಲೀಕರಣಕ್ಕೆ ಒತ್ತು ನೀಡುತ್ತಿರುವ ಸರಕಾರ ತೆರಿಗೆ ವಿಚಾರದಲ್ಲೂ ಮಹಿಳೆಯರಿಗೆ ರಿಯಾಯಿತಿ ನೀಡುವ ಸಾಧ್ಯತೆಯಿದೆ.

ವೃತ್ತಿಜೀವನದಿಂದ ವಿರಾಮ ತೆಗೆದುಕೊಂಡು ಮತ್ತೆ ಕೆಲಸಕ್ಕೆ ಸೇರುವ ಮಹಿಳೆಯರ ಆದಾಯದ ಮೇಲೆ ತೆರಿಗೆ ವಿನಾಯಿತಿ ನೀಡಬಹುದು. ಅಲ್ಲದೆ, ಮಹಿಳಾ ಉದ್ಯಮಿಗಳು ನಡೆಸುವ ನವೋದ್ಯಮ ಮತ್ತು ವ್ಯವಹಾರಗಳಿಗೆ ಕಡಿಮೆ ತೆರಿಗೆ ದರ ವಿಧಿಸುವ ಮೂಲಕ ಪ್ರೋತ್ಸಾಹ ನೀಡುವ ನಿರೀಕ್ಷೆಯಿದೆ.




## ಡಬಲ್ ಟ್ಯಾಕ್ಸ್ ರದ್ದಾಗಬಹುದೇ?

ಪ್ರಸ್ತುತ ಉದ್ಯೋಗದಾತರು ಪಿಎಫ್ (ಪಿಎಫ್) ಮುಂತಾದ ನಿವೃತ್ತಿ ನಿಧಿಗೆ ವರ್ಷಕ್ಕೆ 7.5 ಲಕ್ಷ ರೂ.ಗಿಂತ ಹೆಚ್ಚು ಹಣ ಹಾಕಿದರೆ,ಆ ಹೆಚ್ಚುವರಿ ಮೊತ್ತಕ್ಕೆ ಉದ್ಯೋಗಿ ತೆರಿಗೆ ಕಟ್ಟಬೇಕಾಗುತ್ತದೆ. ಆದರೆ ಹಣವನ್ನು ಹಿಂಪಡೆಯುವಾಗಲೂ ನಿಯಮಗಳ ಪ್ರಕಾರ ಮತ್ತೆ ತೆರಿಗೆ ವಿಧಿಸಲಾಗುತ್ತಿದೆ. ಇದರಿಂದ ಒಂದೇ ಹಣಕ್ಕೆ ಎರಡು ಬಾರಿ ತೆರಿಗೆ ಕಟ್ಟಿದಂತಾಗುತ್ತಿದೆ. ಈ ಬಜೆಟ್‌ನಲ್ಲಿ ಇದಕ್ಕೆ ಪರಿಹಾರ ನೀಡುವ ನಿಯಮವನ್ನು ಸೇರಿಸಬೇಕೆಂಬ ಒತ್ತಾಯವಿದೆ.

## 8ನೇ ವೇತನ ಆಯೋಗ ಜಾರಿಗೆ ವೇಗ?

6. 2026, ಜನವರಿ 1ರಿಂದಲೇ 8ನೇ ವೇತನ ಆಯೋಗ ಜಾರಿಗೆ ಬರಲಿದೆ ಎಂಬ ನಿರೀಕ್ಷೆ ಇದೆ. ಅಲ್ಲದೆ, 16ನೇ ಹಣಕಾಸು ಆಯೋಗದ ಶಿಫಾರಸುಗಳಿಗೆ ಅನುಗುಣವಾಗಿ ರಾಜ್ಯಗಳಿಗೆ ತೆರಿಗೆ ಹಂಚಿಕೆಯಾಗುವ ನಿರೀಕ್ಷೆ ಸಹ ಈ ಬಾರಿಯ ಬಜೆಟ್‌ನಲ್ಲಿ ಇಟ್ಟುಕೊಳ್ಳಲಾಗಿದೆ. ಈ ಎಲ್ಲ ನಿರೀಕ್ಷೆಗಳು ಎಷ್ಟರ ಮಟ್ಟಿಗೆ ಪೂರೈಕೆ ಆಗುತ್ತದೆ ಅನ್ನೋದನ್ನು ತಿಳಿಯಬೇಕಾದರೆ, ಫೆ.1ರವೆಗೆ ಕಾಯಬೇಕಾಗುತ್ತದೆ.

## ಅಮ್ನೆಸ್ಟಿ ಸ್ಕೀಮ್ ಘೋಷಣೆ?

1.53 ಲಕ್ಷ ಕೋಟಿ ರೂ. ಮೊತ್ತದ ಸುಂಕ ವಿವಾದಗಳು ಇತ್ಯರ್ಥವಾಗಬೇಕಿವೆ. ಇದಕ್ಕೆ ಒಂದು ಒಂದು ಬಾರಿ ಸೆಟಲ್‌ಮೆಂಟ್ ಸ್ಕೀಮ್ (ಅಮ್ನೆಸ್ಟಿ ಸ್ಕೀಮ್) ಘೋಷಣೆ ಮಾಡುವ ನಿರೀಕ್ಷೆ ಇದೆ. ಇದರಿಂದ 1.53 ಲಕ್ಷ ಕೋಟಿ ರೂ. ವ್ಯಾಪಾರಗಳಿಗೆ ಹಣ ಬಿಡುಗಡೆಯಾಗುತ್ತದೆ ಮತ್ತು ಕೋರ್ಟ್‌ಗಳಲ್ಲಿ ಪ್ರಕರಣಗಳ ಭಾರ ಇಳಿಯುತ್ತದೆ. ಉದ್ಯಮಕ್ಕೆ ಲಾಭವಾಗುತ್ತದೆ.

Scanned with OKEN Scanner

# ದ್ವೇಷಭಾಷಣದ ಹೆಸರಿನಲ್ಲಿ ಸಂವಿಧಾನದ ಅಡಿಪಾಯಕ್ಕೆ ಧಕ್ಕೆ ?!




ಗಂಟಾಘೋಷ

ಗುರುರಾಜ್ ಗಂಟಿಹೊಳೆ

vveditoped@gmail.com


ಕಳೆದ ಡಿಸೆಂಬರ್‌ನಲ್ಲಿ ಕರ್ನಾಟಕ ವಿಧಾನಸಭೆ ಕರ್ನಾಟಕ ಹೇಟ್ ಸ್ಪೀಚ್ ಆಂಡ್ ಹೇಟ್ ಕ್ರೈಮ್ಸ್ (ಪ್ರಿವೆನ್ಷನ್ ಆಂಡ್ ಕಂಟ್ರೋಲ್) ಬಿಲ್, 2025 ಎಂಬ ಮಸೂದೆಯನ್ನು ದೊಡ್ಡ ವಿರೋಧದ ನಡುವೆಯೇ ತದ್ವತಾಗಿ ಸ್ವೀಕರಿಸಿತು. ಇದು ಹೇಟ್ ಸ್ಪೀಚ್ ಮತ್ತು ಹೇಟ್ ಟು ಕ್ರೈಮ್ ಸೇರಿದಂತೆ ಜನರ ನಡುವೆ ಹಿತ-ಅಶಾಂತಿ ಹುಟ್ಟಿಸಬಹುದಾದ ಭಾಷಣ/ವರ್ತನೆಗಳನ್ನು ನಿಯಂತ್ರಿಸಲು ಉದ್ದೇಶಿಸಿ ಕಾನೂನು ಮಾಡುವುದಾಗಿದ್ದ ಡ್ರಾಫ್ಟ್ ಆಗಿತ್ತು.

ಒಟ್ಟು 22 ಮಸೂದೆಗಳನ್ನು ಒಪ್ಪಿಗೆ ಪಡೆದುಕೊಳ್ಳಲು ರಾಜ್ಯಪಾಲರಿಗೆ ರಾಜ್ಯ ಸರಕಾರವು ಕಳುಹಿಸಿಕೊಟ್ಟಿತ್ತು. ಇದರಲ್ಲಿ, 19 ಬಿಲ್‌ಗಳಿಗೆ ಗವರ್ನರ್ ಅವರು assent (permit) ನೀಡಿದ್ದಾರೆ. ಉಳಿದ 2 ಬಿಲ್‌ಗಳನ್ನು ಗವರ್ನರ್ ತಿರಸ್ಕರಿಸಿ, ವಿವರಕ್ಕಾಗಿ ರಾಜ್ಯ ಸರಕಾರಕ್ಕೆ ಹಿಂತಿರುಗಿಸಿದ್ದಾರೆ. ಆದರೆ, ಈ ದ್ವೇಷಭಾಷಣಕ್ಕೆ ಸಂಬಂಧಿಸಿದಂತೆ pending / in hold state - neither approved nor returned ಎಂಬಂತೆ ಗವರ್ನರ್ ಸುಮ್ಮನಾಗಿದ್ದಾರೆ.

ಇದರ ವಿರುದ್ಧ ಸಾರ್ವಜನಿಕ ವಲಯದಲ್ಲಿ ಭಾರೀ ಚರ್ಚೆಗೆ ಕಾರಣವಾಗಿದೆ. ವಾಕ್ ಸ್ವಾತಂತ್ರ್ಯ ಸೇರಿದಂತೆ ಇತರೆ ಕೆಲವು ವಿಚಾರಗಳಲ್ಲಿ, ಸಂವಿಧಾನದ ಮೂಲ ಆಶಯಕ್ಕೆ ಧಕ್ಕೆ ತರುವಂತೆ ಈ ಮಸೂದೆ ರೂಪಿತವಾಗಿದೆ ಎಂದೂ ವಿರೋಧ ಪಕ್ಷಗಳು ಬಲವಾಗಿ ವಿರೋಧಿಸಿವೆ. ಫ್ರೀ-ಸ್ಪೀಚ್ ಬಗ್ಗೆ ಆತಂಕ ವ್ಯಕ್ತಪಡಿಸಿ, ಕೆಲವು ಸಾರ್ವಜನಿಕ ಹಿತಾಸಕ್ತಿ ದೂರುಗಳೂ ಕೂಡ petition/request) ಗವರ್ನರ್ ಅಂಗಳಕ್ಕೆ, ನ್ಯಾಯಾಲಯಕ್ಕೆ ತಲುಪಿವೆ. ವಾಸ್ತವಿಕತೆ ಹೀಗಿರುವಾಗ ಇತ್ತೀಚೆಗೆ ರಾಜ್ಯದಲ್ಲಿ ಕೆಲ ಘಟನೆಗಳು ನಡೆಯುತ್ತಿವೆ.

ಹೇಟ್ ಸ್ಪೀಚ್ ಮತ್ತು ಹೇಟ್ ಕ್ರೈಮ್ಸ್ ಬಿಲ್ ಇತ್ತೀಚೆಗೆ ರಾಜ್ಯ ವಿಧಾನಸಭೆಯಲ್ಲಿ ಅಂಗೀಕಾರಗೊಂಡರೂ, ಅಧಿಕೃತವಾಗಿ ಕಾಯ್ದೆ ಆಗಿ ಪ್ರಕಟಿತ/ನೋಟಿಫೈ ಆಗಿಲ್ಲ. ಈಗ ನೀಡಿರುವ-ನೀಡುತ್ತಿರುವ ನೋಟೀಸ್‌ಗೆ ಕಾನೂನಿನ ಮಾನ್ಯತೆ ಇಲ್ಲವೆಂದೂ ಸಾರ್ವಜನಿಕವಾಗಿ ವಿರೋಧ ವ್ಯಕ್ತವಾಗುತ್ತಿದೆ. ಆರೆಸ್ಸೆಸ್ ಮುಖಂಡರಾದ ಕಲ್ಲಡ್ಕ ಪ್ರಭಾಕರ ಭಟ್ ಅವರ ವಿರುದ್ಧ ದುರ್ಭಾವನೆಗಳನ್ನು ವ್ಯಕ್ತಪಡಿಸಿ ಮಾತನಾಡಿದ ಹಿನ್ನಲೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ವಿಕಾಸ್ ಪುತ್ತೂರು ಅವರಿಗೆ ದ್ವೇಷಭಾಷಣದ ಹೆಸರಿನಲ್ಲಿ ನೋಟೀಸ್ ನೀಡಲಾಗಿದೆ. ಇದೆಲ್ಲವನ್ನು ಗಮನಿಸಿದಾಗ, ಕಾಂಗ್ರೆಸ್‌ನವರು ದಬ್ಬಾಳಿಕೆ ಮನಸ್ಥಿತಿ ಇಟ್ಟುಕೊಂಡಿದ್ದಾರೆಯೇ? ಎಂದು ಇಂದಿನ ಪ್ರಜ್ಞಾವಂತ ಯುವಜನತೆ ಪ್ರಶ್ನಿಸುತ್ತಿದೆ.

ಭಾರತೀಯ ಪ್ರಜಾಪ್ರಭುತ್ವದ ಇತಿಹಾಸದಲ್ಲಿ 1975ರಿಂದ 1977ರವರೆಗಿನ ತುರ್ತು ಪರಿಸ್ಥಿತಿ ಒಂದು ಅತ್ಯಂತ ವಿವಾದಾತ್ಮಕ, ಸಂಕೀರ್ಣ ಮತ್ತು ಮಹತ್ವದ ಅಧ್ಯಾಯವಾಗಿದೆ. ಪ್ರಜಾಪ್ರಭುತ್ವದ ಮೌಲ್ಯಗಳು, ನಾಗರಿಕ ಹಕ್ಕುಗಳು, ಸಂವಿಧಾನದ ಆತ್ಮ, ಸಂಸತ್ತಿನ ಸ್ವಾಯತ್ತೆ ಮತ್ತು ನ್ಯಾಯಾಂಗದ ಪಾತ್ರ, ಇವುಗಳು ಈ ಅವಧಿಯಲ್ಲಿ ಗಂಭೀರ ಪರೀಕ್ಷೆಗೆ ಒಳಪಟ್ಟವು. ಸ್ವಾತಂತ್ರ್ಯಾನಂತರ ಭಾರತವು ಕಂಡ ಅತ್ಯಂತ ದೀರ್ಘ ಮತ್ತು ವ್ಯಾಪಕವಾದ ಅಧಿಕಾರ ಕೇಂದ್ರೀಕರಣ ಈ ತುರ್ತು ಪರಿಸ್ಥಿತಿಯಲ್ಲಿಯೇ ನಡೆದಿದೆ.

ಭಾರತೀಯ ಸಂವಿಧಾನದ ಭಾಗ XVIII (ಆರ್ಟಿಕಲ್-352360) ತುರ್ತು ಪರಿಸ್ಥಿತಿಗೆ ಸಂಬಂಧಿಸಿದ ವಿಧಾನಗಳನ್ನು ವಿವರಿಸುತ್ತದೆ. ಆರ್ಟಿಕಲ್-352 ಪ್ರಕಾರ ಯುದ್ಧ, ವಿದೇಶಿ ಆಕ್ರಮಣ ಅಥವಾ ಆಂತರಿಕ ಅಶಾಂತಿ (Internal Disturbance) ಇದ್ದರೆ ರಾಷ್ಟ್ರಪತಿ ತುರ್ತು ಪರಿಸ್ಥಿತಿ ಘೋಷಿಸಬಹುದು. 1975ರಲ್ಲಿ ಇದೇ ಆಂತರಿಕ ಅಶಾಂತಿ ಎಂಬ ಅಸ್ಪಷ್ಟ ಪದಬಳಕೆಯನ್ನು ಆಧಾರವನ್ನಾಗಿ ಮಾಡಿಕೊಂಡು ತುರ್ತು ಪರಿಸ್ಥಿತಿ ಘೋಷಿಸಲಾಯಿತು.

12 ಜೂನ್ 1975ರಂದು ಅಲಹಾಬಾದ್ ಹೈಕೋರ್ಟ್, ಅಂದಿನ ಪ್ರಧಾನಿ ಇಂದಿರಾಗಾಂಧಿಯವರ 1971ರ ಲೋಕಸಭಾ ಕ್ಷೇತ್ರದ ಗೆಲುವನ್ನು ಅಮಾನ್ಯ ಎಂದು ಘೋಷಿಸಿ ಆರು ವರ್ಷಗಳ ಕಾಲ ಚುನಾವಣೆಗೆ ಸ್ಪರ್ಧಿಸದಂತೆ ತೀರ್ಪು ನೀಡಿತು. ಈ ತೀರ್ಪು ರಾಜಕೀಯವಾಗಿ ಭಾರೀ ಆಘಾತ ಉಂಟುಮಾಡಿತು. ಇಂದಿರಾಗಾಂಧಿ ಅವರ ರಾಜೀನಾಮೆಗೆ ಒತ್ತಡ ಹೆಚ್ಚಾಯಿತು. ಇದಕ್ಕೆ ಪ್ರತಿಕ್ರಿಯೆಯಾಗಿ ತುರ್ತು ಪರಿಸ್ಥಿತಿ ಘೋಷಣೆ (25 ಜೂನ್ 1975) ಮಾಡಲಾಯಿತು. ಅಲಾಹಾಬಾದ್ ಹೈಕೋರ್ಟ್ ತೀರ್ಪು ತುರ್ತು ಪರಿಸ್ಥಿತಿಗೆ ತಕ್ಷಣದ ಕಾರಣವಾಯಿತೆನ್ನಬಹುದು.

ಇಂದಿರಾ ಗಾಂಧಿಯವರ ಸಲಹೆಯ ಮೇರೆಗೆ 1975ರ ಜೂನ್ 25ರ ಮಧ್ಯರಾತ್ರಿ ಅಂದಿನ ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹಮದ್, ಸಂವಿಧಾನದ 352 ನೇ ವಿಧಿಯಡಿಯಲ್ಲಿ ಆಂತರಿಕ ಅಶಾಂತಿ ಕಾರಣ ನೀಡಿ ತುರ್ತು ಪರಿಸ್ಥಿತಿ ಘೋಷಿಸಿದರು. ಇದು ಭಾರತದ ಇತಿಹಾಸದಲ್ಲಿ ಮೊದಲ ಬಾರಿಗೆ ಯುದ್ಧವಿಲ್ಲದೆ ಹೇರಲಾದ ತುರ್ತು ಪರಿಸ್ಥಿತಿ. ಸಂವಿಧಾನ ರಚನೆಯ ಬಳಿಕ ಘಟಿಸಿದ ಮೊದಲ ಕರಾಳ ಸಂದರ್ಭ ಇದಾಗಿದ್ದರಿಂದ ಜನರೂ ಭಯಭೀತರಾದರು. ವ್ಯವಸ್ಥೆಗಳು ಹಳಿತಪ್ಪಿದವು, ಮಾಧ್ಯಮಗಳನ್ನು ಸಂಪೂರ್ಣವಾಗಿ ಹತ್ತಿಕ್ಕಲಾಯಿತು. ಎಲ್ಲಕ್ಕಿಂತ ಮುಖ್ಯವಾಗಿ, ದೇಶದ ಸಂಸತ್ತನ್ನು ಅಮಾನತುಗೊಳಿಸಿ, ಪ್ರಜಾಪ್ರಭುತ್ವದ ನಡೆಯನ್ನು ಸ್ಥಗಿತಗೊಳಿಸಲಾಯಿತು.

ಆರ್ಟಿಕಲ್- 356 ದುರುಪಯೋಗ ಪಡಿಸಿಕೊಂಡು ವಿರೋಧ ಪಕ್ಷದ ಸರಕಾರಗಳನ್ನು ವಜಾ ಮಾಡುವ ಮೂಲಕ ರಾಜ್ಯ ಸರಕಾರಗಳ ಮೇಲೆ ನಿಯಂತ್ರಣ ಸಾಧಿಸಲಾಯಿತು. ಸರಕಾರದ ಟೀಕೆಗೆ ಸಂಪೂರ್ಣ ನಿರ್ಬಂಧ ಹೇರಲಾಯಿತು, ಪತ್ರಿಕೆಗಳನ್ನು ಮುದ್ರಣಕ್ಕೆ ಹೋಗುವ ಮುನ್ನ ಸೆನ್ಸಾರ್ ಮಾಡುವ ಮೂಲಕ ಮಾಧ್ಯಮ ಸ್ವಾತಂತ್ರ್ಯವನ್ನು ಹತ್ತಿಕ್ಕಲಾಯಿತು. ಆರ್ಟಿಕಲ್-19 ಅಮಾನತುಗೊಳಿಸುವ ಮೂಲಕ, ವಾಕ್ ಸ್ವಾತಂತ್ರ್ಯ, ಸಭೆ-ಸಂಘಟನೆ ಹಕ್ಕು, ಚಳವಳಿಗಳ ನಿಷೇಧ ಸೇರಿ ನಾಗರಿಕ ಹಕ್ಕುಗಳನ್ನು ಅಮಾನತು ಮಾಡಲಾಯಿತು. ಸಂವಿಧಾನದ 21ನೇ ವಿಧಿಯಡಿಯಲ್ಲಿ ನೀಡಲಾದ ಮೂಲಭೂತ ಹಕ್ಕು ನಿಷ್ಪ್ರಯೋಜಕವಾಯಿತು. Maintenance of Internal Security Act (MISA) ಅಡಿಯಲ್ಲಿ ಲಕ್ಷಾಂತರ ಜನರ ಬಂಧನಗಳಾದವು.

ಭಾರತೀಯ ಸಂವಿಧಾನದ ಆತ್ಮವೆಂದೇ ಕರೆಯಬಹುದಾದ 'ಪ್ರಸ್ತಾವನೆ'ಯನ್ನು ಬದಲಾಯಿಸಲಾಯಿತು. 42ನೇ ಸಂವಿಧಾನ ತಿದ್ದುಪಡಿ (Mini Constitution) 1976ರಲ್ಲಿ ಜಾರಿಗೆ ಬಂದ 42ನೇ ತಿದ್ದುಪಡಿ ಮೂಲಕ, ಮೊದಲ ಬಾರಿಗೆ ಸಂವಿಧಾನದ ಪ್ರಸ್ತಾವನೆಗೆ ಸಮಾಜವಾದಿ (Socialist), ಧರ್ಮನಿರಪೇಕ್ಷ (Secular), ರಾಷ್ಟ್ರೀಯ ಏಕತೆ ಮತ್ತು ಅಖಂಡತೆ ಸೇರಿಸಿ ಬದಲಾವಣೆ ತರಲಾಯಿತು. ಈ ಬದಲಾವಣೆಗಳು ಸಂಸತ್ತನ್ನು ಪೂರ್ಣ ನಿಯಂತ್ರಣದಲ್ಲಿಟ್ಟುಕೊಂಡು, ಸಾರ್ವಜನಿಕ ಚರ್ಚೆ ಇಲ್ಲದೆ ನಡೆದಿವೆ ಎನ್ನುವುದು ಗಮನಾರ್ಹ.

ವೈಯಕ್ತಿಕ ಹಾಗೂ ಪಕ್ಷದ ವಿರೋಧವನ್ನು ರಾಷ್ಟ್ರವಿರೋಧ ಎಂದು ಬಿಂಬಿಸುವ ಪ್ರಯತ್ನ ಈ ಮೂಲಕ ಮಾಡಲಾಯಿತು. ಸಂವಿಧಾನ ತಿದ್ದುಪಡಿ ನ್ಯಾಯಾಲಯದ ಪರಿಶೀಲನೆಗೆ ಒಳಪಡುವುದಿಲ್ಲ ಎಂದು ಘೋಷಣೆ, ನ್ಯಾಯಾಂಗದ ಸ್ವಾಯತ್ತೆಗೆ ಭಾರೀ ಹೊಡೆತ ನೀಡಿ, ನ್ಯಾಯಾಂಗವನ್ನು ಶಕ್ತಿಹೀನವನ್ನಾಗಿಸುವ ಪ್ರಯತ್ನ ಮಾಡಲಾಯಿತು. ಬಳಿಕ ಅಚಾನಕ್ಕಾಗಿ ತುರ್ತು ಪರಿಸ್ಥಿತಿ ಹಿಂಪಡೆದು 1977ರಲ್ಲಿ ಚುನಾವಣೆ ನಡೆಸಲಾಯಿತು.

ಜನರು ತಮ್ಮ ತೀರ್ಪಿನಿಂದ ಇಂದಿರಾಗಾಂಧಿ ಸರಕಾರವನ್ನು ಸೋಲಿಸಿದರು. ಜನತಾಪಕ್ಷ ಅಧಿಕಾರಕ್ಕೆ ಬಂದು, 44ನೇ ತಿದ್ದುಪಡಿ ಮೂಲಕ, ಆಂತರಿಕ ಅಶಾಂತಿ ಪದ ತೆಗೆದು, Armed Rebellion ಸೇರಿಸಿತು. . ಸಂವಿಧಾನದ 21ನೇ ವಿಧಿಯಡಿಯಲ್ಲಿ ನೀಡಲಾದ ಹಕ್ಕನ್ನು ತುರ್ತು ಪರಿಸ್ಥಿತಿಯಲ್ಲೂ ಅಮಾನತುಗೊಳಿಸಲಾಗದ ಹಕ್ಕನ್ನಾಗಿ ಮಾಡಲಾಯಿತು. ಭಾರತೀಯ ಸಂವಿಧಾನವು ನ್ಯಾಯಾಂಗವನ್ನು ಕಾರ್ಯನಿರ್ವಹಣಾ ಮತ್ತು ಶಾಸನಾಂಗದ ಹಸ್ತಕ್ಷೇಪದಿಂದ ರಕ್ಷಿಸುವ ಉದ್ದೇಶದಿಂದ ನ್ಯಾಯಾಧೀಶರಿಗೆ ಅತ್ಯುನ್ನತ ಭದ್ರತೆಯನ್ನು ನೀಡಿದೆ. ಇದೇ ಕಾರಣಕ್ಕೆ ನ್ಯಾಯಾಧೀಶರನ್ನು ಪದಚ್ಯುತಿಗೊಳಿಸುವ (Impeachment) ಪ್ರಕ್ರಿಯೆಯನ್ನು ಅತ್ಯಂತ ಕಠಿಣವಾಗಿಸಿ, ಸಂಸತ್ತಿನ ಎರಡೂ ಸದನಗಳಲ್ಲಿ ವಿಶೇಷ ಬಹುಮತವನ್ನು ಕಡ್ಡಾಯಗೊಳಿಸಲಾಗಿದೆ. ಹೀಗಿದ್ದರೂ, ಕರಾಳ ಪರಿಸ್ಥಿತಿಯ ಹಿನ್ನಲೆಯಿರುವ ರಾಜಕೀಯ ಪಕ್ಷವೊಂದು, ತನ್ನ ಅಧಿಕಾರಾವಧಿಯಲ್ಲಿ ಹಲವು ನ್ಯಾಯಾಧೀಶರನ್ನು ಮಹಾಭೀಯೋಗದ ಮೂಲಕ ಪದಚ್ಯುತಿಗೊಳಿಸಿದೆ.

ಆರ್ಟಿಕಲ್- 124(4) ಸುಪ್ರೀಂಕೋರ್ಟ್ ನ್ಯಾಯಾಧೀಶರ ಪದಚ್ಯುತಿ ಹಾಗೂ ಆರ್ಟಿಕಲ್- 217 ಮೂಲಕ ಹೈಕೋರ್ಟ್ ನ್ಯಾಯಾಧೀಶರ ಪದಚ್ಯುತಿ ಮಾಡಬಹುದಾಗಿದ್ದು, ಅದಕ್ಕೆ ಸಾಬೀತಾದ ದುರ್ವ್ಯವಹಾರ (Proved Misbehaviour) ಮತ್ತು ಅಸಮರ್ಥತೆ (Incapacity) ಪ್ರಖರ ಕಾರಣ ಕಂಡುಬರಬೇಕು. ಸಂಸತ್ತಿನ ಸದಸ್ಯರ ಸಹಿ ಸಹಿತ ಪ್ರಸ್ತಾವ, ತನಿಖಾ ಸಮಿತಿ (Judges Inquiry Committee)ಯ ನಂತರ ಎರಡೂ ಸದನಗಳಲ್ಲಿ ವಿಶೇಷ ಬಹುಮತ ಪಡೆದರೆ ಪದಚ್ಯುತಿ ಯಶಸ್ವಿಯಾಗುತ್ತದೆ. ಸರಕಾರಿ ಹಣದ ದುರುಪಯೋಗ, ಐಷಾರಾಮಿ ಜೀವನಶೈಲಿ, ಕಾನೂನು ಬಾಹಿರ ಖರ್ಚು ಎಂದು ಆರೋಪ ಬಂದು, ಸಾಬೀತಾಗಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ವಿ. ರಾಮಸ್ವಾಮಿ ಪ್ರಕರಣ (199193)ವು ಕಾಂಗ್ರೆಸ್ ಆಡಳಿತದ ಕಾಲದಲ್ಲಿ ನಡೆದ ಮೊದಲ ಮಹಾಭಿಯೋಗ ಪ್ರಕರಣವಾಯಿತು.

1993ರಲ್ಲಿ ಲೋಕಸಭೆಯಲ್ಲಿ ಮಹಾಭಿಯೋಗ ಮತದಾನ ನಡೆಯಿತು. ಇದರಲ್ಲಿ, ಕಾಂಗ್ರೆಸ್ ಪಕ್ಷವು ಮತದಾನದಿಂದ ದೂರ (Abstention) ಉಳಿಯಿತು. ಇದರಿಂದ, ಅಗತ್ಯವಿದ್ದ ಬಹುಮತ ದೊರೆಯದೆ ನ್ಯಾಯಮೂರ್ತಿ ರಾಮಸ್ವಾಮಿ ಪದಚ್ಯುತರಾಗಲಿಲ್ಲ, ಇದು ಭಾರತೀಯ ಇತಿಹಾಸದಲ್ಲಿ ಆರೋಪ ಸಾಬೀತಾದರೂ, ರಾಜಕೀಯ ಕಾರಣಗಳಿಂದ ಪದಚ್ಯುತಿ ವಿಫಲವಾದ ಮೊದಲ ಪ್ರಕರಣವಾಯಿತು.

ತುರ್ತುಪರಿಸ್ಥಿತಿ ಮತ್ತು ನ್ಯಾಯಾಧೀಶರ ಮೇಲೆ ಒತ್ತಡ (197577) ಹೇರುವ ಮೂಲಕ ನೇರ ಮಹಾಭಿಯೋಗ ಇಲ್ಲದಿದ್ದರೂ, ಇಂದಿರಾಗಾಂಧಿ ಸರಕಾರವು ನ್ಯಾಯಾಧೀಶರ ವರ್ಗಾವಣೆ ಹಾಗೂ ಅನನುಕೂಲವಾಗಿದ್ದ ನ್ಯಾಯಾಧೀಶರನ್ನು ಬದಲಿಸುತ್ತಿತ್ತು. ನ್ಯಾಯಮೂರ್ತಿ ಎಚ್. ಆರ್.ಖನ್ನಾ, ADM ಜಬಲ್ಪುರ ಪ್ರಕರಣದಲ್ಲಿ ಮುಖ್ಯನ್ಯಾಯಮೂರ್ತಿ ಸ್ಥಾನಕ್ಕೆ ನಿರಾಕರಣೆ ಮಾಡಲಾಯಿತು. ಇದು ಮಹಾಭಿಯೋಗವಲ್ಲದಿದ್ದರೂ, ನ್ಯಾಯಾಂಗವನ್ನು ಶಿಕ್ಷಿಸುವ ರಾಜಕೀಯ ತಂತ್ರ ಎಂದು ಇತಿಹಾಸದಲ್ಲಿ ದಾಖಲಾಗಿದೆ. ನ್ಯಾಯಮೂರ್ತಿ ಸೌಮಿತ್ರ ಸೇನ್ ಪ್ರಕರಣ (2011), ನ್ಯಾಯಮೂರ್ತಿ ಪಿ.ಡಿ. ದಿನಕರನ್ ಪ್ರಕರಣ (2010), ಅಂದಿನ ಆಡಳಿತ ವ್ಯವಸ್ಥೆಯಲ್ಲಿ ಸರಿಯಾದ ಉಪಕ್ರಮಗಳು ನಡೆಯದೆ ಸಮಾಪ್ತಿಗೊಂಡಿವೆ. ಆದರೆ, ಬಹುತೇಕ ಪ್ರಕರಣಗಳ ಆರೋಪಗಳು ಕೇಳಿಬಂದದ್ದು, ಹಗರಣ ಅಥವಾ ಹಣ, ಅಧಿಕಾರ ದುರ್ಬಳಕೆಯಂತಹ ವಿಚಾರಗಳು.

ಕಾಂಗ್ರೆಸ್ ನೇತೃತ್ವದ ಇಂದಿನ 'ಇಂಡಿಕೂಟ' ಮಾತ್ರ, ಇಡೀ ಸಂವಿಧಾನ-ನ್ಯಾಯಾಂಗ ಕ್ರಮದಲ್ಲಿ ವಿವೇಕವಲ್ಲದ ಮಾರ್ಗದ ಮೂಲಕ, ಸಕಾರಣವಲ್ಲದ ವಿಚಾರಕ್ಕೆ ಮಹಾಭಿಯೋಗದ ಪ್ರಸ್ತಾವವನ್ನು ಕೈಗೆತ್ತಿಕೊಂಡಿದ್ದು, ನ್ಯಾಯಾಂಗಕ್ಕೆ ಮಸಿ ಬಳಿಯಲು ಯತ್ನಿಸಿದ ಪ್ರಯತ್ನವೆಂದೇ ಹೇಳಬೇಕು. ಈ ಪ್ರಕರಣದಲ್ಲಿ ಮದ್ರಾಸ್ ಹೈಕೋರ್ಟ್, ಮಧುರೈ ಶಾಖೆ ಏಕಸದಸ್ಯ ಪೀಠದ ನ್ಯಾಯಾಧೀಶರಾದ ಜಸ್ಟಿಸ್ ಜಿ.ಆರ್. ಸ್ವಾಮಿನಾಥನ್ ಅವರು, 2025ರಲ್ಲಿ ಕಾರ್ತಿಕ ದೀಪ ಬೆಳಗುವ ಪ್ರಕರಣದಲ್ಲಿ, ನ್ಯಾಯಾಧೀಶರು ಸ್ಥಳಕ್ಕೆ ತಾನು ನೇರ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ, ತಿರುಪರಂಕುಂದ್ರಂ ಬೆಟ್ಟದ ದೀಪಥೂನ್ ಎಂಬ ಶಿಲಾಮೂರ್ತಿ ಬಳಿ ಕಾರ್ತಿಕ ದೀಪವನ್ನು ಹಬ್ಬದ ಸಂದರ್ಭದಲ್ಲಿ ಬೆಳಗಿಸಬಹುದು ಎಂದು ಆದೇಶ ನೀಡಿದರು. ಈ ವಿಚಾರದಲ್ಲಿ, ನ್ಯಾಯಾಧೀಶರ ವಿರುದ್ಧವೇ ಪ್ರಮುಖ ರಾಜಕೀಯ ಮತ್ತು ನ್ಯಾಯಾಂಗ ವಿರೋಧ ವಿವಾದಕ್ಕೆ ಕಾರಣವಾಗಿದೆ.

ಈ ದೀಪ ಪ್ರಜ್ವಲನೆಯನ್ನು ಒಂದು ಧಾರ್ಮಿಕ ಚಿಹ್ನೆ ಎಂಬುದಕ್ಕಿಂತ ಇದು ತಮಿಳ್ ಪರಂಪರೆ, ಸಾಂಸ್ಕೃತಿಕ ಆಚರಣೆ ಎಂದು ನೋಡಬಹುದಾಗಿದ್ದು, ಆದೇಶವು ಐತಿಹಾಸಿಕ ಹಕ್ಕನ್ನು ಪುನರ್ ಸ್ಥಾಪಿಸುವುದು ಎಂದು ಹೇಳಿದ್ದಾರೆ. ಆರ್ಟಿಕಲ್ 25 ಮತ್ತು ಆರ್ಟಿಕಲ್ 26 (ಧಾರ್ಮಿಕ ಸ್ವಾತಂತ್ರ್ಯ ಮತ್ತು ಧಾರ್ಮಿಕ ವಿಷಯಗಳಲ್ಲಿ ಸ್ವಂತ ವ್ಯವಸ್ಥೆ) ಸಂವಿಧಾನದ ಸಾರಕ್ಕನುಗುಣವಾಗಿದೆ ಎಂದು ತೀರ್ಪಿನಲ್ಲಿ ಹೇಳಲಾಗಿದೆ. ತೀರ್ಪಿನ ಬಳಿಕ, ರಾಜ್ಯ ಪೊಲೀಸರಿಂದ ಹಠಾತ್ ತಡೆ, ಸರಕಾರದ ವಕೀಲರಿಂದ ಹಸ್ತಕ್ಷೇಪ ಹಾಗೂ ರಾಜ್ಯದ ಲೇಟರ್ಸ್ ಪೇಟೆಂಟ್ ಅಪೀಲ್ ತೀರ್ಪನ್ನು ಹಿಂಪಡೆಯುವ ಕ್ರಮ ಸೇರಿದಂತೆ ಎಲ್ಲಾ ಮೇಲ್ಮನವಿಯನ್ನು ನ್ಯಾಯಾಲಯದಿಂದ ನಿರಾಕರಿಸಲಾಯಿತು.

ಇಂಡಿಕೂಟದ ಸುಮಾರು 120 ಸಂಸದರು ಲೋಕಸಭಾ ಸ್ಪೀಕರ್‌ಗೆ ಜಸ್ಟಿಸ್ ಜಿ.ಆರ್. ಸ್ವಾಮಿನಾಥನ್ ವಿರುದ್ಧ ಮಹಾಭಿಯೋಗ ನೋಟಿಸ್ ಸಲ್ಲಿಸಿದರು. ಡಿಎಂಕೆ, ಕಾಂಗ್ರೆಸ್ ಕೂಟದ ಪಕ್ಷಗಳ ಸಂಸದರು ಇದಕ್ಕೆ ಸಹಿ ಹಾಕಿದ್ದಾರೆ. ಇಲ್ಲಿಯವರೆಗೆ, ಭ್ರಷ್ಟಾಚಾರ ಇತರೆ ಕಾರಣದಿಂದ ಮಹಾಭಿಯೋಗಕ್ಕೆ ಕಾರಣವಾಗುತ್ತಿದ್ದ ವಿಚಾರವನ್ನು ಸಾಂವಿಧಾನಿಕವಾಗಿ ತೀರ್ಪು ನೀಡಿದ ಕಾರಣ ಇಟ್ಟುಕೊಂಡು ಮಹಾಭಿಯೋಗಕ್ಕೆ ಮುಂದಾಗುವ ಮೂಲಕ, ಹೊಸದೊಂದು ಅನೈತಿಕ ಉಪಕ್ರಮವನ್ನು ಕಾಂಗ್ರೆಸ್ ಹಾಗೂ ಇಂಡಿಕೂಟ ಆರಂಭಿಸಿತೆನ್ನಬಹುದು.

ಬಹುತೇಕ ಸಂವಿಧಾನ ತಜ್ಞರು, ತಪ್ಪಾದ ತೀರ್ಪು ದುರ್ವ್ಯವಹಾರ (Misconduct) ಆಗುವುದಿಲ್ಲ. ತೀರ್ಪು ನಿಮ್ಮ ವಿರುದ್ಧವಾಗಿದ್ದರೆ, ಮೇಲ್ಮನವಿ (Appeal) ಸಲ್ಲಿಸಬೇಕು. ರಾಜಕೀಯ ಕಾರಣಗಳನ್ನಿಟ್ಟುಕೊಂಡು ಮಹಾಭಿಯೋಗದ ಬೆದರಿಕೆ ನೀಡಬಾರದು ಎಂದು ಅಭಿಪ್ರಾಯಪಟ್ಟರು. Judicial error is not a ground for impeachment. ಎಂಬುದು ಸುಪ್ರೀಂಕೋರ್ಟ್‌ನ ಸ್ಥಿರ ನಿಲುವಾಗಿದೆ.

ಪ್ರಸ್ತುತ, ಸರ್ವೋಚ್ಚ ನ್ಯಾಯಾಲಯದ ಅಂಗಳದಲ್ಲಿ ಕಾರ್ತಿಕ ದೀಪದ ಕುರಿತು ಚರ್ಚೆಯಲ್ಲಿದೆ. ಇತ್ತ ಕರ್ನಾಟಕದಲ್ಲಿ ಕಾನೂನು ಆಗಿ ಜಾರಿಯಾಗದಿದ್ದರೂ, ಅದರ ಅಡಿಯಲ್ಲಿ ನಡೆಯದ ಘಟನೆಗಳನ್ನು ಊಹಿಸಿಕೊಂಡು ಮುಂಚಿತ ನೋಟೀಸುಗಳನ್ನು ನೀಡಲಾಗುತ್ತಿದೆ. ಸಂಸತ್ತಿನಲ್ಲಿ ಬೆದರಿಕೆ ಹಾಕುವ, ನ್ಯಾಯಾಂಗವನ್ನು ಹೆದರಿಸುವ, ನ್ಯಾಯಾಂಗ ವ್ಯವಸ್ಥೆಯನ್ನು ರಾಜಕೀಯ ನಿಲುವಿಗೆ ಹಿಡಿದಿಟ್ಟುಕೊಳ್ಳುವ ಮಾನಸಿಕತೆಯನ್ನು ಕಾಂಗ್ರೆಸ್ ಬದಲಾಯಿಸಿಕೊಳ್ಳದಿದ್ದಲ್ಲಿ ಸಂವಿಧಾನ ನಿರಂತರ ಅಪಾಯಕ್ಕೊಳಗಾದೀತು ಎಂಬುದನ್ನು ಮನಗಾಣಬೇಕಿದೆ.

Scanned with OKEN Scanner

ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವೆ ಮಂಗಳವಾರ ಅಂತಿಮಗೊಂಡಿರುವ ಐತಿಹಾಸಿಕ ಮುಕ್ತ ವ್ಯಾಪಾರ ಒಪ್ಪಂದ ಎರಡೂ ಕಡೆಯವರಿಗೆ ಎಷ್ಟು ಮಹತ್ವದ್ದೆಂದರೆ ಅದನ್ನು 'ಎಲ್ಲ ಒಪ್ಪಂದಗಳ ತಾಯಿ' ಎಂದು ಬಣ್ಣಿಸಲಾಗಿದೆ. ಇದೊಂದು ಮಹತ್ವಾಕಾಂಕ್ಷಿ ಒಪ್ಪಂದ ಆಗಿರುವುದರಿಂದಲೇ ಇದು ಕೆಲವು ಅಡ್ಡಿ-ಆತಂಕಗಳಿಂದಾಗಿ ಸ್ಥಗಿತಗೊಂಡಿತ್ತು. ಬಳಿಕ ಸುದೀರ್ಘ ಮಾತುಕತೆ ನಡೆದು ಕೊನೆಗೂ ಒಪ್ಪಂದಕ್ಕೆ ಉಭಯ ದೇಶಗಳು ಒಪ್ಪಿವೆ. ಅಂದಹಾಗೆ ಇದು ಸರಾಗವಾಗಿ ನಡೆದಿದ್ದಲ್ಲ, 18 ವರ್ಷಗಳ ಕಾಲ ಸತತ ಪ್ರಯತ್ನಗಳಿಂದ ಅಂತಿಮಗೊಂಡಿರುವ ಒಪ್ಪಂದ. ಈ 'ಮಹಾತಾಯಿ' ನಡೆದು ಬಂದ ಹಾದಿಯ ಕಿರು ಪರಿಚಯ ಇಲ್ಲಿದೆ.



ವಿ ಫೋಕಸ್

# ಒಪ್ಪಂದಗಳ ತಾಯಿ ಸವೆಸಿದ ಮಹಾ ಹಾದಿ

**16 ಸುತ್ತುಗಳ ಮಾತುಕತೆ ನಡೆದಿದ್ದರೂ ಮೂಡಿರಲಿಲ್ಲ ಸಹಮತ**

**ಸು**ಮಾರು 200 ಕೋಟಿ ಜನಸಂಖ್ಯೆಯನ್ನು ಒಳಗೊಂಡಿರುವ ಎರಡು ಬೃಹತ್ ಆರ್ಥಿಕತೆಗಳನ್ನು ಬೆಸೆದಿರುವ ಭಾರತ-ಇಯು ಮುಕ್ತ ವ್ಯಾಪಾರ ಒಪ್ಪಂದಕ್ಕೆ ದಶಕಗಳ ಇತಿಹಾಸವಿದೆ. ಬ್ರಸೆಲ್ಸ್‌ನಲ್ಲಿ 2007ರಲ್ಲಿ ಈ ಕುರಿತು ಮಾತುಕತೆ ಆರಂಭವಾಗಿದ್ದು, ಸಾಕಷ್ಟು ಉತ್ಸಾಹದಲ್ಲೇ ಮುಂದುವರಿದಿತ್ತು. ಆದರೆ ಎರಡೂ ಕಡೆಯವರಿಂದ ಭಿನ್ನ ಬೇಡಿಕೆಗಳು ವ್ಯಕ್ತವಾಗಿದ್ದರಿಂದ ಈ ಉತ್ಸಾಹಕ್ಕೆ ತಣ್ಣೀರೆರಚಿದಂತಾಗಿ ಸ್ಥಗಿತಗೊಳ್ಳುವ ಹಂತಕ್ಕೆ ತಲುಪಿತ್ತು. ಒಪ್ಪಂದದ ಬಗ್ಗೆ ಭಾರತ-ಐರೋಪ್ಯ ಒಕ್ಕೂಟದವರು ಸುಮಾರು 16 ಸುತ್ತು ಮಾತುಕತೆ ನಡೆಸಿದ್ದರೂ ಪರಸ್ಪರ ಸಹಮತ ಮೂಡದ್ದರಿಂದ 2013ರಲ್ಲಿ ಮಾತುಕತೆ ಸ್ಥಗಿತಗೊಂಡಿತ್ತು.

## ಮಾತುಕತೆ ಏಕೆ ಸ್ಥಗಿತವಾಗಿತ್ತು?

**ತ**ನ್ನ ತಯಾರಿಕೆಯ ಕಾರುಗಳ ಮೇಲಿನ ಆಮದು ಸುಂಕವನ್ನು ಭಾರಿ ಪ್ರಮಾಣದಲ್ಲಿ ತಗ್ಗಿಸಬೇಕು ಎಂದು ಇಯು ಬೇಡಿಕೆ ಇರಿಸಿತ್ತು. ಆದರೆ ಭಾರತದಲ್ಲಿ ಇದು ಸ್ಥಳೀಯ ಉದ್ಯಮಕ್ಕೆ ಹೊಡೆತ ನೀಡುವ ಆತಂಕ ಇದ್ದಿದ್ದರಿಂದ ಭಾರತ ಒಪ್ಪಿರಲಿಲ್ಲ. ಸ್ಕಾಚ್ ವಿಸ್ಕಿ, ವೈನ್ ಮೇಲಿನ ಸುಂಕ ಕಡಿತಕ್ಕೂ ಇಯು ಒತ್ತಾಯಿಸಿತ್ತು. ಯುರೋಪಿನ ಕಠಿಣ ಕಾರ್ಮಿಕ ಮತ್ತು ಪರಿಸರ ಮಾನದಂಡಗಳನ್ನು ಪಾಲಿಸಬೇಕೆಂದೂ ಇಯು ಪಟ್ಟು ಹಿಡಿದಿತ್ತು. ಭಾರತ 'ಡೇಟಾ ಸುರಕ್ಷತೆಯ ರಾಷ್ಟ್ರ' ಎಂದು ಪರಿಗಣಿಸಲು ಇಯು ನಿರಾಕರಿಸಿತ್ತು. ಭಾರತ ಕೂಡ ತನ್ನ ಐಟಿ ವೃತ್ತಿಪರರು ಮತ್ತು ನುರಿತ ಕೆಲಸಗಾರರಿಗೆ ಯುರೋಪ್‌ನಲ್ಲಿ ಸುಲಭದಲ್ಲಿ ವೀಸಾ ಮತ್ತು ಕೆಲಸದ ಅನುಮತಿ ಬೇಕೆಂದು ಪಟ್ಟು ಹಿಡಿದಿತ್ತು. ರೈತರ ಹಿತಾಸಕ್ತಿ ಮುಂದಿಟ್ಟು, ಡೇರಿ-ಕೃಷಿ ಉತ್ಪನ್ನಗಳ ಆಮದಿಗೆ ಭಾರತ ವಿರೋಧ ವ್ಯಕ್ತಪಡಿಸಿತ್ತು. ಇವೆಲ್ಲ ಕಾರಣಗಳಿಂದಾಗಿ ಮಾತುಕತೆ ಸ್ಥಗಿತಗೊಂಡಿತ್ತು.

## ಪೋರ್ಚುಗಲ್‌ನಲ್ಲಿ ಸಿಕ್ಕ ಫೋರ್ಸ್

**ಭೌ**ಗೋಳಿಕ ರಾಜಕಾರಣ ಮತ್ತು ಬದಲಾದ ಆರ್ಥಿಕ ಸನ್ನಿವೇಶಗಳಿಂದಾಗಿ ಸುದೀರ್ಘ ಅಂತರದ ಬಳಿಕ ಈ ಮಾತುಕತೆಗೆ ಜೀವ ಬಂತು. ಪೋರ್ಚುಗಲ್‌ನಲ್ಲಿ 2021ರ ಮೇನಲ್ಲಿ ನಡೆದ ಶೃಂಗಸಭೆ ವೇಳೆ ಈ ಒಪ್ಪಂದ ಕುರಿತ ಮಾತುಕತೆ ಮುಂದುವರಿಕೆಗೆ ಬಲ ಸಿಕ್ಕಿತ್ತು. 2022ರ ಜೂನ್‌ನಲ್ಲಿ ಮಾತುಕತೆಗಳು ಪುನರಾರಂಭಗೊಂಡವು. ಕೋವಿಡ್ ನಂತರ ಮತ್ತು ಯೂಕ್ರೇನ್ ಯುದ್ಧದ ಬಳಿಕ ಯುರೋಪ್ ತನ್ನ ಪೂರೈಕೆ ಸರಪಳಿಗಾಗಿ ಚೀನಾದ ಮೇಲಿನ ಅವಲಂಬನೆ ಅಪಾಯಕಾರಿ ಎಂದು ಅರಿತುಕೊಂಡಿತು. ಭಾರತವೇ ಅತ್ಯುತ್ತಮ ಆಯ್ಕೆ ಎಂದು ಕಂಡುಕೊಂಡಿತು. ಅಲ್ಲದೆ, ಸುಂಕ ಏರಿಕೆ ಸೇರಿ ಅಮೆರಿಕದ ವ್ಯಾಪಾರ ನೀತಿಗಳಲ್ಲಿನ ಅನಿಶ್ಚಿತತೆ ಯುರೋಪ್ ಮತ್ತು ಭಾರತವನ್ನು ಪರಸ್ಪರ ಹತ್ತಿರವಾಗಿಸಿತು. ಕೊನೆಗೂ ಅಂತಿಮಗೊಂಡ ಒಪ್ಪಂದ ಕೇವಲ ವ್ಯಾಪಾರಕ್ಕೆ ಸೀಮಿತವಾಗಿರದೆ, ಜಾಗತಿಕ ರಾಜಕಾರಣದಲ್ಲಿ ಉಭಯತ್ರರ ಪ್ರಬಲ ಮೈತ್ರಿಯ ಸಂಕೇತವೂ ಆಯಿತು.

### ಅನುಷ್ಠಾನ ಇನ್ನೂ ನಿಧಾನ

**ಒಪ್ಪಂದಕ್ಕೆ ಭಾರತದ ಸಂಸತ್ತು ಮತ್ತು ಯುರೋಪಿಯನ್ ಪಾರ್ಲಿಮೆಂಟ್ ಎರಡರಲ್ಲೂ ಅನುಮೋದನೆ ಸಿಗಬೇಕಿದೆ. ಹೀಗಾಗಿ ಈ ವರ್ಷಾಂತ್ಯದಲ್ಲಿ ಅಥವಾ ಮುಂದಿನ ವರ್ಷಾರಂಭದಲ್ಲಿ ಜಾರಿಗೆ ಬರಲಿದೆ ಎನ್ನಲಾಗಿದೆ.**

## ಭಾರತ-ಇಯು ವ್ಯಾಪಾರ (ಶೇಕಡಾವಾರು ಪಾಲು)

### ಭಾರತದಿಂದ ಐರೋಪ್ಯ ಒಕ್ಕೂಟಕ್ಕೆ ರಫ್ತು

| ಸರಕು ವರ್ಗ | 2018ನೇ ಆರ್ಥಿಕ ವರ್ಷ | 2025ನೇ ಆರ್ಥಿಕ ವರ್ಷ | ಬದಲಾವಣೆ |
|---|---|---|---|
| ಖನಿಜ ಇಂಧನಗಳು ಮತ್ತು ತೈಲಗಳು | ಶೇ. 6.8 | ಶೇ. 19.8 | ಏರಿಕೆ |
| ಇಲೆಕ್ಟ್ರಿಕಲ್, ಇಲೆಕ್ಟ್ರಾನಿಕ್ ಉಪಕರಣಗಳು | ಶೇ. 4.0 | ಶೇ. 14.8 | ಏರಿಕೆ |
| ಸಾವಯವ ರಾಸಾಯನಿಕಗಳು | ಶೇ. 7.3 | ಶೇ. 6.7 | ಇಳಿಕೆ |
| ಯಂತ್ರೋಪಕರಣಗಳು | ಶೇ. 8.1 | ಶೇ. 6.6 | ಇಳಿಕೆ |
| ಉಡುಪುಗಳು | ಶೇ. 10.7 | ಶೇ. 6.0 | ಇಳಿಕೆ |
| ಕಬ್ಬಿಣ ಮತ್ತು ಉಕ್ಕು | ಶೇ. 7.0 | ಶೇ. 4.0 | ಇಳಿಕೆ |
| ಔಷಧಗಳು | ಶೇ. 2.9 | ಶೇ. 3.9 | ಏರಿಕೆ |
| ರತ್ನ ಮತ್ತು ಆಭರಣಗಳು | ಶೇ. 6.6 | ಶೇ. 3.3 | ಇಳಿಕೆ |
| ಆಟೋಮೊಬೈಲ್ ಮತ್ತು ಭಾಗಗಳು | ಶೇ. 4.9 | ಶೇ. 2.9 | ಇಳಿಕೆ |
| ಏರೋಸ್ಪೇಸ್ | ಶೇ. 1.5 | ಶೇ. 2.1 | ಏರಿಕೆ |
| ರಬ್ಬರ್ ಉತ್ಪನ್ನಗಳು | ಶೇ. 1.8 | ಶೇ. 1.7 | ಇಳಿಕೆ |
| ಆಪ್ಟಿಕಲ್ ಮತ್ತು ವೈದ್ಯಕೀಯ ಸಾಧನಗಳು | ಶೇ. 1.5 | ಶೇ. 1.7 | ಏರಿಕೆ |
| ಚರ್ಮದ ಸರಕುಗಳು, ಪ್ರಯಾಣ ಸಾಮಗ್ರಿಗಳು | ಶೇ. 2.7 | ಶೇ. 1.5 | ಇಳಿಕೆ |
| ಇತರ ಜವಳಿ ವಸ್ತುಗಳು | ಶೇ. 2.4 | ಶೇ. 1.5 | ಇಳಿಕೆ |

### ಇಯುನಿಂದ ಭಾರತಕ್ಕೆ ಆಮದು

| ಸರಕು ವರ್ಗ | 2018ನೇ ಆರ್ಥಿಕ ವರ್ಷ | 2025ನೇ ಆರ್ಥಿಕ ವರ್ಷ | ಬದಲಾವಣೆ |
|---|---|---|---|
| ಯಂತ್ರೋಪಕರಣಗಳು | ಶೇ. 19.8 | ಶೇ. 21.4 | ಏರಿಕೆ |
| ಇಲೆಕ್ಟ್ರಿಕಲ್, ಇಲೆಕ್ಟ್ರಾನಿಕ್ ಉಪಕರಣಗಳು | ಶೇ. 9.3 | ಶೇ. 15.5 | ಏರಿಕೆ |
| ಏರೋಸ್ಪೇಸ್ (ವಿಮಾನ, ಭಾಗಗಳು) | ಶೇ. 9.3 | ಶೇ. 10.3 | ಏರಿಕೆ |
| ಆಪ್ಟಿಕಲ್ ಮತ್ತು ವೈದ್ಯಕೀಯ ಉಪಕರಣಗಳು | ಶೇ. 5.4 | ಶೇ. 6.3 | ಏರಿಕೆ |
| ಪ್ಲಾಸ್ಟಿಕ್ ಮತ್ತು ಪ್ಲಾಸ್ಟಿಕ್ ಉತ್ಪನ್ನಗಳು | ಶೇ. 4.6 | ಶೇ. 3.9 | ಇಳಿಕೆ |
| ರತ್ನ, ಬೆಲೆಬಾಳುವ ಲೋಹಗಳು, ಆಭರಣ | ಶೇ. 10.3 | ಶೇ. 3.8 | ಇಳಿಕೆ |
| ಸಾವಯವ ರಾಸಾಯನಿಕಗಳು | ಶೇ. 4.5 | ಶೇ. 3.8 | ಇಳಿಕೆ |
| ಆಟೋಮೊಬೈಲ್ ಮತ್ತು ಆಟೋ ಭಾಗಗಳು | ಶೇ. 3.7 | ಶೇ. 3.4 | ಇಳಿಕೆ |
| ಇತರ ರಾಸಾಯನಿಕಗಳು | ಶೇ. 2.5 | ಶೇ. 2.7 | ಏರಿಕೆ |
| ಕಬ್ಬಿಣ ಮತ್ತು ಉಕ್ಕು | ಶೇ. 2.4 | ಶೇ. 2.5 | ಏರಿಕೆ |
| ಔಷಧಗಳು | ಶೇ. 1.9 | ಶೇ. 2.3 | ಏರಿಕೆ |
| ತಾಮ್ರ ಮತ್ತು ಉತ್ಪನ್ನಗಳು | ಶೇ. 0.8 | ಶೇ. 1.9 | ಏರಿಕೆ |
| ಅಲ್ಯುಮಿನಿಯಂ ಮತ್ತು ಉತ್ಪನ್ನಗಳು | ಶೇ. 1.1 | ಶೇ. 1.5 | ಏರಿಕೆ |
| ಕಬ್ಬಿಣ ಮತ್ತು ಉಕ್ಕಿನ ವಸ್ತುಗಳು | ಶೇ. 1.9 | ಶೇ. 1.5 | ಇಳಿಕೆ |
| ಖನಿಜ ಇಂಧನಗಳು ಮತ್ತು ತೈಲಗಳು | ಶೇ. 2.4 | ಶೇ. 1.4 | ಇಳಿಕೆ |

### ಕೃಷಿ ಕ್ಷೇತ್ರಕ್ಕೆ ಸಂಪೂರ್ಣ ರಕ್ಷಣೆ

**ಒ**ಪ್ಪಂದದಲ್ಲಿ ಭಾರತ ತನ್ನ ಕೃಷಿ ಕ್ಷೇತ್ರಕ್ಕೆ ಸಂಪೂರ್ಣ ರಕ್ಷಣೆ ಒದಗಿಸಿದೆ. ಹಾಲು, ಅಕ್ಕಿ, ಗೋಧಿ, ಕಾಫಿ, ಟೀ, ಸಾಂಬಾರ ಪದಾರ್ಥಗಳ ಮೇಲಿನ ಆಮದು ಸುಂಕದಲ್ಲಿ ಯುರೋಪ್‌ಗೆ ಯಾವುದೇ ರಿಯಾಯಿತಿ ನೀಡಿಲ್ಲ ಎಂದು ವಾಣಿಜ್ಯ ಸಚಿವಾಲಯ ಸ್ಪಷ್ಟಪಡಿಸಿದೆ. ಸಣ್ಣ ರೈತರ ಹಿತದೃಷ್ಟಿಯಿಂದ ಕೋಳಿ, ಮೀನು, ಹಣ್ಣು ಮತ್ತು ತರಕಾರಿಗಳನ್ನು ಕೂಡ ಈ ಪಟ್ಟಿಯಲ್ಲಿ ಸೇರಿಸಲಾಗಿದೆ. ಆದರೆ, ಭಾರತದಿಂದ ರಫ್ತಾಗುವ ಟೀ, ಕಾಫಿ ಮತ್ತು ದ್ರಾಕ್ಷಿಯಂಥ ಕೃಷಿ ಉತ್ಪನ್ನಗಳಿಗೆ ಯುರೋಪ್ ಮಾರುಕಟ್ಟೆಯಲ್ಲಿ ವಿಶೇಷ ಆದ್ಯತೆ ಸಿಗಲಿದೆ.

## ರಕ್ಷಣೆ-ಭದ್ರತಾ ಒಪ್ಪಂದಕ್ಕೂ ಸಹಿ

**ಭಾ**ರತ-ಐರೋಪ್ಯ ಒಕ್ಕೂಟ ಯೂಕ್ರೇನ್ ಯುದ್ಧದ ಕುರಿತ ತಮ್ಮ ಭಿನ್ನಾಭಿಪ್ರಾಯ ಬದಿಗಿಟ್ಟು, ಐತಿಹಾಸಿಕ ರಕ್ಷಣೆ ಮತ್ತು ಭದ್ರತಾ ಒಪ್ಪಂದಕ್ಕೂ ಸಹಿ ಮಾಡಿವೆ. ಈ ಮೂಲಕ ಮುಂದಿನ ಐದು ವರ್ಷಗಳಿಗಾಗಿ ಸಮಗ್ರ ವ್ಯೂಹಾತ್ಮಕ ಕಾರ್ಯಸೂಚಿ ಅಳವಡಿಸಿಕೊಳ್ಳಲಾಗಿದೆ. ಕಡಲ ಭದ್ರತೆ, ರಕ್ಷಣಾ ಉದ್ಯಮ, ತಂತ್ರಜ್ಞಾನ, ಸೈಬರ್ ಭದ್ರತೆ ಮತ್ತು ಭಯೋತ್ಪಾದನೆ ನಿಗ್ರಹದಲ್ಲಿ ಸಹಕಾರ ಈ ಒಪ್ಪಂದದಲ್ಲಿವೆ. ರಕ್ಷಣೆಗೆ ಸಂಬಂಧಿಸಿದ ಗೌಪ್ಯ ಮಾಹಿತಿಗಳ ವಿನಿಮಯಕ್ಕೂ ಈ ಮೂಲಕ ಚಾಲನೆ ಸಿಕ್ಕಂತಾಗಿದೆ. ರಕ್ಷಣಾ ಉಪಕರಣಗಳನ್ನು ಜಂಟಿಯಾಗಿ ಅಭಿವೃದ್ಧಿಪಡಿಸುವುದು ಮತ್ತು ಉತ್ಪಾದಿಸುವುದಕ್ಕೆ ಒತ್ತು ನೀಡಲಾಗಿದ್ದು, ಇದಕ್ಕಾಗಿ 'ಭಾರತ-ಇಯು ರಕ್ಷಣಾ ಉದ್ಯಮ ವೇದಿಕೆ' ಸ್ಥಾಪಿಸುವುದಕ್ಕೂ ನಿರ್ಧರಿಸಲಾಗಿದೆ.

## ರಫ್ತುದಾರರಿಗೆ ನವಚೈತನ್ಯ

**ಭಾ**ರತದ ರಫ್ತುದಾರರಿಗೆ, ವಿಶೇಷವಾಗಿ ಜವಳಿ, ಚರ್ಮ, ಪಾದರಕ್ಷೆ ಮತ್ತು ಆಭರಣ ಉದ್ಯಮಗಳಿಗೆ ಈ ಒಪ್ಪಂದ ಹೊಸ ಚೈತನ್ಯ ನೀಡಿದೆ. ಪ್ರಸ್ತುತ ಯುರೋಪ್ ಮಾರುಕಟ್ಟೆಯಲ್ಲಿ ಭಾರತೀಯ ಉತ್ಪನ್ನಗಳು ಶೇ.12ರಿಂದ 26ರಷ್ಟು ಸುಂಕ ಎದುರಿಸುತ್ತಿವೆ. ಇದರಿಂದಾಗಿ, ಶೂನ್ಯ ಸುಂಕದ ಲಾಭ ಪಡೆಯುತ್ತಿರುವ ಬಾಂಗ್ಲಾದೇಶ ಮತ್ತು ವಿಯೆಟ್ನಾಂ ಎದುರು ಭಾರತ ಹಿನ್ನಡೆ ಅನುಭವಿಸುತ್ತಿತ್ತು. ಆದರೆ ಈ ಒಪ್ಪಂದದ ಮೂಲಕ ಭಾರತಕ್ಕೂ ಶೂನ್ಯ ಸುಂಕ ಪ್ರವೇಶ ಸಿಗಲಿದ್ದು ಸ್ಪರ್ಧಾತ್ಮಕತೆ ಹೆಚ್ಚಲಿದೆ. ಇದರಿಂದ ಜವಳಿ ರಫ್ತು 7 ಬಿಲಿಯನ್ ಡಾಲರ್‌ನಿಂದ 30-40 ಬಿಲಿಯನ್ ಡಾಲರ್‌ಗೆ ಏರುವ ಮತ್ತು ಲಕ್ಷಾಂತರ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ ಎನ್ನುತ್ತಾರೆ ವಾಣಿಜ್ಯ ಸಚಿವ ಪಿಯೂಷ್ ಗೋಯಲ್.

### ಅಗ್ಗಕ್ಕೂ ಮಿತಿಯ ಹಗ್ಗ

**ಒ**ಪ್ಪಂದದಿಂದಾಗಿ ಯುರೋಪ್‌ನ ಐಷಾರಾಮಿ ಕಾರುಗಳ ಆಮದು ಸುಂಕ ಇಳಿಯಲಿದೆ. ಯುರೋಪಿನ 25 ಲಕ್ಷ ರೂ.ಗೂ ಮೇಲ್ಪಟ್ಟ ಬೆಲೆಯ ಐಷಾರಾಮಿ ಕಾರುಗಳ ಆಮದು ಸುಂಕ ಮುಂದಿನ 10 ವರ್ಷಗಳಲ್ಲಿ ಶೇ. 110ರಿಂದ 10ಕ್ಕೆ ಇಳಿಯಲಿದೆ. ಹಾಗಂತ ಯು'ರೋಪ್'ನ ಐಷಾರಾಮಿ ಕಾರುಗಳು ಭಾರತದಲ್ಲಿ ಅಗ್ಗದಲ್ಲಿ ಸಿಗುವಂತಾದರೂ ಅದಕ್ಕೆ ಮಿತಿಯ 'ಹಗ್ಗ' ಹಾಕಲಾಗಿದೆ. ಅಂದರೆ, ಈ ಮಾರಾಟಕ್ಕೆ ವಾರ್ಷಿಕ 2.5 ಲಕ್ಷ ವಾಹನಗಳ ಮಿತಿ ವಿಧಿಸಲಾಗಿದೆ. ಇದರಿಂದ ಮರ್ಸಿಡಿಸ್, ಬಿಎಂಡಬ್ಲ್ಯು, ಆಡಿ ಮುಂತಾದ ಕಂಪನಿಗಳಿಗೆ ಲಾಭವಾಗಲಿದ್ದು, ದೇಶೀಯ ವಾಹನ ರಫ್ತಿಗೂ ಅವಕಾಶ ಕಲ್ಪಿಸಲಾಗಿದೆ.

> **ಭಾ**ರತ- ಐರೋಪ್ಯ ಒಕ್ಕೂಟದ ನಡುವೆ ಏರ್ಪಟ್ಟಿರುವ 'ಐತಿಹಾಸಿಕ' ಮುಕ್ತ ವ್ಯಾಪಾರ ಒಪ್ಪಂದವು 'ಆತ್ಮನಿರ್ಭರ ಭಾರತ' ಅಭಿಯಾನಕ್ಕೆ ವೇಗ ನೀಡಲಿದೆ. ಇದು 'ಮೇಕ್ ಇನ್ ಇಂಡಿಯಾ, ಮೇಕ್ ಫಾರ್ ದ ವರ್ಲ್ಡ್' ಸಂಕಲ್ಪವನ್ನು ಬಲಪಡಿಸುವುದಲ್ಲದೆ, ಲಕ್ಷಾಂತರ ಭಾರತೀಯ ಯುವಜನರಿಗೆ ಅಸಂಖ್ಯಾತ ಅವಕಾಶಗಳನ್ನು ತೆರೆಯಲಿದೆ.
>
> I ನರೇಂದ್ರ ಮೋದಿ ಪ್ರಧಾನಿ

## ಆಯುಷ್ ವೈದ್ಯರಿಗೂ ಅನುಕೂಲ

**ಭಾ**ರತ-ಇಯು ಎಫ್‌ಟಿಎನಿಂದಾಗಿ ಇನ್ಮುಂದೆ ಭಾರತೀಯ ಆಯುಷ್ ವೈದ್ಯರು ಯುರೋಪ್ ದೇಶಗಳಲ್ಲಿ ಅಧಿಕೃತವಾಗಿ ಸೇವೆ ನೀಡಲು ಸಾಧ್ಯವಾಗಲಿದೆ. ಕೇರಳದ ಆರ್ಯ ವೈದ್ಯಶಾಲಾ ಚಾರಿಟಬಲ್ ಹಾಸ್ಪಿಟಲ್‌ನಲ್ಲಿ ಬುಧವಾರ ಆಯೋಜಿಸಿದ್ದ ಶತಮಾನೋತ್ಸವದಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಭಾರತದಲ್ಲಿ ಪಡೆದ ಪದವಿಗಳ ಆಧಾರದ ಮೇಲೆ ಯುರೋಪ್‌ನಲ್ಲಿ ಅಭ್ಯಾಸ ಮಾಡಲು ಅವಕಾಶ ಸಿಗುತ್ತಿರುವುದು ಆಯುರ್ವೇದ ಮತ್ತು ಯೋಗ ಕ್ಷೇತ್ರಕ್ಕೆ ದೊರೆತ ಜಾಗತಿಕ ಮನ್ನಣೆ. ಈ ಒಪ್ಪಂದ ಯುರೋಪ್‌ನಲ್ಲಿ ಆಯುಷ್ ವೆಲ್‌ನೆಸ್ ಕೇಂದ್ರಗಳನ್ನು ತೆರೆಯಲು ಮತ್ತು ಯುವ ವೈದ್ಯರಿಗೆ ವಿಪುಲ ಉದ್ಯೋಗಾವಕಾಶಗಳನ್ನು ಒದಗಿಸಲಿದೆ ಎಂದಿದ್ದಾರೆ.

## ಅನಿರ್ಬಂಧಿತ ಸಂಚಾರಕ್ಕೆ ಅನುವು

**ಭಾ**ರತದ ವಿದ್ಯಾರ್ಥಿಗಳು ಮತ್ತು ವೃತ್ತಿಪರರಿಗೆ ಯುರೋಪ್‌ನಲ್ಲಿ ವಿಪುಲ ಅವಕಾಶಗಳನ್ನು ಈ ಒಪ್ಪಂದ ತೆರೆದಿಟ್ಟಿದೆ. ಯುರೋಪ್‌ಗೆ ತೆರಳುವ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ ಮೇಲೆ ಯಾವುದೇ ಮಿತಿ ಇರುವುದಿಲ್ಲ. ವಿದ್ಯಾರ್ಥಿಗಳು, ಸಂಶೋಧಕರು ಮತ್ತು ನುರಿತ ಕೆಲಸಗಾರರಿಗೆ ಯುರೋಪ್‌ನಲ್ಲಿ ನೆಲೆಸಲು ಮತ್ತು ಕೆಲಸ ಮಾಡಲು ವೀಸಾ ಪ್ರಕ್ರಿಯೆ ಸರಳಗೊಳ್ಳಲಿದೆ. ಮಾಹಿತಿ ತಂತ್ರಜ್ಞಾನ, ಸಂಶೋಧನೆ ಮತ್ತು ಅಭಿವೃದ್ಧಿ, ಉನ್ನತ ಶಿಕ್ಷಣ ಕ್ಷೇತ್ರದ ವೃತ್ತಿಪರರಿಗೆ ಯುರೋಪ್ ಪ್ರವೇಶ ಸುಲಭವಾಗಲಿದೆ. ಹೋಟೆಲ್ ಉದ್ಯಮಕ್ಕೆ ಸಂಬಂಧಿಸಿದಂತೆ, ಹಾಸ್ಪಿಟಾಲಿಟಿ ವಿದ್ಯಾರ್ಥಿಗಳಿಗೆ ಯುರೋಪ್‌ನಲ್ಲಿ ತರಬೇತಿ ಪಡೆಯಲಿಕ್ಕೂ ಇದು ಉತ್ತಮ ಅವಕಾಶವಾಗಬಲ್ಲದು. ವಿಶ್ವದ ಅತಿದೊಡ್ಡ ಸಂಶೋಧನಾ ಕಾರ್ಯಕ್ರಮವಾದ 'ಹೊರೈಜನ್ ಯುರೋಪ್' ಜತೆಗಿನ ಒಡಂಬಡಿಕೆ ಭಾರತದ ಸ್ಟಾರ್ಟ್‌ಅಪ್‌ಗಳು ಮತ್ತು ವಿಜ್ಞಾನಿಗಳಿಗೆ ಹೊಸ ದಾರಿಗಳನ್ನು ತೆರೆಯಲಿದೆ.





Scanned with OKEN Scanner

## ಅಪಘಾತ ಪ್ರಕರಣದಲ್ಲಿ ರಾಜಕೀಯ ಬೇಡ ಎಂದ ಶರದ್ ಪವಾರ್ | ತನಿಖೆಗೆ ಮಮತಾ, ಖರ್ಗೆ ಆಗ್ರಹ

# ಪವರ್‌ಫುಲ್ ರಾಜಕಾರಣಿಯ ದುರಂತ ಅಂತ್ಯ

**ಬಾರಾಮತಿ(ಪುಣೆ):** ಅಜಿತ್ ಪವಾರ್ ಇದ್ದ ವಿಮಾನ ಬಾರಾಮತಿ ಬಳಿ ಪತನಗೊಂಡ ಭೀಕರ ದೃಶ್ಯವನ್ನು ಕಣ್ಣಾರೆ ಕಂಡ ಸ್ಥಳೀಯರು ಆಘಾತಕ್ಕೆ ಒಳಗಾಗಿದ್ದಾರೆ. 'ವಿಮಾನ ಕೆಳಗೆ ಬರುತ್ತಿದ್ದಂತೆ ನಿಯಂತ್ರಣ ತಪ್ಪಿ ನೆಲಕ್ಕೆ ಅಪ್ಪಳಿಸಿತು. ಕೂಡಲೇ ಭಾರಿ ಸ್ಫೋಟವಾಯಿತು. ನಂತರ 4-5 ಬಾರಿ ಮತ್ತೆ ಸ್ಫೋಟದ ಸದ್ದು ಕೇಳಿಸಿತು' ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದ್ದಾರೆ. ಸ್ಥಳೀಯರು ರಕ್ಷಣೆಗೆ ಧಾವಿಸಿದರೂ ಬೆಂಕಿಯ ಜ್ವಾಲೆ ತೀವ್ರವಾಗಿದ್ದರಿಂದ



ಹತ್ತಿರ ಹೋಗಲು ಸಾಧ್ಯವಾಗಲಿಲ್ಲ ಎಂದಿದ್ದಾರೆ. 'ವಿಮಾನ ಮೊದಲು ಲ್ಯಾಂಡ್ ಆಗಲು ವಿಫಲವಾಗಿ, ಮತ್ತೆ ವಾಪಸ್ ಬಂದು ಇಳಿಯುವ ಪ್ರಯತ್ನದಲ್ಲಿ ರನ್‌ವೇಗಿಂತ ಮೊದಲೇ ಬಿದ್ದಿದೆ. ಬೆಂಕಿ ನಂದಿಸಿದ ನಂತರ ನೋಡಿದರೆ, ಸುಟ್ಟು ಕರಕಲಾಗಿದ್ದ ಶವವೊಂದಕ್ಕೆ ತಲೆಯೇ ಇರಲಿಲ್ಲ. ಊದಿಕೊಂಡಿದ್ದ ಆ ದೇಹ ಅಜಿತ್ ಪವಾರ್ ಅವರದ್ದು ಎಂದು ನಂತರ ಗುರುತಿಸಲಾಯಿತು' ಎಂದು ಸ್ಥಳೀಯ ಮಹಿಳೆಯೊಬ್ಬರು ಆಘಾತ ವ್ಯಕ್ತಪಡಿಸಿದ್ದಾರೆ.

**ವಾಚ್‌ನಿಂದಾಗಿ ಶವದ ಗುರುತು ಪತ್ತೆ:** ಅಪಘಾತದಲ್ಲಿ ಅಜಿತ್ ಪವಾರ್ ದೇಹ ಸುಟ್ಟು ಕರಕಲಾಗಿದ್ದು ಗುರುತಿಸಲಾಗದ ಪರಿಸ್ಥಿತಿಯಲ್ಲಿತ್ತು. ಅವರು ಧರಿಸಿದ್ದ ಕೈಗಡಿಯಾರದ ಮೂಲಕ ಗುರುತು ಪತ್ತೆ ಹಚ್ಚಲಾಯಿತು. ಗಡಿಯಾರ ಅವರ ಎನ್‌ಸಿಪಿ ಪಕ್ಷದ ಅಧಿಕೃತ ಚುನಾವಣಾ ಚಿಹ್ನೆಯಾಗಿದ್ದರಿಂದ ಈ ಸಂಗತಿ ಹೆಚ್ಚಿನ ಗಮನ ಸೆಳೆದಿದೆ.

**ಇದು ಅಪಘಾತ, ರಾಜಕೀಯ ಬೇಡ:** ತಮ್ಮ ಅಣ್ಣನ ಮಗ ಅಜಿತ್ ಪವಾರ್ ಅಗಲಿಕೆಗೆ ಹಿರಿಯ ನಾಯಕ ಶರದ್ ಪವಾರ್ ತೀವ್ರ ಶೋಕ ವ್ಯಕ್ತಪಡಿಸಿದ್ದು, ಈ ದುರಂತವನ್ನು ರಾಜಕೀಯಗೊಳಿಸದಂತೆ ಮನವಿ ಮಾಡಿದ್ದಾರೆ. 'ಕೆಲವರು ಈ ಘಟನೆಯನ್ನು ರಾಜಕೀಯಗೊಳಿಸಲು ಪ್ರಯತ್ನಿಸುತ್ತಿರುವುದು ನನಗೆ ತುಂಬಾ ನಿರಾಸೆ ತಂದಿದೆ. ಇದರಲ್ಲಿ ಯಾವುದೇ ರಾಜಕೀಯವಿಲ್ಲ, ಇದೊಂದು ಅನಿರೀಕ್ಷಿತ ಅಪಘಾತವಷ್ಟೇ. ದಯವಿಟ್ಟು ಈ ಸಾವಿನಲ್ಲಿ ರಾಜಕೀಯ ತರಬೇಡಿ' ಎಂದು ಕೋರಿದ್ದಾರೆ. ಅಜಿತ್ ಸಾವು ಇಡೀ ಮಹಾರಾಷ್ಟ್ರಕ್ಕೆ ತುಂಬಲಾರದ ನಷ್ಟ. ಇಂಥ ವ್ಯಕ್ತಿಯನ್ನು ಕಳೆದುಕೊಂಡಿರುವುದು ನಿಜಕ್ಕೂ ತೀವ್ರ ಆಘಾತಕಾರಿ ಎಂದು ಶರದ್ ಹೇಳಿದ್ದಾರೆ.




ದುರಂತದ ನಂತರ ವಿಮಾನದ ಅವಶೇಷ

### ಲಿಯರ್‌ಜೆಟ್ 200 ಅಪಘಾತ

ಡಿಸಿಎಂ ಅಜಿತ್ ಪವಾರ್ ಸಾವಿಗೆ ಕಾರಣವಾದ 'ಲಿಯರ್‌ಜೆಟ್ 45' ವಿಮಾನಕ್ಕೆ ಜಾಗತಿಕವಾಗಿ 200 ಅಪಘಾತಗಳ ನಂಟಿರುವುದು ಬೆಳಕಿಗೆ ಬಂದಿದ್ದು, ಈ ವಿಮಾನದ ಸುರಕ್ಷತೆ ಬಗ್ಗೆ ಗಂಭೀರ ಚರ್ಚೆಗಳು ಶುರುವಾಗಿವೆ. ಕೆನಡಾದ ಬೊಂಬಾರ್ಡಿಯರ್ ಕಂಪನಿ ಇದರ ಉತ್ಪಾದನೆಯನ್ನು 2021ರಲ್ಲೇ ನಿಲ್ಲಿಸಿದ್ದರೂ ಚಾರ್ಟರ್ ಸೇವೆಗಳಲ್ಲಿ ಇದು ಇನ್ನೂ ವ್ಯಾಪಕವಾಗಿ ಬಳಕೆಯಲ್ಲಿದೆ. ಚಿಕ್ಕ ರನ್‌ವೇಗಳಲ್ಲಿ ಕಾರ್ಯನಿರ್ವಹಿಸಬಲ್ಲದು ಎಂಬ ಖ್ಯಾತಿ ಇದ್ದರೂ ಈ ವಿಮಾನದ ಹಳೆಯ ಅಪಘಾತಗಳ ಇತಿಹಾಸ ಈಗ ಆತಂಕ ಮೂಡಿಸಿದೆ. 'ಲಿಯರ್‌ಜೆಟ್ 45' ವಿಮಾನ 2023ರ ಸೆ.14ರಂದು ಮುಂಬೈ ವಿಮಾನ ನಿಲ್ದಾಣದಲ್ಲಿ ಭಾರಿ ಮಳೆ ನಡುವೆ ಲ್ಯಾಂಡಿಂಗ್ ವೇಳೆ ಸ್ಕಿಡ್ ಆಗಿ ಅಪಘಾತಕ್ಕೀಡಾಗಿತ್ತು. ಅಂದು ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದರು.

### ಸುಪ್ರೀಂ ನಿಗಾದಲ್ಲಿ ತನಿಖೆ ಆಗಲಿ

ಅಜಿತ್ ಪವಾರ್ ವಿಮಾನ ಅಪಘಾತದಲ್ಲಿ ಸಾವಿಗೀಡಾದ ಬಗ್ಗೆ ಪಶ್ಚಿಮಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗಂಭೀರ ಅನುಮಾನ ವ್ಯಕ್ತಪಡಿಸಿದ್ದು, ಇದು ರಾಜಕೀಯ ಸಂಚಿರಬಹುದು ಎಂಬ ಶಂಕೆ ವ್ಯಕ್ತಪಡಿಸಿದ್ದಾರೆ. ಅಜಿತ್ ಪವಾರ್ ಬಿಜೆಪಿ ನೇತೃತ್ವದ ಮೈತ್ರಿಕೂಟದಿಂದ ಹೊರಬರುವ ಸುದ್ದಿಗಳಿದ್ದವು. ಇಂಥ ಸಂದರ್ಭದಲ್ಲಿ ಈ ಹಠಾತ್ ಸಾವು ಸಂಭವಿಸಿರುವುದು ಸಂಶಯಾಸ್ಪದ. ಇದನ್ನು ಸಾಮಾನ್ಯ ಅಪಘಾತ ಎಂದು ತಳ್ಳಿಹಾಕಲು ಸಾಧ್ಯವಿಲ್ಲ. ಈ ಪ್ರಕರಣದ ಸತ್ಯಾಸತ್ಯತೆ ತಿಳಿಯಲು ಸುಪ್ರೀಂಕೋರ್ಟ್ ಮೇಲ್ವಿಚಾರಣೆಯಲ್ಲೇ ತನಿಖೆ ನಡೆಯಬೇಕು. ಬೇರೆ ಯಾವುದೇ ತನಿಖಾ ಸಂಸ್ಥೆಗಳ ಮೇಲೆ ನಮಗೆ ನಂಬಿಕೆ ಇಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ.



### ಕರ್ನಾಟಕ ವಿಧಾನಸಭೆ ಕಂಬನಿ

ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರ ನಿಧನಕ್ಕೆ ಕರ್ನಾಟಕ ವಿಧಾನಸಭೆಯಲ್ಲಿ ಸಂತಾಪ ವ್ಯಕ್ತಪಡಿಸಲಾಯಿತು. ಸ್ಪೀಕರ್ ಮಂಡನೆ ಮಾಡಿದ ಸಂತಾಪ ನಿರ್ಣಯ ಬೆಂಬಲಿಸಿ ಸಚಿವರಾದ ಎಚ್.ಕೆ.ಪಾಟೀಲ್, ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಸಚಿವರಾದ ಲಕ್ಷ್ಮಿ ಹೆಬ್ಬಾಳ್ಕರ್, ಮಾಜಿ ಸಚಿವ ಲಕ್ಷ್ಮಣ ಸವದಿ ಅವರು ಮಾತನಾಡಿದರು.

- ವಿಮಾನದ ಮುಖ್ಯ ಪೈಲಟ್ ಕ್ಯಾಪ್ಟನ್ ಸುಮಿತ್ ಕಪೂರ್‌ಗೆ 16,000ರಿಂದ 16,500 ಗಂಟೆಗಳ ಸುದೀರ್ಘ ಹಾರಾಟದ ಅನುಭವ ಇತ್ತು.
- ಸಹ ಪೈಲಟ್ ಕ್ಯಾಪ್ಟನ್ ಶಾಂಭವಿ ಪಾಠಕ್‌ಗೆ 1,500 ಗಂಟೆಗಳ ಹಾರಾಟದ ಅನುಭವವಿತ್ತು. ಇಬ್ಬರೂ ಅನುಭವಿ ಮತ್ತು ದಕ್ಷ ಪೈಲಟ್‌ಗಳಾಗಿದ್ದರು ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ.
- ಶಾಂಭವಿ ಪಾಠಕ್(25) ಮನೆಯಲ್ಲಿ ಅವರ ಮದುವೆ ಮಾತುಕತೆಗಳು ನಡೆಯುತ್ತಿದ್ದವು. ಏರ್‌ಫೋರ್ಸ್ ಶಾಲೆ ಶಿಕ್ಷಕಿಯಾಗಿರುವ ಅವರ ತಾಯಿ, ಮಗಳ ಮದುವೆಗೆ ಸಿದ್ಧತೆ ನಡೆಸುತ್ತಿದ್ದು, ವರನಿಗಾಗಿ ಹುಡುಕಾಟವನ್ನೂ ನಡೆಸುತ್ತಿದ್ದರು ಎನ್ನಲಾಗಿದೆ.

### ಐದು ಪ್ರಶ್ನೆಗಳು

1. ಬೆಳಗ್ಗೆ 8:43ಕ್ಕೆ ಲ್ಯಾಂಡಿಂಗ್‌ಗೆ ಅನುಮತಿ ನೀಡಿದ ನಂತರ ಪೈಲಟ್‌ನಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಆ ಅಂತಿಮ ಕ್ಷಣಗಳಲ್ಲಿ ಹಠಾತ್ ತಾಂತ್ರಿಕ ದೋಷ ಅಥವಾ ಕಾಕ್‌ಪಿಟ್‌ನಲ್ಲಿ ತುರ್ತು ಪರಿಸ್ಥಿತಿ ಎದುರಾಯಿತೇ?
2. ಹವಾಮಾನ ವೈಪರೀತ್ಯ ಮತ್ತು ಕಡಿಮೆ ಗೋಚರತೆಯಿದ್ದರೂ ಏರ್‌ಫೀಲ್ಡ್‌ನಲ್ಲಿ ಇಳಿಯಲು ಪೈಲಟ್ ಏಕೆ ನಿರ್ಧರಿಸಿದರು? ಮೊದಲ ಬಾರಿ ವಿಫಲವಾದಾಗ ಬೇರೆಡೆಗೆ ಏಕೆ ತೆರಳಲಿಲ್ಲ?
3. ಲ್ಯಾಂಡಿಂಗ್ ಅನುಮತಿ ನೀಡುವವರೆಗೂ ಪೈಲಟ್ ನಿರಂತರ ಸಂಪರ್ಕದಲ್ಲಿದ್ದರು. ಆದರೆ ಅನುಮತಿ ಸಿಕ್ಕ ತಕ್ಷಣ ಸಂಪರ್ಕ ಕಡಿತಗೊಂಡಿತು. ಇದು ಸಂವಹನ ವೈಫಲ್ಯವೇ ಅಥವಾ ಪೈಲಟ್‌ಗಳಿಗೆ ಎದುರಾದ ತೊಂದರೆಯೇ?
4. ವಿಮಾನವು ರನ್-ವೇ ತಲುಪುವ ಮುನ್ನವೇ ಬೆಂಕಿಗೆ ಆಹುತಿಯಾಗಿದೆ. ಇದಕ್ಕೆ ಇಂಜಿನ್ ವೈಫಲ್ಯ, ಇಂಧನ ಸೋರಿಕೆ ಅಥವಾ ಹಕ್ಕಿ ಡಿಕ್ಕಿ ಹೊಡೆದಿದ್ದು ಕಾರಣವೇ?
5. ವಿಮಾನವು ಇಳಿಯುವಾಗ ಅದರ ವೇಗ ಮತ್ತು ಎತ್ತರ ನಿಗದಿತ ಮಾನದಂಡದ ಪ್ರಕಾರ ಇತ್ತೇ ಅಥವಾ ಮಾನದಂಡಗಳನ್ನು ಮೀರಿ ಲ್ಯಾಂಡಿಂಗ್‌ಗೆ ಯತ್ನಿಸಲಾಯಿತೇ?

## ಮಹಾ ರಾಜಕೀಯದ ದಾದಾ

**ಮುಂಬೈ:** ಮಹಾರಾಷ್ಟ್ರ ರಾಜಕಾರಣದಲ್ಲಿ ಅಜಿತ್ ಪವಾರ್ 'ಅಜಿತ್ ದಾದಾ' (ಹಿರಿಯಣ್ಣ) ಎಂದೇ ಹೆಸರುವಾಸಿ. ಚಿಕ್ಕಪ್ಪ ಶರದ್ ಪವಾರರ ಹಾಗೆ ಪವರ್‌ಫುಲ್ ರಾಜಕಾರಣಿಯಾಗಿ ಮೆರೆದವರು. ಅವರ ಸಾವು ರಾಜ್ಯ ರಾಜಕಾರಣದಲ್ಲಿ ಒಂದು ಬಗೆಯ ನಿರ್ವಾತ ಸೃಷ್ಟಿಸಿರುವುದು ಸುಳ್ಳಲ್ಲ. ರಾಜಕಾರಣದ ಎಲ್ಲ ಪಟ್ಟುಗಳನ್ನು ಕರಗತಗೊಳಿಸಿಕೊಂಡಿದ್ದ ಅವರು ಆರು ಸಲ ಉಪಮುಖ್ಯಮಂತ್ರಿ ಹುದ್ದೆಗೇರಿದವರು. ಇದಲ್ಲದೆ, ಹಣಕಾಸು, ಜಲಸಂಪನ್ಮೂಲ ಇತ್ಯಾದಿ ಪ್ರಮುಖ ಖಾತೆಗಳನ್ನು ನಿಭಾಯಿಸಿದವರು.

ಅನಂತರಾವ್ -ಆಶಾತಾಯಿ ಪವಾರ್ ದಂಪತಿಯ ಮಗನಾಗಿ 1959ರ ಜುಲೈ 22ರಂದು ಅಜಿತ್ ಜನನ. ಅನಂತರಾವ್ ಅವರು ಶರದ್ ಪವಾರರ ಹಿರಿಯ ಸಹೋದರ. 1982ರಲ್ಲಿ ಸಹಕಾರಿ ರಂಗದ ಮೂಲಕ ಸಾರ್ವಜನಿಕ ಜೀವನ ಪ್ರವೇಶ. 1991ರಲ್ಲಿ ಪುಣೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷರಾಗಿ ಆಯ್ಕೆ. 1991ರಲ್ಲಿ ಬಾರಾಮತಿಯಿಂದ ಲೋಕಸಭಾ ಸದಸ್ಯರಾಗಿ ಆಯ್ಕೆ. ಎರಡೇ ತಿಂಗಳಲ್ಲಿ ಶರದ್ ಪವಾರ್ ಸಲುವಾಗಿ ಸೀಟು ತೆರವುಗೊಳಿಸಿ, ವಿಧಾನಸಭಾ ಉಪಚುನಾವಣೆಯಲ್ಲಿ ಆಯ್ಕೆ. ನಂತರ, 1995, 1999, 2004, 2009 ಮತ್ತು 2014ರಲ್ಲಿ ಸತತವಾಗಿ ಶಾಸಕರಾಗಿ ಆಯ್ಕೆ.


**ಶರದ್ ಪವಾರ್ ಜತೆ ಮುನಿಸು:** ರಾಜಕೀಯದ ಗಾಳಿ ಎತ್ತ ಬೀಸುತ್ತಿದೆ ಎಂಬುದನ್ನು ಅಂದಾಜಿಸಿ ಅದಕ್ಕೆ ತಕ್ಕಂತೆ ದಾಳ ಹೊಸೆಯುವಲ್ಲಿ ಅಜಿತ್ ಪವಾರ್ ಎತ್ತಿದ ಕೈ. ತಮ್ಮ ರಾಜಕೀಯ ಲೆಕ್ಕಾಚಾರಕ್ಕೆ ಅಡ್ಡಿಯಾಗುತ್ತದೆ ಎಂದಾದಲ್ಲಿ ಕೌಟುಂಬಿಕ ನಂಟಿನಾಚೆಗೂ ನಿರ್ಣಯ ತೆಗೆದುಕೊಳ್ಳಲು ಹಿಂದೆಮುಂದೆ ನೋಡುವವರಲ್ಲ ಎಂಬುದಕ್ಕೆ ಶರದ್ ಪವಾರ್ ಜತೆಗಿನ ಮುನಿಸೇ ಸಾಕ್ಷಿ. 2019ರಲ್ಲಿ ಶಿವಸೇನೆ ಮತ್ತು ಬಿಜೆಪಿ ಜತೆ ಅಜಿತ್ ಪವಾರರ ಎನ್‌ಸಿಪಿ ಸೇರಿ ಸರ್ಕಾರ ರಚನೆಯಾದರೂ, ಮೂರೇ ದಿನದಲ್ಲಿ ಅದು ಬಿದ್ದುಹೋಯಿತು. ನಂತರ, ಅಜಿತ್ ಪವಾರರು ಶಿವಸೇನೆ, ಕಾಂಗ್ರೆಸ್‌ನ ಮಹಾ ವಿಕಾಸ ಅಘಾಡಿ ಸೇರಿ ಸರ್ಕಾರ ರಚನೆಯಲ್ಲಿ ಕೈಜೋಡಿಸಿದರು. 2023ರ ಜುಲೈನಲ್ಲಿ ಶರದ್ ಪವಾರರ ಎನ್‌ಸಿಪಿಯಿಂದ ಅಜಿತ್ ಹೊರಬಂದು, ಬಿಜೆಪಿ-ಶಿವಸೇನೆ ಸರ್ಕಾರದ ಜತೆ ಕೈಜೋಡಿಸಿ ಉಪಮುಖ್ಯಮಂತ್ರಿಯಾದರು. ಇದರಿಂದ ಎನ್‌ಸಿಪಿ ವಿಭಜನೆಯಾಗಿ, ಪಕ್ಷದ ಚಿಹ್ನೆ ಮತ್ತು ಹೆಸರು ಕೂಡ ಅಜಿತ್ ಪಾಲಿಗೆ ಬಂತು. 2024ರ ಚುನಾವಣೆಯಲ್ಲಿ ಮಹಾಯುತಿ ಮೈತ್ರಿಕೂಟ ಗೆದ್ದು, ಅಜಿತ್ ಮತ್ತೆ ಉಪಮುಖ್ಯಮಂತ್ರಿಯಾದರು.

### ಮಹಾಯುತಿ ಸರ್ಕಾರಕ್ಕೆ ಸಮಸ್ಯೆ ಇಲ್ಲ

**2024ರಲ್ಲಿ** 30 ಸೀಟುಗಳಲ್ಲಿ ಸ್ಪರ್ಧಿಸಿದ್ದ ಅಜಿತ್ ಪವಾರರ ಎನ್‌ಸಿಪಿ 41 ಸ್ಥಾನಗಳನ್ನು ಗೆದ್ದರೆ, ಬಿಜೆಪಿ 132 ಮತ್ತು ಶಿವಸೇನೆ (ಶಿಂಧೆ ಬಣ) 57 ಸೀಟುಗಳಲ್ಲಿ ಜಯ ಸಾಧಿಸಿವೆ. ಮಹಾರಾಷ್ಟ್ರ ವಿಧಾನಸಭೆ ಬಲ 288. ಬಹುಮತಕ್ಕೆ 145 ಸ್ಥಾನಗಳು ಅಗತ್ಯ. ಮಹಾಯುತಿ ಒಟ್ಟಾರೆ 230 ಸೀಟು ಹೊಂದಿದ್ದು, ಒಂದೊಮ್ಮೆ ಅಜಿತ್ ಪವಾರ್‌ರ ಎನ್‌ಸಿಪಿ ಬೇರ್ಪಟ್ಟರೂ ಸರ್ಕಾರಕ್ಕೆ ತೊಂದರೆ ಇಲ್ಲ.

### ಬಾರಾಮತಿಯಲ್ಲೇ ಆರಂಭ-ಅಂತ್ಯ

ಪವಾರ್ ಕುಟುಂಬ ದಶಕಗಳಿಂದ ಬಾರಾಮತಿ ಕ್ಷೇತ್ರದ ಮೇಲೆ ಬಲವಾದ ಹಿಡಿತ ಹೊಂದಿದೆ. ಮೊದಲು ಶರದ್ ಪವಾರ್, ನಂತರ ಅಜಿತ್ ಪವಾರ್ ಇಲ್ಲಿ ಏಳಿಗೆ ಕಂಡರು. ಪವಾರ್ ಕುಟುಂಬದಲ್ಲಿ ರಾಜಕೀಯ ಭಿನ್ನಾಭಿಪ್ರಾಯ ಎಷ್ಟು ತಾರಕಕ್ಕೇರಿತ್ತೆಂದರೆ, 2024ರ ಲೋಕಸಭಾ ಚುನಾವಣೆಯಲ್ಲಿ ಬಾರಾಮತಿ ಕ್ಷೇತ್ರದಲ್ಲಿ ಶರದ್ ಪುತ್ರಿ ಸುಪ್ರಿಯಾ ಸುಳೆ ವಿರುದ್ಧ ಅಜಿತ್ ಅವರು ತಮ್ಮ ಪತ್ನಿ ಸುನೇತ್ರಾರನ್ನು ಕಣಕ್ಕಿಳಿಸಿದ್ದರು. ಸುಪ್ರಿಯಾ ಗೆದ್ದರು. ರಾಜಕೀಯ ಬದುಕಿಗೆ ಮಡಿಲಾಗಿ, ಎತ್ತರಕ್ಕೇರಲು ಕಾರಣವಾದ ಬಾರಾಮತಿ ಕ್ಷೇತ್ರದಲ್ಲೇ ವಿಮಾನಾಪಘಾತದಲ್ಲಿ ಅಜಿತ್ ಪವಾರ್ ಸಾವನ್ನಪ್ಪುವಂತಾದುದು ವಿಧಿಯಾಟವೆನ್ನಬಹುದೇನೋ.



### ವಿವಾದದ ಹಾದಿ

ಅಜಿತ್ ಪವಾರ್ ವಿವಾದಗಳನ್ನೂ ಮೈಮೇಲೆಳೆದು ಕೊಂಡಿದ್ದರು. ನೀರಾವರಿ ಹಗರಣದಲ್ಲಿ ಅವರ ಮೇಲೆ ಆರೋಪ ಕೇಳಿಬಂದಿತ್ತು. ಈ ಆಪಾದನೆಯನ್ನು ಅವರು ನಿರಾಕರಿಸಿದ್ದರು. ಅವರ ಪುತ್ರ ಪಾರ್ಥ ಪವಾರ್‌ಗೆ ಸೇರಿದ ಕಂಪನಿಗೆ ಪುಣೆ ಸನಿಹ ಮಾರುಕಟ್ಟೆ ದರಕ್ಕಿಂತ ಕಡಿಮೆ ಬೆಲೆಗೆ ಭೂಮಿ ನೀಡಲಾಗಿದೆಯೆಂದು ವಿಪಕ್ಷಗಳು ಆಪಾದಿಸಿದ್ದವು.

### ಪಕ್ಷಕ್ಕೆ ಪತ್ನಿಯೇ ಶಕ್ತಿಕೇಂದ್ರ?

ಅಜಿತ್ ಪವಾರರ ಪುತ್ರ ಪಾರ್ಥ 2019ರಲ್ಲಿ ಮಾವಲ್ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದರು. ಅವರ ಇನ್ನೊಬ್ಬ ಪುತ್ರ ಜಯ್ ಪವಾರ್ ಉದ್ಯಮದಲ್ಲಿ



ತೊಡಗಿಸಿಕೊಂಡಿದ್ದು, ರಾಜಕೀಯದಲ್ಲಿ ಆಸಕ್ತಿ ಹೊಂದಿಲ್ಲ. ಅನೇಕ ಉನ್ನತ ನಾಯಕರಿದ್ದರೂ ಅಜಿತ್ ಪವಾರ್ ಪತ್ನಿ, ರಾಜ್ಯಸಭಾ ಸದಸ್ಯೆ ಸುನೇತ್ರಾಗೆ ಪಕ್ಷದ ನೇತೃತ್ವ ನೀಡುವ ಸಾಧ್ಯತೆ ಗೋಚರಿಸಿದೆ. ಎನ್‌ಸಿಪಿ (ಅಜಿತ್ ಬಣ) ಪುನಃ ಶರದ್ ಪವಾರ್ ಬಣವನ್ನು ಸೇರುವ ಬಗ್ಗೆಯೂ ರಾಜ್ಯ ರಾಜಕೀಯದಲ್ಲಿ ಚರ್ಚೆಗಳು ಶುರುವಾಗಿವೆ.

## ವೈಮಾನಿಕ ದುರಂತಗಳಲ್ಲಿ ಮರೆಯಾದ ನಾಯಕರು


### ಸುಭಾಷ್ ಚಂದ್ರ ಬೋಸ್

ನೇತಾಜಿ ನಿಗೂಢ ಕಣ್ಮರೆ ಭಾರತದ ಇತಿಹಾಸದ ಅತಿದೊಡ್ಡ ರಹಸ್ಯಗಳಲ್ಲಿ ಒಂದು.



1945ರ ಆ. 18ರಂದು ಜಪಾನ್ ಆಕ್ರಮಿತ ಫಾರ್ಮೋಸಾದಲ್ಲಿ (ಈಗಿನ ತೈವಾನ್) ಬೋಸ್ ಪ್ರಯಾಣಿಸುತ್ತಿದ್ದ ವಿಮಾನ ಪತನವಾಯಿತು ಎಂದು ನಂಬಲಾಗಿದೆ. ಬೋಸ್ ರಷ್ಯಾಕ್ಕೆ ಹೋಗಲು ಜಪಾನಿನ ವಿಮಾನ ಏರಿದ್ದರು. ಟೇಕ್‌ಆಫ್ ಆದ ಕೆಲವೇ ಕ್ಷಣಗಳಲ್ಲಿ ವಿಮಾನ ಅಪಘಾತಕ್ಕೀಡಾಯಿತು. ಬೋಸ್ ಅದೇ ದಿನ ಸ್ಥಳೀಯ ಮಿಲಿಟರಿ ಆಸ್ಪತ್ರೆಯಲ್ಲಿ ನಿಧನರಾದರು ಎಂದು ಜಪಾನ್ ಸರ್ಕಾರ ಘೋಷಿಸಿತು. ಆದರೆ, ಬೋಸ್ ಬದುಕುಳಿದು ರಹಸ್ಯವಾಗಿ ಜೀವಿಸಿದ್ದರು ಎಂಬ ವಾದಗಳು ಇಂದಿಗೂ ಜೀವಂತವಾಗಿವೆ.

### ಸಂಜಯ್ ಗಾಂಧಿ



ಇಂದಿರಾ ಗಾಂಧಿ ಅವರ ಪುತ್ರ, 33 ವರ್ಷದ ಸಂಜಯ್ 1980ರ ಜೂ. 23ರ ಬೆಳಗ್ಗೆ ದೆಹಲಿಯ ಸಫ್ದರ್‌ಜಂಗ್ ವಿಮಾನ ನಿಲ್ದಾಣದಿಂದ 'ಪಿಟ್ಸ್ ಎಸ್2ಎ' ಎಂಬ ಪುಟ್ಟ ವಿಮಾನದಲ್ಲಿ ತರಬೇತಿ ಹಾರಾಟ ನಡೆಸುತ್ತಿದ್ದರು. ಆಗಸದಲ್ಲಿ ಸಾಹಸ ಪ್ರದರ್ಶನ (ಅಕ್ರೋಬ್ಯಾಟಿಕ್ಸ್) ಮಾಡಲು ಯತ್ನಿಸುತ್ತಿದ್ದಾಗ, ವಿಮಾನ ಪತನವಾಯಿತು. ಜತೆಗಿದ್ದ ಫ್ಲೈಯಿಂಗ್ ಇನ್‌ಸ್ಟ್ರಕ್ಟರ್ ಸುಭಾಷ್ ಸಕ್ಸೇನಾ ಕೂಡ ಸ್ಥಳದಲ್ಲೇ ಮೃತಪಟ್ಟರು.

### ಮಾಧವರಾವ್ ಸಿಂಧಿಯಾ



ಕಾಂಗ್ರೆಸ್ ನಾಯಕ, ಕೇಂದ್ರದ ಮಾಜಿ ಸಚಿವ ಮಾಧವರಾವ್ ಸಿಂಧಿಯಾ 2001ರ ಸೆ. 30ರಂದು ಉತ್ತರ ಪ್ರದೇಶದ ಮೈನ್‌ಪುರಿ ಜಿಲ್ಲೆಯಲ್ಲಿ ಸಂಭವಿಸಿದ 'ಬೀಚ್‌ಕ್ರಾಫ್ಟ್ ಕಿಂಗ್ ಏರ್ ಸಿ90' ವಿಮಾನದ ದುರಂತದಲ್ಲಿ ಮೃತಪಟ್ಟರು. ವಿಮಾನದಲ್ಲಿದ್ದ ನಾಲ್ವರು ಪತ್ರಕರ್ತರು ಮತ್ತು ಸಿಬ್ಬಂದಿ ಸೇರಿ 8 ಜನರು ಸಾವನ್ನಪ್ಪಿದರು.

### ಜಿ.ಎಂ.ಸಿ. ಬಾಲಯೋಗಿ



ಲೋಕಸಭೆ ಮಾಜಿ ಸ್ಪೀಕರ್ ಬಾಲಯೋಗಿ 2002ರ ಮಾ. 3ರಂದು ಆಂಧ್ರಪ್ರದೇಶದ ಭೀಮಾವರಂನಿಂದ ಕೃಷ್ಣಾ ಜಿಲ್ಲೆಗೆ ಬೆಲ್-206 ಹೆಲಿಕಾಪ್ಟರ್‌ನಲ್ಲಿ ಪ್ರಯಾಣಿಸುತ್ತಿದ್ದರು. ಮುಂಜಾನೆ ದಟ್ಟ ಮಂಜಿನ ಕಾರಣ ಹೆಲಿಕಾಪ್ಟರ್ ಕೈಕಲೂರು ಬಳಿಯ ಕೊಳ್ಳೇರು ಸರೋವರದ ಮೀನುಗಾರಿಕಾ ಕೆರೆಯೊಂದರ ಒಡ್ಡಿಗೆ ಡಿಕ್ಕಿ ಹೊಡೆಯಿತು. ಬಾಲಯೋಗಿ ಜತೆ ಸಹಾಯಕ ಮತ್ತು ಪೈಲಟ್ ಕೂಡ ಮೃತಪಟ್ಟರು.

### ಓ.ಪಿ. ಜಿಂದಾಲ್



ಹರಿಯಾಣದ ಸಚಿವ, ಪ್ರಸಿದ್ಧ ಉದ್ಯಮಿ ಓಂ ಪ್ರಕಾಶ್ ಜಿಂದಾಲ್ 2005ರ ಮಾ. 31ರಂದು ಚಂಡೀಗಢದಿಂದ ದೆಹಲಿಗೆ ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರ್ ಉತ್ತರ ಪ್ರದೇಶದ ಸಹರಾನ್‌ಪುರ ಜಿಲ್ಲೆಯ ಗಂಗೋಹ್ ಎಂಬಲ್ಲಿ ತಾಂತ್ರಿಕ ದೋಷದಿಂದ ಪತನವಾಗಿ ಅವರು ಸಾವನ್ನಪ್ಪಿದರು.

### ವೈ.ಎಸ್. ರಾಜಶೇಖರ ರೆಡ್ಡಿ




ಆಂಧ್ರಪ್ರದೇಶದ ಸಿಎಂ ಆಗಿದ್ದ ವೈ.ಎಸ್. ರಾಜಶೇಖರ ರೆಡ್ಡಿ 2009ರ ಸೆ. 2ರಂದು ಹೈದರಾಬಾದ್‌ನಿಂದ ಚಿತ್ತೂರು ಜಿಲ್ಲೆಗೆ ತೆರಳುತ್ತಿದ್ದಾಗ ಕರ್ನೂಲ್ ಜಿಲ್ಲೆಯ ದಟ್ಟವಾದ ನಲ್ಲಮಲ ಅರಣ್ಯ ಪ್ರದೇಶದಲ್ಲಿ ಭಾರಿ ಮಳೆಯಿಂದಾಗಿ ಬೆಲ್-430 ಹೆಲಿಕಾಪ್ಟರ್ ಪತನವಾಯಿತು. ಮರುದಿನ ಬೆಳಗ್ಗೆ ಪವನಗುಡ್ಡದ ಮೇಲೆ ಅವಶೇಷಗಳು ಪತ್ತೆಯಾದವು. ವೈಎಸ್‌ಆರ್ ಸೇರಿ ಐವರು ಇದರಲ್ಲಿ ಮೃತಪಟ್ಟರು.

### ದೋರ್ಜಿ ಖಂಡು



ಅರುಣಾಚಲ ಪ್ರದೇಶದ ಮುಖ್ಯಮಂತ್ರಿಯಾಗಿದ್ದ ದೋರ್ಜಿ ಖಂಡು 2011ರ ಏ. 30ರಂದು ತವಾಂಗ್‌ನಿಂದ ಇಟಾನಗರಕ್ಕೆ ಯೂರೋಕಾಪ್ಟರ್‌ನಲ್ಲಿ ಪ್ರಯಾಣಿಸುತ್ತಿದ್ದರು. ಮೇ 4ರಂದು ಲೋಬೋತಾಂಗ್ ಎಂಬಲ್ಲಿ ಹೆಲಿಕಾಪ್ಟರ್ ಪತನವಾಗಿರುವುದು ಪತ್ತೆಯಾಯಿತು. ಖಂಡು ಸೇರಿದಂತೆ ಹೆಲಿಕಾಪ್ಟರ್‌ನಲ್ಲಿದ್ದ ಐದೂ ಮಂದಿ ಸಾವನ್ನಪ್ಪಿದ್ದರು.

### ಮೋಹನ್ ಕುಮಾರಮಂಗಲಂ




ಕೇಂದ್ರ ಉಕ್ಕು ಹಾಗೂ ಗಣಿ ಖಾತೆ ಸಚಿವರಾಗಿದ್ದ ಎಸ್. ಮೋಹನ್ ಕುಮಾರಮಂಗಲಂ 1973ರ ಮೇ 31ರಂದು ಮದ್ರಾಸ್‌ನಿಂದ (ಈಗಿನ ಚೆನ್ನೈ) ದೆಹಲಿಗೆ ಇಂಡಿಯನ್ ಏರ್‌ಲೈನ್ಸ್‌ನ ವಿಮಾನದಲ್ಲಿ ಪ್ರಯಾಣಿಸುತ್ತಿದ್ದರು. ದೆಹಲಿಯ ಪಾಲಂ ವಿಮಾನ ನಿಲ್ದಾಣದಲ್ಲಿ ಲ್ಯಾಂಡಿಂಗ್ ವೇಳೆ ವಿಮಾನ ಭಾರಿ ಮಳೆಯ ಕಾರಣ ಪತನವಾಯಿತು. ವಿಮಾನದಲ್ಲಿದ್ದ 65 ಪ್ರಯಾಣಿಕರಲ್ಲಿ 48 ಮಂದಿ ಸಾವನ್ನಪ್ಪಿದರು.

### ಬಿಪಿನ್ ರಾವತ್



ಭಾರತದ ರಕ್ಷಣಾ ಪಡೆಗಳ ಮುಖ್ಯಸ್ಥರಾಗಿದ್ದ ಜನರಲ್ ಬಿಪಿನ್ ರಾವತ್ 2021ರ ಡಿ. 8ರಂದು ಸುಲೂರು ವಾಯುನೆಲೆಯಿಂದ ವೆಲ್ಲಿಂಗ್ಟನ್‌ಗೆ ತೆರಳುತ್ತಿದ್ದರು. ಅವರು ಪ್ರಯಾಣಿಸುತ್ತಿದ್ದ ಭಾರತೀಯ ವಾಯುಪಡೆಯ ಹೆಲಿಕಾಪ್ಟರ್, ತಮಿಳುನಾಡಿನ ನೀಲಗಿರಿ ಜಿಲ್ಲೆಯ ಕೂನೂರ್ ಬಳಿ ದಟ್ಟ ಮಂಜಿನ ಕಾರಣ ಬೆಟ್ಟಕ್ಕೆ ಡಿಕ್ಕಿ ಹೊಡೆದು ಬೆಂಕಿ ಹೊತ್ತಿಕೊಂಡಿತು. ಬಿಪಿನ್, ಅವರ ಪತ್ನಿ ಮಧುಲಿಕಾ ಮತ್ತು ಇತರ 12 ಸೇನಾ ಸಿಬ್ಬಂದಿ ಮೃತಪಟ್ಟರು.

### ನಟಿ ಸೌಂದರ್ಯ



ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಪರ ಪ್ರಚಾರಕ್ಕಾಗಿ ಬೆಂಗಳೂರಿನಿಂದ ಕರೀಂನಗರಕ್ಕೆ ತೆರಳುತ್ತಿದ್ದ ಬಹುಭಾಷಾ ನಟಿ ಸೌಂದರ್ಯ 2004ರ ಏ. 17ರಂದು ವಿಮಾನ ಅಪಘಾತದಲ್ಲಿ ನಿಧನರಾದರು. ಬೆಂಗಳೂರಿನ ಜಕ್ಕೂರು ವಿಮಾನ ನಿಲ್ದಾಣದಿಂದ ಅವರು ಪ್ರಯಾಣಿಸುತ್ತಿದ್ದ 'ಸೆಸ್ನಾ 180' ಎಂಬ ಸಣ್ಣ ವಿಮಾನ ಟೇಕ್‌ಆಫ್ ಆದ ಕೆಲವೇ ಕ್ಷಣಗಳಲ್ಲಿ ಪತನವಾಗಿ ಸೌಂದರ್ಯ, ಅವರ ಸಹೋದರ ಅಮರನಾಥ್ ಮತ್ತು ಇತರ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದರು.






Scanned with OKEN Scanner

VK ವಿಜಯ ಕರ್ನಾಟಕ e-paper

ಎರಡು ದಶಕಗಳ ಕನಸೆಂಬಂತೆ ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವಿನ ಮುಕ್ತ ವ್ಯಾಪಾರ ಒಪ್ಪಂದ ಕಡೆಗೂ ಫಲಿಸಿದೆ. ಇಷ್ಟು ದಿನ ಉಭಯಪಕ್ಷಗಳು ತಮ್ಮದೇ ಹಿತಾಸಕ್ತಿಯ ಅಂಶಗಳನ್ನು ಮುಂದಿಟ್ಟು ಮುಕ್ತ ಅವಕಾಶವನ್ನು ಮುಂದೂಡಿಕೊಂಡು ಬಂದಿದ್ದವು. ಅಮೆರಿಕದ ತೆರಿಗೆ ಅತಿರೇಕದ ನಡುವೆ ಏರ್ಪಟ್ಟಿರುವ ಈ ಮಹಾ ಒಪ್ಪಂದವು ಟ್ರಂಪ್ ತೆರಿಗೆಗಳ ಮೇಲೆ ಬಿಟ್ಟ ಬಾಣವೂ ಹೌದು.

# ಎಲ್ಲ ಒಪ್ಪಂದಗಳ ಮಹಾತಾಯಿ ಯಾರಿಗೆ ಬಿಟ್ಟ ಬಾಣ?

● ಬಿ.ಎನ್. ಭರತ್




ಎಲ್ಲೋ ಸ್ವಿಚ್ ಒತ್ತಿದರೆ, ಇನ್ನೆಲ್ಲೋ ಬಲ್ಬ್ ಬೆಳಗುವ ಟ್ರೆಂಡ್ ಭೌಗೋಳಿಕ ರಾಜಕೀಯದಲ್ಲಿ ಕಂಡು ಬರುತ್ತಿದೆ. ಈಗ ಭಾರತ ಮತ್ತು ಐರೋಪ್ಯ ಒಕ್ಕೂಟದ ಆಲಿಂಗನ, ಇನ್ನೆಲ್ಲೋ ಅಮೆರಿಕಕ್ಕೋ, ಪಕ್ಕದ ಚೀನಾಕ್ಕೋ ದಂಗುಬಡಿಸಿರುವುದಂತೂ ಸತ್ಯ.

ಭಾರತ ಮತ್ತು ಐರೋಪ್ಯ ಒಕ್ಕೂಟವು ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಿದ ಬಳಿಕ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ಈ ಒಪ್ಪಂದದ ವಿವರಗಳನ್ನು ಹಂಚಿಕೊಂಡಿದೆ. ಅವಕಾಶಗಳ ಬುತ್ತಿ ಬಿಚ್ಚುತ್ತಾ, ರಾಷ್ಟ್ರದ ಸ್ವಾತಂತ್ರ್ಯದ ಶತಮಾನೋತ್ಸವವಾದ 2047ಕ್ಕೆ ಭಾರತವನ್ನು ಶಕ್ತಿಶಾಲಿ ದೇಶವನ್ನಾಗಿಸುವ 'ಮದರ್ ಆಫ್ ಆಲ್ ಡೀಲ್ಸ್' ಎಂಬ ಶೀರ್ಷಿಕೆ ನೀಡಿರುವುದು ಎಲ್ಲರ ಗಮನ ಸೆಳೆಯುತ್ತಿದೆ. ಸರಕಾರವೇಕೆ ಈ ರೀತಿ ಶೀರ್ಷಿಕೆ ನೀಡಿತು? ಈ ಶೀರ್ಷಿಕೆಯು ಮುಖ್ಯವಾಗಿ ಪ್ರತಿಸುಂಕಗಳ ಖಳನಾಯಕನಾದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕಡೆಗೆ ನೇರವಾಗಿ ಪ್ರಯೋಗಿಸಿದ ಬಾಣವೆಂದೇ ಪರಿಗಣಿಸಬಹುದಾಗಿದೆ.

## ವಾಸ್ಕೋ ಡ ಗಾಮನಿಂದ 'ಮದರ್ ಆಫ್ ಆಲ್ ಡೀಲ್ಸ್'ವರೆಗೆ...

1497ರಲ್ಲಿ ಪೋರ್ಚುಗಲ್ಲಿನ ನಾವಿಕ **ವಾಸ್ಕೋ ಡ ಗಾಮ** ಭಾರತದ ಕಲ್ಲಿಕೋಟೆಯಲ್ಲಿ ಕಾಲಿಟ್ಟ ಬಳಿಕ, ನಮ್ಮ ಸುಪ್ರಸಿದ್ಧ ಮಸಾಲೆ ಪದಾರ್ಥಗಳು ಯುರೋಪಿನಲ್ಲಿ ಬಹಳ ಜನಪ್ರಿಯವಾಗತೊಡಗಿದವು. ರೇಷ್ಮೆ ಪಥ, ಮೆಡಿಟರೇನಿಯನ್ ಪಥ, ಸೂಯೇಜ್ ಕಾಲುವೆಯ ಪಥ ಇವೆಲ್ಲ ಆ ಕಾಲದಲ್ಲೇ ಭಾರತವನ್ನು ವಿಶ್ವದ ಇತರ ರಾಷ್ಟ್ರಗಳಿಗೆ ಇನ್ನಷ್ಟು ಪರಿಚಯಿಸಿದ್ದವು.



ಅಂದಿನ ಕಾಲಘಟ್ಟದಲ್ಲಿ ಭಾರತದಿಂದ ಯುರೋಪಿಗೆ ಅಪಾರ ಕಚ್ಚಾವಸ್ತುಗಳು ರವಾನೆಯಾಗುತ್ತಿದ್ದರೆ, ಈಗಿನ ಒಪ್ಪಂದದಿಂದ ಭಾರತದ ವಾಣಿಜ್ಯೋತ್ಪನ್ನಗಳಿಗೆ ಯುರೋಪಿನ ಹಲವು ರಾಷ್ಟ್ರಗಳಲ್ಲಿ ಉತ್ತಮ ಬೇಡಿಕೆ ದೊರಕಲಿದೆ. ಐರೋಪ್ಯ ಒಕ್ಕೂಟವು ಭಾರತದೊಡನೆ ವ್ಯಾಪಾರ ಒಪ್ಪಂದಕ್ಕೆ ಸಹಿ ಮಾಡಲು ಭಾರೀ ಉತ್ಸುಕತೆ ತೋರಿಸಿದ್ದು ಬದಲಾದ ಆರ್ಥಿಕ ಸ್ಥಿತಿಗತಿಗಳನ್ನು ಪ್ರಕಟ ಪಡಿಸುತ್ತಿವೆ.

- 18ನೇ ಶತಮಾನದಲ್ಲಿ ಸಂಪದ್ಭರಿತವಾಗಿದ್ದ ಭಾರತವು ಆರ್ಥಿಕತೆಯಲ್ಲಿ ನಂ.1 ರಾಷ್ಟ್ರವಾಗಿತ್ತು ಎನ್ನುವುದು ಯುರೋಪಿಯನ್ನರೆಲ್ಲ ಭಾರತದತ್ತ ಮುಖ ಮಾಡಿರುವ ಸಂಗತಿಯಲ್ಲೇ ವೇದ್ಯ. ಆಗ ವಿಶ್ವದ ಒಟ್ಟಾರೆ ವರಮಾನದಲ್ಲಿ (ಜಿಡಿಪಿ) ಶೇ.24ರಿಂದ 27ರ ಪಾಲಿನೊಂದಿಗೆ ಭಾರತದ್ದೇ ಸಿಂಹಪಾಲು ಆಗಿತ್ತು. ಆ ಕಾಲದಲ್ಲಿ ಜವಳಿ, ಕೃಷಿ, ಕೈಗಾರಿಕೆಗಳು ಭಾರತದ ಬೆನ್ನೆಲುಬಾಗಿದ್ದವು.
- 19ನೇ ಶತಮಾನದಲ್ಲಿ ಚೀನಾವು ನಮ್ಮನ್ನು ಹಿಂದಿಕ್ಕಿ ಎರಡನೇ ಸ್ಥಾನಕ್ಕೆ ತಳ್ಳಿದ ಬಳಿಕ, ಬ್ರಿಟಿಷರ ಆಳ್ವಿಕೆಯಲ್ಲಿ ನಾವು ನಿರಂತರ ಅಧೋಗತಿಗೆ ಜಾರಿದೆವು.
- ಈಗಿನ ಬೆಳವಣಿಗೆಯನ್ನು ಕಂಡಾಗ, 'ಮದರ್ ಆಫ್ ಆಲ್ ಡೀಲ್ಸ್'ನ ಭಾರತವು ಮುಂದಿನ ಕೆಲವು ವರ್ಷಗಳಲ್ಲಿ ಮತ್ತೆ ನಂ.1 ಸ್ಥಾನವನ್ನು ಅಲಂಕರಿಸಲಿರುವುದರ ಮುನ್ಸೂಚನೆ ಇದ್ದಿರಬಹುದೇ ಎಂಬ ವಿಶ್ವಾಸವೂ ಮೂಡುತ್ತಿದೆ.

## ಮದರ್ ಆಫ್ ಆಲ್ ಡೀಲ್ಸ್ ಏಕೆ?

ಈ ಒಪ್ಪಂದದ ಅಡಿಯಲ್ಲಿ ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವೆ 17 ಲಕ್ಷ ಕೋಟಿ ರೂ.ಗಳ ಆರ್ಥಿಕ ವ್ಯವಹಾರದ ಗಾತ್ರವನ್ನು ನಿರೀಕ್ಷಿಸಬಹುದಾಗಿದೆ. ವಾಣಿಜ್ಯ ಮತ್ತು ಕೈಗಾರಿಕಾ ಸಚಿವರಾದ ಪಿಯೂಷ್ ಗೋಯಲ್ ಪ್ರಕಾರ, ಈ ಒಪ್ಪಂದದಿಂದ ಭಾರತದ ಜವಳಿ ಉದ್ಯಮದಲ್ಲಿ 60 ರಿಂದ 70 ಲಕ್ಷ ಹೊಸ ಉದ್ಯೋಗಗಳ ಅವಕಾಶಗಳೂ ಒದಗಿಬರಲಿವೆ.

ಅಮೆರಿಕದ ಸುಂಕಾಸ್ತ್ರಗಳಿಂದ ಕೊಂಚ ಮಟ್ಟಿನ ಉದ್ಯೋಗಗಳ ನಷ್ಟ ಉಂಟಾಗಿದ್ದರೂ, ಈಗ ಇದರ ಮುಂದೆ ನಗಣ್ಯ. ಜವಳಿ ಉದ್ಯಮಕ್ಕೆ ಅಮೆರಿಕದಿಂದ 11 ಶತಕೋಟಿ ಡಾಲರ್‌ಗಳ ವಹಿವಾಟು ಇರುವುದು, ಸದ್ಯದ ಸುಂಕಗಳ ಹಾವಳಿಯಲ್ಲಿ ಸ್ವಲ್ಪ ಮಟ್ಟಿಗೆ ಮಂಕಾಗಿದೆ.

ಐರೋಪ್ಯ ಒಕ್ಕೂಟದೊಂದಿಗಿನ ಒಪ್ಪಂದದಿಂದ ಹೆಚ್ಚಿನ ಅವಕಾಶಗಳು ಒದಗಿ ಬರಲಿವೆ. ಪ್ರಮುಖ ಸ್ಪರ್ಧಿಗಳಾದ ಪಾಕಿಸ್ತಾನ, ಬಾಂಗ್ಲಾದೇಶ, ಟರ್ಕಿ ದೇಶಗಳೊಡನೆ ಸ್ಪರ್ಧಿಸಲು ಅನುಕೂಲಕರವಾಗಲಿದೆ. 7.2 ಶತಕೋಟಿ ಡಾಲರುಗಳ ವಹಿವಾಟು ಇದ್ದಿದ್ದು 30-40 ಶತಕೋಟಿ ಡಾಲರಿಗೆ ಅತ್ಯಂತ ತ್ವರಿತವಾಗಿ ಏರಲಿದೆ ಎನ್ನುವುದು ಗೋಯಲ್ ವಿಶ್ವಾಸ.

ರಾಸಾಯನಿಕ, ಚರ್ಮೋದ್ಯಮ ಮತ್ತು ಪಾದರಕ್ಷೆ ಉದ್ಯಮಗಳಿಗೂ ಇದೇ ರೀತಿ ಅನುಕೂಲವಾಗಲಿದೆ. ಭಾರತದಿಂದ ಮಾಹಿತಿ ತಂತ್ರಜ್ಞಾನದ ಅತ್ಯಂತ ಹೆಚ್ಚಿನ ಮಟ್ಟದ ರಫ್ತು ಉಂಟಾಗುವುದು ಅಮೆರಿಕಕ್ಕೆ. ಸದ್ಯ 218 ಶತಕೋಟಿ ಡಾಲರಿನಷ್ಟಿದೆ. 2024-25 ವರ್ಷದಲ್ಲಿ ಉಂಟಾದ ಏರಿಕೆ ಶೇ.4.9. ಐರೋಪ್ಯ ದೇಶಗಳಿಗೆ 40 ಶತಕೋಟಿ ಡಾಲರುಗಳ ರಫ್ತು ಮಾಡಲಾಗಿದ್ದು, ಇದು ಇನ್ನಷ್ಟು ಹೆಚ್ಚಲಿದೆ. ಈಗಾಗಲೇ ಈ ದೇಶಗಳ ಪಾಲು ಶೇ.30.8ರಿಂದ 32.8ಕ್ಕೆ ಏರಿದೆ. ಒಟ್ಟಾರೆ ಎಲ್ಲ ಉತ್ಪನ್ನಗಳ ರಫ್ತು 75 ಶತಕೋಟಿ ಡಾಲರಿಗೆ ಏರಲಿದೆ.



ವಿಕ ಫೋಕಸ್

## ಇದ್ದಕ್ಕಿದ್ದಂತೆ ಯುರೋಪ್ ಏಕೆ ಸ್ನೇಹಹಸ್ತ ಚಾಚಿತು?

### 1 ಜಿಡಿಪಿಯ ಉತ್ತಮ ಸ್ಟ್ರೈಕ್ ರೇಟ್

ಜಿಡಿಪಿಯಲ್ಲಿ ನಿರಂತರವಾಗಿ ವಾರ್ಷಿಕ ಶೇ.6-7ರ ಉತ್ತಮ ಆರ್ಥಿಕ ಪ್ರಗತಿ ಸಾಧಿಸುತ್ತಿರುವ ಭಾರತವು ಈಗಾಗಲೇ ಜಪಾನನ್ನು ಹಿಂದಿಕ್ಕಿ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದೆ. ಇನ್ನು ಒಂದೆರಡು ವರ್ಷಗಳಲ್ಲಿ ಜರ್ಮನಿಯನ್ನೂ ಹಿಂದಿಕ್ಕಿ ಮೂರನೇ ಸ್ಥಾನಕ್ಕೆ ಲಗ್ಗೆ ಹಾಕಲಿದೆ.

### 2 ಸುಭದ್ರ ರಕ್ಷಣೆ

ಅಷ್ಟೇ ಅಲ್ಲ, ಭಾರತೀಯ ಸೇನೆಯ ಸಿಂದೂರ ಕಾರ್ಯಾಚರಣೆಯ ಬಳಿಕ ನಮ್ಮ ರಕ್ಷಣಾ ವ್ಯವಸ್ಥೆಯ ಸದೃಢತೆಯು ವಿಶ್ವದ ಗಮನ ಸೆಳೆದಿದೆ. ಐರೋಪ್ಯ ಒಕ್ಕೂಟದಲ್ಲಿ ನ್ಯಾಟೊ ದುರ್ಬಲವಾದರೆ, ಭಾರತದಂಥ ಬಲಾಢ್ಯ ರಾಷ್ಟ್ರಗಳ ಪರೋಕ್ಷ ಬೆಂಬಲ ಯುರೋಪಿಗೆ ಅವಶ್ಯ.



### 3 ಇಬ್ಬರೂ ಸಮಾನಮನಸ್ಕರು

ತೆರಿಗೆ ವಿಚಾರದಲ್ಲಿ ಅಮೆರಿಕ ಆರಂಭದಲ್ಲಿ ಭಾರತವನ್ನೇ ಹೆಚ್ಚು ಟಾರ್ಗೆಟ್ ಮಾಡುತ್ತಿದೆ ಎಂದು ಜಗತ್ತು ಭಾವಿಸಿತ್ತು. ತದನಂತರ, ಇದು ಯುರೋಪಿನ ಕಾಲ್ಬುಡಕ್ಕೂ ಬಂದಿತ್ತು. ಟ್ರಂಪ್ ಅವರ ಗ್ರೀನ್‌ಲ್ಯಾಂಡ್ ದಾಹವು ಯುರೋಪನ್ನು ಅಮೆರಿಕದ ತೆರಿಗೆ ಸಂತ್ರಸ್ತನನ್ನಾಗಿಸಿತು.

### 4 ಹಿಗ್ಗುತ್ತಿರುವ ಭಾರತದ ಮಾರುಕಟ್ಟೆ

ಜಗತ್ತಿನ ಯಾವುದೇ ಹೊಸ ಉತ್ಪನ್ನಗಳೂ ಭಾರತದಲ್ಲಿ ಯಶಸ್ಸು ಕಾಣುವಷ್ಟು ಬೇರೆ ದೇಶದಲ್ಲಿ ಕಾಣವು. ಯುರೋಪ್ ಕೂಡ ಈ ಸತ್ಯವನ್ನು ಬಲ್ಲದು. ನಮ್ಮ ವೃದ್ಧಿಸುತ್ತಿರುವ ಗ್ರಾಹಕ ಮಾರುಕಟ್ಟೆಯೂ ಹಲವು ದೇಶಗಳಿಗೆ ಆಕರ್ಷಣೆಯ ಕೇಂದ್ರವಾಗಿದೆ.

### 5 ಜಗವು ಭಾರತದ ಸನಿಹಕ್ಕೆ

ಇದನ್ನು ಯುರೋಪ್ ಸೂಕ್ಷ್ಮವಾಗಿ ಗಮನಿಸಿದೆ. ಇತ್ತೀಚೆಗೆ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ಭಾರತಕ್ಕೆ ವಿಶೇಷ ಭೇಟಿ ನೀಡಿದಾಗ, 2030ರ ವೇಳೆಗೆ 100 ಶತಕೋಟಿ ಡಾಲರುಗಳ ದ್ವಿಪಕ್ಷೀಯ ವ್ಯಾಪಾರ ನಡೆಸುವ ಗುರಿ ನಿಗದಿಪಡಿಸಲಾಯಿತು. ಎಂಜಿನಿಯರಿಂಗ್, ರಾಸಾಯನಿಕ, ಕೃಷಿ ಮತ್ತು ಔಷಧ ವಲಯಗಳ 300 ಉತ್ಪನ್ನಗಳನ್ನು ರಫ್ತು ಮಾಡುವ ಮಾತುಕತೆ ನಡೆದವು. ಹಾಗೆಯೇ, 2025ರಲ್ಲಿ ಭಾರತವು ಒಮನ್, ಇಂಗ್ಲೆಂಡ್, ನ್ಯೂಜಿಲೆಂಡ್ ಜತೆಗೆ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಿದೆ. ಅಲ್ಲದೆ, ಕೆನಡಾದ ನೂತನ ಪ್ರಧಾನಿ ಮಾರ್ಕ್ ಕಾರ್ನಿಯವರು ಮಾರ್ಚ್ ಮೊದಲ ವಾರದಲ್ಲಿ ಭಾರತಕ್ಕೆ ಆಗಮಿಸಿ ಯುರೇನಿಯಂ, ಇಂಧನ, ಖನಿಜ, ಕೃತಕ ಬುದ್ಧಿಮತ್ತೆ, ವಿದ್ಯಾಭ್ಯಾಸ ಮೊದಲಾದ ಕ್ಷೇತ್ರಗಳಲ್ಲಿ ಒಪ್ಪಂದಕ್ಕೆ ಸಹಿ ಹಾಕುವ ನಿರೀಕ್ಷೆ ಇದೆ.

## ಡಾಲರನ್ನು ದೂರ ಮಾಡುವ ತಂತ್ರವೇ?

ಸದ್ಯ ವಿಶ್ವದಲ್ಲಿ ಕೆಲವಾರು ದೇಶಗಳ ನಡುವೆ ಸಂಘರ್ಷಗಳು ನಡೆಯುತ್ತಾ ಜಗತ್ತಿನ ಪ್ರಮುಖ ಕರೆನ್ಸಿಯಾದ ಅಮೆರಿಕನ್ ಡಾಲರ್ ದುಬಾರಿಯಾಗುತ್ತಿದೆ. ಹಾಗಾಗಿ, ರಷ್ಯಾ, ಶ್ರೀಲಂಕಾ, ಸಿಂಗಾಪುರ, ಯುಕೆ, ಜರ್ಮನಿ, ಒಮನ್, ಯುಎಇ, ಮಲೇಷ್ಯಾ, ಮಾರಿಷಸ್, ಮ್ಯಾನ್ಮಾರ್ ಸೇರಿದಂತೆ 18 ರಾಷ್ಟ್ರಗಳೊಡನೆ ಭಾರತೀಯ ರೂ.ಗಳಲ್ಲಿ ವ್ಯವಹಾರ ನಡೆಸಲು ಒಪ್ಪಿ 'ಡಾಲರ್ ದೂರೀಕರಣ'ಕ್ಕೆ (ಡಿ ಡಾಲರೈಸೇಷನ್) ಒತ್ತು ನೀಡುತ್ತಿವೆ.

- ಬ್ರೆಜಿಲ್, ರಷ್ಯಾ, ಭಾರತ, ಚೀನಾ, ದಕ್ಷಿಣ ಆಫ್ರಿಕ, ಇರಾನ್, ಈಜಿಪ್ಟ್, ಇಥಿಯೋಪಿಯಾ, ಯುಎಇ, ಇಂಡೊನೇಷ್ಯಾ, ಸೌದಿ ಅರೇಬಿಯಾ ದೇಶಗಳನ್ನೊಳಗೊಂಡ 'ಬ್ರಿಕ್ಸ್' ಗುಂಪು ಪ್ರಬಲವಾಗುತ್ತಿದ್ದು ಇನ್ನೂ ಹತ್ತಾರು ದೇಶಗಳು ಸೇರಲು ಆಸಕ್ತಿ ವಹಿಸಿವೆ.
- ಭಾರತ, ಚೀನಾ, ಬ್ರೆಜಿಲ್, ದಕ್ಷಿಣ ಆಫ್ರಿಕಾ ಮೊದಲಾದ ಬ್ರಿಕ್ಸ್ ದೇಶಗಳು ಟ್ರಂಪ್ ವಿಧಿಸುವ ಪ್ರತಿಸುಂಕಗಳು, ಜಾಗತಿಕ ವ್ಯಾಪಾರ ವಹಿವಾಟು ಹಾಗೂ ಆರ್ಥಿಕತೆಯ ಮೇಲೆ ಬೀರುವ ವ್ಯತಿರಿಕ್ತ ಪರಿಣಾಮಗಳ ಬಗ್ಗೆ ಆಗಾಗ್ಗೆ ಚರ್ಚೆ ನಡೆಸುತ್ತಿರುತ್ತವೆ.
- ಬ್ರಿಕ್ಸ್ ಗುಂಪಿನ ಸದಸ್ಯ ರಾಷ್ಟ್ರಗಳು ತಮ್ಮ ನಡುವಿನ ವ್ಯಾಪಾರ ಮತ್ತು ಪ್ರವಾಸೋದ್ಯಮದ ಇತ್ಯರ್ಥಕ್ಕಾಗಿ ತಮ್ಮತಮ್ಮ ಕೇಂದ್ರೀಯ ಬ್ಯಾಂಕಿನ ಡಿಜಿಟಲ್ ಕರೆನ್ಸಿಗಳನ್ನು (ಸೆಂಟ್ರಲ್ ಬ್ಯಾಂಕ್ ಡಿಜಿಟಲ್ ಕರೆನ್ಸಿ ಅಥವಾ ಸಿಬಿಡಿಸಿ) ಜೋಡಿಸುವ ವಿಷಯವನ್ನು 2026ರ ಬ್ರಿಕ್ಸ್ ಶೃಂಗ ಸಭೆಯಲ್ಲಿ ಆದ್ಯತೆಯ ಮೇರೆಗೆ ತೆಗೆದುಕೊಳ್ಳುವಂತೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸರಕಾರಕ್ಕೆ ಶಿಫಾರಸು ಮಾಡಿದೆ ಎಂದು ವರದಿಗಳಿವೆ. ಈ ವರ್ಷದ ಶೃಂಗ ಸಭೆಯ ಆತಿಥ್ಯವನ್ನು ಭಾರತವೇ ವಹಿಸಲಿರುವ ಕಾರಣ ಈ ನಿಟ್ಟಿನಲ್ಲಿ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುವ ನಿರೀಕ್ಷೆ ಇದೆ.
- 2022ರ ಡಿಸೆಂಬರ್‌ನಲ್ಲಿ ಪ್ರಾರಂಭಗೊಂಡ ಭಾರತೀಯ ಡಿಜಿಟಲ್ ಕರೆನ್ಸಿಯಾದ 'ಇ ರೂಪಾಯಿ'ಯು ಈಗಾಗಲೇ 70 ಲಕ್ಷಕ್ಕಿಂತಲೂ ಹೆಚ್ಚಿನ ಬಳಕೆದಾರರನ್ನು ಹೊಂದಿದೆ. ಚೀನಾವು ಡಿಜಿಟಲ್ ಯುವಾನ್ ಕರೆನ್ಸಿಯನ್ನು ಬಳಸುತ್ತಾ ವಿಶ್ವದಲ್ಲೇ ಅತ್ಯಂತ ಹೆಚ್ಚಿನ ಅಂದರೆ ಸರಿಸುಮಾರು 1 ಟ್ರಿಲಿಯನ್ ಅಮೆರಿಕನ್ ಡಾಲರಿನ ವಹಿವಾಟು ನಡೆಸುತ್ತಿದೆ. ಎರಡನೇ ಸ್ಥಾನದಲ್ಲಿರುವ ಭಾರತದಲ್ಲಿ 2024ರಿಂದ 2025ಕ್ಕೆ 4 ಪಟ್ಟು ಹೆಚ್ಚಿನ ವಹಿವಾಟು ನಡೆಯುತ್ತಾ, ಸರಿಸುಮಾರು 12 ಕೋಟಿ ಅಮೆರಿಕನ್ ಡಾಲರ್‌ಗಳ ಡಿಜಿಟಲ್ ಕರೆನ್ಸಿಗಳ ವಹಿವಾಟು ನಡೆದಿದೆ. ಇದರಲ್ಲಿ ಬಹುಪಾಲು ದೇಶೀಯ ಮಟ್ಟದಲ್ಲೇ ನಡೆದಿದೆ.

(ಲೇಖಕರು: ವಿಶ್ರಾಂತ ಬ್ಯಾಂಕ್ ಎಜಿಎಂ)



Scanned with OKEN Scanner

## ಸಿಲಿಕಾನ್ ಸಿಟಿಗೆ 'ಮೈಕ್ರೋ' ವೇಗ : ಬೈಕ್ ಟ್ಯಾಕ್ಸಿ ಈಗ ಕಾನೂನು ಬದ್ಧ

# ಸಂಚಾರ ದಟ್ಟಣೆಗೆ ದ್ವಿಚಕ್ರ ದಾರಿ


ಆಕಸ್ಮಿತ ಪ್ರದೀಪ್

9620403111


2026ರ ಆರಂಭವು ಕರ್ನಾಟಕದ, ವಿಶೇಷವಾಗಿ ಬೆಂಗಳೂರಿನ ಸಾರಿಗೆ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯಕ್ಕೆ ನಾಂದಿ ಹಾಡಿದೆ. ಜನವರಿ 23, 2026ರಂದು ಕರ್ನಾಟಕ ಹೈಕೋರ್ಟ್ ನೀಡಿದ ಐತಿಹಾಸಿಕ ತೀರ್ಪು ಕೇವಲ ಒಂದು ಕಾನೂನು ಪ್ರಕ್ರಿಯೆಯಲ್ಲ, ಬದಲಿಗೆ ಇದು ಲಕ್ಷಾಂತರ ಪ್ರಯಾಣಿಕರ ಹಕ್ಕು ಮತ್ತು ಸಾವಿರಾರು ಗಿಗ್ ಕಾರ್ಮಿಕರ ಬದುಕಿನ ಪ್ರಶ್ನೆಯಾಗಿತ್ತು. ಬೆಂಗಳೂರಿನಂತಹ ಜಾಗತಿಕ ತಂತ್ರಜ್ಞಾನ ಹಬ್‌ನಲ್ಲಿ ಸಂಚಾರ ದಟ್ಟಣೆಯನ್ನು ನಿರ್ವಹಿಸಲು ಮೈಕ್ರೋ-ಮೊಬಿಲಿಟಿ (Micro-mobility) ಅನಿವಾರ್ಯ ಎಂಬುದನ್ನು ಈ ತೀರ್ಪು ಸಾಬೀತುಪಡಿಸಿದೆ. ಕಳೆದ ಐದಾರು ವರ್ಷಗಳಿಂದ ರಾಜ್ಯ ಸಾರಿಗೆ ಇಲಾಖೆ ಮತ್ತು ಬೈಕ್ ಟ್ಯಾಕ್ಸಿ ಅಗ್ರಿಗೇಟರ್‌ಗಳಾದ ರಾಪಿಡೋ (Rapido), ಓಲಾ (Ola) ಮತ್ತು ಉಬರ್ (Uber) ನಡುವೆ ಶೀತಲ ಸಮರ ನಡೆಯುತ್ತಿತ್ತು. 2025ರ ಏಪ್ರಿಲ್‌ನಲ್ಲಿ ರಾಜ್ಯ ಸರ್ಕಾರವು ಸುರಕ್ಷತೆ ಮತ್ತು ಆಟೋ ರಿಕ್ಷಾ ಚಾಲಕರ ಹಿತಾಸಕ್ತಿಯನ್ನು ಮುಂದಿಟ್ಟು ಬೈಕ್ ಟ್ಯಾಕ್ಸಿಗಳನ್ನು ಸಂಪೂರ್ಣವಾಗಿ ನಿಷೇಧಿಸಿತ್ತು. ಈ ನಿಷೇಧವನ್ನು ಪ್ರಶ್ನಿಸಿ ದಾಖಲಾಗಿದ್ದ ಮೇಲ್ಮನವಿಯನ್ನು ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ಪೀಠವು, ತಂತ್ರಜ್ಞಾನದ ಪ್ರಗತಿಯನ್ನು ತಡೆಯಲು ಸಾಧ್ಯವಿಲ್ಲ ಎಂದು ಅತ್ಯಂತ ಸ್ಪಷ್ಟವಾಗಿ ಅಭಿಪ್ರಾಯಪಟ್ಟಿತು. ನ್ಯಾಯಾಲಯವು ಉಲ್ಲೇಖಿಸಿದಂತೆ, ಕೇಂದ್ರ ಮೋಟಾರು ವಾಹನ ಕಾಯ್ದೆಯ ಸೆಕ್ಷನ್ 2(7) ಮತ್ತು 2(47) ರ ಪ್ರಕಾರ, ದ್ವಿಚಕ್ರ ವಾಹನಗಳನ್ನು ವಾಣಿಜ್ಯ ಬಳಕೆಗೆ ಬಳಸಲು ಯಾವುದೇ ಸಾಂವಿಧಾನಿಕ ಅಡ್ಡಿಯಿಲ್ಲ ಎಂಬುದು ಈ ಸಾರಿಗೆ ಕ್ರಾಂತಿಗೆ ಭದ್ರ ಬುನಾದಿ ಒದಗಿಸಿದೆ.

ಬೆಂಗಳೂರು ವಿಶ್ವದ ಅತ್ಯಂತ ದಟ್ಟಣೆಯ ನಗರಗಳಲ್ಲಿ ಒಂದಾಗಿದ್ದು, ಇಲ್ಲಿನ ಸಂಚಾರ ದಟ್ಟಣೆಯ ಅಂಕಿ-ಅಂಶಗಳು ಬೈಕ್ ಟ್ಯಾಕ್ಸಿಗಳ ಅನಿವಾರ್ಯತೆಯನ್ನು ನಿಚ್ಚಳವಾಗಿ ಎತ್ತಿ ತೋರಿಸುತ್ತವೆ. ಸಂಚಾರ ದಟ್ಟಣೆಯಿಂದ ಉಂಟಾಗುವ ಸಮಯದ ನಷ್ಟವನ್ನು ಲೆಕ್ಕಹಾಕಿದರೆ, ಸರಾಸರಿ ಬೆಂಗಳೂರಿಗನು ವರ್ಷಕ್ಕೆ ಸುಮಾರು 260 ಗಂಟೆಗಳನ್ನು

ಕೇವಲ ಟ್ರಾಫಿಕ್‌ನಲ್ಲಿಯೇ ಕಳೆಯುತ್ತಾನೆ. ಬೈಕ್ ಟ್ಯಾಕ್ಸಿ ಗಳು ಈ ವ್ಯರ್ಥವಾಗುವ ಸಮಯವನ್ನು ಶೇಕಡಾ 30 ರಿಂದ 40 ರಷ್ಟು ಕಡಿಮೆ ಮಾಡುವ ಸಾಮರ್ಥ್ಯ ಹೊಂದಿವೆ ಎಂದು ಅಂದಾಜಿಸಲಾಗಿದೆ. ವಾಹನಗಳ ಸಂಖ್ಯೆಯ ದೃಷ್ಟಿಯಿಂದ ನೋಡುವುದಾದರೆ, ಬೆಂಗಳೂರಿನಲ್ಲಿ 1.2 ಕೋಟಿಗೂ ಹೆಚ್ಚು ವಾಹನಗಳಿದ್ದು, ಅದರಲ್ಲಿ ಶೇಕಡಾ 70 ರಷ್ಟು ದ್ವಿಚಕ್ರ ವಾಹನಗಳಾಗಿವೆ. ಇವುಗಳನ್ನು ವ್ಯವಸ್ಥಿತವಾಗಿ ಮತ್ತು ಕಾನೂನುಬದ್ಧವಾಗಿ ಟ್ಯಾಕ್ಸಿಯಾಗಿ ಬಳಸುವುದರಿಂದ ರಸ್ತೆಯ ಮೇಲೆ ಅನಗತ್ಯವಾಗಿ ಸಂಚರಿಸುವ ಖಾಸಗಿ ಕಾರುಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತದೆ. ಲಾಸ್ಟ್ ಮೈಲ್ ಕನೆಕ್ಟಿವಿಟಿಯ ವಿಚಾರದಲ್ಲಿ, ನಮ್ಮ ಮೆಟ್ರೋ ಜಾಲವು 100 ಕಿಲೋಮೀಟರ್ ದಾಟುತ್ತಿದ್ದರೂ, ಮೆಟ್ರೋ ನಿಲ್ದಾಣದಿಂದ ಅಂತಿಮವಾಗಿ ಮನೆಗೆ ತಲುಪಲು ಆಟೋಗಳ ಮೇಲೆ ಅವಲಂಬಿತರಾಗುವುದು ಸಾಮಾನ್ಯ ಜನರಿಗೆ ದುಬಾರಿಯಾಗುತ್ತಿತ್ತು. ಈಗ ಬೈಕ್ ಟ್ಯಾಕ್ಸಿಗಳು ಈ ಪ್ರಮುಖ ಕೊಂಡಿಯನ್ನು ಕೇವಲ 20 ರಿಂದ 30 ರೂಪಾಯಿಗಳಲ್ಲಿ ಪೂರೈಸುವ ಮೂಲಕ ಸಾರ್ವಜನಿಕ ಸಾರಿಗೆಯನ್ನು ಹೆಚ್ಚು ಜನಸ್ನೇಹಿಯಾಗಿಸಿವೆ.

ಬೈಕ್ ಟ್ಯಾಕ್ಸಿಗಳ ಕಾನೂನುಬದ್ಧಗೊಳಿಸುವಿಕೆಯು ಕರ್ನಾಟಕದ ಆರ್ಥಿಕತೆಗೆ ಅನಿರೀಕ್ಷಿತ ವೇಗದಲ್ಲಿ ದೊಡ್ಡ ಕೊಡುಗೆಯನ್ನು ನೀಡಲಿದೆ. ನೇರ ಉದ್ಯೋಗ ಸೃಷ್ಟಿಯ ವಿಷಯಕ್ಕೆ ಬಂದರೆ, ಪ್ರಸ್ತುತ ಕರ್ನಾಟಕದಲ್ಲಿ ಸುಮಾರು 1.5 ಲಕ್ಷಕ್ಕೂ ಹೆಚ್ಚು ಬೈಕ್ ಟ್ಯಾಕ್ಸಿ ಚಾಲಕರು ಅಥವಾ 'ಕ್ಯಾಪ್ಟನ್ಸ್ ' ಇದ್ದಾರೆ. ಈ ಸಂಖ್ಯೆಯು 2027ರ ವೇಳೆಗೆ 5 ಲಕ್ಷಕ್ಕೆ ಏರುವ ನಿರೀಕ್ಷೆಯಿದೆ ಎಂದು ಆರ್ಥಿಕ ತಜ್ಞರು ವಿಶ್ಲೇಷಿಸಿದ್ದಾರೆ. ವರಮಾನದ ದೃಷ್ಟಿಯಿಂದ ನೋಡುವುದಾದರೆ, ಒಬ್ಬ ಸರಾಸರಿ ಬೈಕ್ ಟ್ಯಾಕ್ಸಿ ಚಾಲಕ ದಿನಕ್ಕೆ 800 ರಿಂದ 1200 ರೂಪಾಯಿಗಳವರೆಗೆ ಸುಲಭವಾಗಿ ಸಂಪಾದಿಸಬಹುದು. ಇದು ನಗರದ ನಿರುದ್ಯೋಗಿ ಯುವಕರಿಗೆ ಮತ್ತು ತಮ್ಮ ಶಿಕ್ಷಣದ ವೆಚ್ಚವನ್ನು ತಾವೇ ಭರಿಸಲು ಇಚ್ಛಿಸುವ ಪಾರ್ಟ್-ಟೈಮ್ ಕೆಲಸ ಹುಡುಕುವ ವಿದ್ಯಾರ್ಥಿಗಳಿಗೆ ಅತ್ಯುತ್ತಮವಾದ ಆರ್ಥಿಕ ಅವಕಾಶವಾಗಿದೆ. ಈ ಕಾನೂನು ಸ್ಪಷ್ಟತೆಯಿಂದಾಗಿ, ಪ್ರಮುಖ ಅಗ್ರಿಗೇಟರ್ ಕಂಪನಿಗಳು ಕರ್ನಾಟಕದಲ್ಲಿ ಸುಮಾರು 2,000 ಕೋಟಿ ರೂಪಾಯಿಗಳ ಬೃಹತ್ ಹೂಡಿಕೆ ಮಾಡಲು ಈಗಾಗಲೇ ಮುಂದಾಗಿವೆ. ಈ ಬೆಳವಣಿಗೆಯು ರಾಜ್ಯದ ಗಿಗ್ ಆರ್ಥಿಕತೆಗೆ (Gig Economy) ಹೊಸ ಚೈತನ್ಯ ನೀಡಿದೆ.

ಸುರಕ್ಷತೆ ಮತ್ತು ತಂತ್ರಜ್ಞಾನದ ಅಳವಡಿಕೆಯು ಈ ಸಾರಿಗೆ ಬದಲಾವಣೆಯ ಬೆನ್ನೆಲುಬಾಗಿದೆ. ವಿರೋಧ ವ್ಯಕ್ತಪಡಿಸುವವರ ಪ್ರಮುಖ ವಾದವೆಂದರೆ ಸುರಕ್ಷತೆಯ ಕೊರತೆ, ಆದರೆ ಇದನ್ನು ಎದುರಿಸಲು ಕಂಪನಿಗಳು ಈಗ ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುತ್ತಿವೆ. ಪ್ರತಿಯೊಂದು ಸವಾರಿಯನ್ನು ರಿಯಲ್-ಟೈಮ್ ಜಿಪಿಎಸ್ ಮೂಲಕ ಟ್ರ್ಯಾಕ್ ಮಾಡಲಾಗುತ್ತದೆ. ತುರ್ತು ಸಂದರ್ಭಗಳಲ್ಲಿ ಪ್ರಯಾಣಿಕರು ನೇರವಾಗಿ ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಲು ಅಥವಾ ಸಂದೇಶ ಕಳುಹಿಸಲು ಆ?ಯಪ್‌ನಲ್ಲಿ ವಿಶೇಷವಾದ ಔ ಬಟನ್ ಒದಗಿಸಲಾಗಿದೆ. ಅಷ್ಟೇ ಅಲ್ಲದೆ, ಪ್ರತಿಯೊಂದು ಸವಾರಿಗೂ ಈಗ ಕಡ್ಡಾಯವಾಗಿ ಅಪಘಾತ ವಿಮೆ ಅಥವಾ ಥರ್ಡ್ ಪಾರ್ಟಿ ಇನ್ಶೂರೆನ್ಸ್ ಇರಬೇಕೆಂದು ಹೈಕೋರ್ಟ್ ಕಟ್ಟುನಿಟ್ಟಿನ ಸೂಚನೆ ನೀಡಿದೆ. ಆಟೋ ರಿಕ್ಷಾ ಚಾಲಕರ ಹಿತಾಸಕ್ತಿ ಮತ್ತು ಮಾರುಕಟ್ಟೆಯಲ್ಲಿನ ಸಮತೋಲನದ ಬಗ್ಗೆ ಚರ್ಚಿಸುವುದು ಈ ಲೇಖನದ ಪ್ರಮುಖ





ಸುರಕ್ಷತೆ ಮತ್ತು ತಂತ್ರಜ್ಞಾನದ ಅಳವಡಿಕೆಯು ಈ ಸಾರಿಗೆ ಬದಲಾವಣೆಯ ಬೆನ್ನೆಲುಬಾಗಿದೆ. ವಿರೋಧ ವ್ಯಕ್ತಪಡಿಸುವವರ ಪ್ರಮುಖ ವಾದವೆಂದರೆ ಸುರಕ್ಷತೆಯ ಕೊರತೆ, ಆದರೆ ಇದನ್ನು ಎದುರಿಸಲು ಕಂಪನಿಗಳು ಈಗ ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುತ್ತಿವೆ. ಪ್ರತಿಯೊಂದು ಸವಾರಿಯನ್ನು ರಿಯಲ್-ಟೈಮ್ ಜಿಪಿಎಸ್ ಮೂಲಕ ಟ್ರ್ಯಾಕ್ ಮಾಡಲಾಗುತ್ತದೆ. ತುರ್ತು ಸಂದರ್ಭಗಳಲ್ಲಿ ಪ್ರಯಾಣಿಕರು ನೇರವಾಗಿ ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಲು ಅಥವಾ ಸಂದೇಶ ಕಳುಹಿಸಲು ಆ?ಯಪ್‌ನಲ್ಲಿ ವಿಶೇಷವಾದ ಔ ಬಟನ್ ಒದಗಿಸಲಾಗಿದೆ. ಅಷ್ಟೇ ಅಲ್ಲದೆ, ಪ್ರತಿಯೊಂದು ಸವಾರಿಗೂ ಈಗ ಕಡ್ಡಾಯವಾಗಿ ಅಪಘಾತ ವಿಮೆ ಅಥವಾ ಥರ್ಡ್ ಪಾರ್ಟಿ ಇನ್ಶೂರೆನ್ಸ್ ಇರಬೇಕೆಂದು ಹೈಕೋರ್ಟ್ ಕಟ್ಟುನಿಟ್ಟಿನ ಸೂಚನೆ ನೀಡಿದೆ.


ಆಶಯವಾಗಿದೆ. ಕರ್ನಾಟಕದಲ್ಲಿ ಸುಮಾರು 5 ಲಕ್ಷ ಆಟೋ ಚಾಲಕರಿದ್ದು, ಅವರ ಬದುಕು ಸಂಕಷ್ಟಕ್ಕೆ ಸಿಲುಕದಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯವಾಗಿದೆ. ಇದಕ್ಕಾಗಿ ಆಟೋ ಮತ್ತು ಬೈಕ್ ಟ್ಯಾಕ್ಸಿಗಳ ನಡುವೆ ಅಸಮಾನ ಸ್ಪರ್ಧೆ ಇರದಂತೆ ಕನಿಷ್ಠ ದರವನ್ನು ನಿಗದಿಪಡಿಸುವುದು ಹಾಗೂ ಆಟೋಗಳಿಗೆ ಇರುವಂತೆ ಬೈಕ್ ಟ್ಯಾಕ್ಸಿ ಗಳಿಗೂ ವಾಣಿಜ್ಯ ಪರವಾನಗಿ ಮತ್ತು ಸಾರಿಗೆ ಇಲಾಖೆಯ ಕಠಿಣ ನಿಯಮಗಳನ್ನು ಅನ್ವಯಿಸುವುದು ಅನಿವಾರ್ಯವಾಗಿದೆ. ಡಿಜಿಟಲೀಕರಣದ ಈ ಕಾಲದಲ್ಲಿ ಆಟೋ ಚಾಲಕರಿಗೂ ಸರ್ಕಾರದ ವತಿಯಿಂದ ಉಚಿತ ಟೆಕ್ನಾಲಜಿ ಪ್ಲಾಟ್‌ಫಾರ್ಮ್ ಒದಗಿಸುವುದರಿಂದ ಅವರು ಬೈಕ್ ಟ್ಯಾಕ್ಸಿಗಳೊಂದಿಗೆ ಸರಿಸಮಾನವಾಗಿ ಸ್ಪರ್ಧಿಸಲು ಸಾಧ್ಯವಾಗುತ್ತದೆ.

ಪರಿಸರ ಸ್ನೇಹಿ ಕ್ರಮವಾಗಿ 2026ರ ಕರ್ನಾಟಕದ ನೀತಿಯು

ಎಲೆಕ್ಟ್ರಿಕ್ ವಾಹನಗಳಿಗೆ ಹೆಚ್ಚಿನ ಒತ್ತು ನೀಡುತ್ತಿದೆ. ಇ-ಬೈಕ್ ಟ್ಯಾಕ್ಸಿ ಖರೀದಿಸುವವರಿಗೆ ರಾಜ್ಯ ಸರ್ಕಾರವು ಶೇಕಡಾ 20 ರಷ್ಟು ಸಬ್ಸಿ ಡಿ ನೀಡುವ ಯೋಜನೆಯನ್ನು ಹೊಂದಿದ್ದು, ಇದು ವಾಯು ಮಾಲಿನ್ಯ ನಿಯಂತ್ರಣದಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಬೈಕ್ ಟ್ಯಾಕ್ಸಿ ಗಳನ್ನು ಸಂಪೂರ್ಣವಾಗಿ ಇ-ವಾಹನಗಳಾಗಿ ಪರಿವರ್ತಿಸುವುದರಿಂದ ಬೆಂಗಳೂರಿನಂತಹ ನಗರದ ವಾಯು ಮಾಲಿನ್ಯವನ್ನು ಗಣನೀಯವಾಗಿ ತಗ್ಗಿಸಬಹುದು. ಸಾರ್ವಜನಿಕರ ಅಭಿಪ್ರಾಯದ ಮೇಲೆ ನಡೆದ ಸಮೀಕ್ಷೆಯೊಂದರ ಪ್ರಕಾರ, ಶೇಕಡಾ 85 ರಷ್ಟು ಬೆಂಗಳೂರಿಗರು ಬೈಕ್ ಟ್ಯಾಕ್ಸಿ ಗಳನ್ನು ಮುಕ್ತವಾಗಿ ಬೆಂಬಲಿಸುತ್ತಾರೆ. ವಿಶೇಷವಾಗಿ ಐಟಿ-ಬಿಟಿ ಉದ್ಯೋಗಿಗಳು ಮತ್ತು ದಿನಗೂಲಿ ನೌಕರರು ಇವುಗಳನ್ನು ಹೆಚ್ಚಾಗಿ ಬಳಸುತ್ತಿದ್ದಾರೆ. ಮಹಿಳೆಯರಿಗಾಗಿ ಪ್ರತ್ಯೇಕವಾಗಿ 'ಪಿಂಕ್ ಬೈಕ್ ಟ್ಯಾಕ್ಸಿ ' ಅಂದರೆ ಮಹಿಳಾ ಚಾಲಕರಿರುವ ಬೈಕ್ ಸೇವೆಯನ್ನು ಆರಂಭಿಸುವ ಯೋಜನೆ ಕೂಡ ಗಂಭೀರ ಚರ್ಚೆಯಲ್ಲಿದೆ, ಇದು ನಗರದಲ್ಲಿ ಮಹಿಳಾ ಸುರಕ್ಷತೆಯನ್ನು ಇನ್ನಷ್ಟು ಬಲಪಡಿಸಲಿದೆ. ಆದರೂ, ಮುಂದಿನ ಸವಾಲುಗಳು ಮತ್ತು ಶಿಫಾರಸುಗಳನ್ನು ಗಮನಿಸುವುದು ಬಹಳ ಮುಖ್ಯ. ನ್ಯಾಯಾಲಯದ ತೀರ್ಪು ಬಂದಿದ್ದರೂ ಅದರ ಅನುಷ್ಠಾನ ಸುಲಭವಲ್ಲ. ಪೊಲೀಸ್ ಇಲಾಖೆಯು ಸಾರಿಗೆ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ಚಾಲಕರನ್ನು ಅನಗತ್ಯವಾಗಿ ಪೀಡಿಸುವುದನ್ನು ನಿಲ್ಲಿಸಬೇಕು. ಟ್ರಾಫಿಕ್ ಮ್ಯಾನೇಜ್ಮೆಂಟ್ ಸುಧಾರಿಸಲು ಬೈಕ್ ಟ್ಯಾಕ್ಸಿಗಳ ಹೆಚ್ಚಳದಿಂದ ರಸ್ತೆಯಲ್ಲಿ ಅವ್ಯವಸ್ಥೆ ಉಂಟಾಗದಂತೆ ನೋಡಿಕೊಳ್ಳಲು ಪ್ರತ್ಯೇಕ 'ಪಿಕಪ್ ಪಾಯಿಂಟ್ 'ಗಳನ್ನು ಗುರುತಿಸುವುದು ಅಗತ್ಯವಾಗಿದೆ.

ಜಾಗತಿಕ ಸನ್ನಿವೇಶ ಮತ್ತು ಬೆಂಗಳೂರಿನ ತುಲನಾತ್ಮಕ ಅಧ್ಯಯನವನ್ನು ಮಾಡಿದಾಗ, ಆಗ್ನೇಯ ಏಷ್ಯಾದ ಇತರ ನಗರಗಳಾದ ಜಕಾರ್ತಾ, ಬ್ಯಾಂಕಾಕ್ ಮತ್ತು ಹೋ ಚಿ ಮಿನ್ ಸಿಟಿಯ ಉದಾಹರಣೆಗಳು ನಮ್ಮ ಕಣ್ಣಮುಂದಿವೆ. ಅಲ್ಲಿ 'ಗೋಜೆಕ್' ಮತ್ತು 'ಗ್ರಾಬ್' ನಂತಹ ಸಂಸ್ಥೆಗಳು ಬೈಕ್ ಟ್ಯಾಕ್ಸಿ ಗಳ ಮೂಲಕ ನಗರದ ಆರ್ಥಿಕತೆಯನ್ನೇ ಬುಡಮೇಲು ಮಾಡಿ ಸಕಾರಾತ್ಮಕ ಬದಲಾವಣೆ ತಂದಿವೆ. ಬೆಂಗಳೂರು ಕೂಡ ಇದೇ ಮಾದರಿಯ ದಟ್ಟಣೆಯನ್ನು ಹೊಂದಿರುವುದರಿಂದ, ಇಲ್ಲಿ ಬೈಕ್ ಟ್ಯಾಕ್ಸಿಗಳ ಕಾನೂನುಬದ್ಧಗೊಳಿಸುವಿಕೆ ಕೇವಲ ಸ್ಥಳೀಯ ಅಗತ್ಯವಲ್ಲ, ಬದಲಿಗೆ ಇದೊಂದು ಜಾಗತಿಕ ಸಾರಿಗೆ ಮಾದರಿಯ ಯಶಸ್ವಿ ಅಳವಡಿಕೆಯಾಗಿದೆ.

ಈ ದೇಶಗಳಲ್ಲಿ ಬೈಕ್ ಟ್ಯಾಕ್ಸಿಗಳು ಕೇವಲ ಜನರನ್ನು ಸಾಗಿಸುವುದಕ್ಕೆ ಸೀಮಿತವಾಗಿಲ್ಲ, ಬದಲಿಗೆ ಸಣ್ಣ ವ್ಯಾಪಾರಗಳ ವಿತರಣಾ ಸರಪಳಿಯ ಬೆನ್ನೆಲುಬಾಗಿವೆ. ಕರ್ನಾಟಕವು ಈಗ ಈ ಜಾಗತಿಕ ವೇದಿಕೆಯಲ್ಲಿ ತನ್ನ ಪ್ರಬಲ ಹೆಜ್ಜೆಯನ್ನು ಇರಿಸಿದೆ. ಗಿಗ್ ಆರ್ಥಿಕತೆಯ ಸಾಮಾಜಿಕ ಭದ್ರತೆ ಮತ್ತು ಸವಾಲುಗಳನ್ನು ವಿಶ್ಲೇಷಿಸಿದರೆ, ಬೈಕ್ ಟ್ಯಾಕ್ಸಿಗಳ ಕಾನೂನು ಬದ್ಧಗೊಳಿಸುವಿಕೆಯಿಂದ ಉಂಟಾಗುವ ಅತಿ ದೊಡ್ಡ ಲಾಭವೆಂದರೆ ಗಿಗ್ ಕಾರ್ಮಿಕರ ಅಧಿಕೃತ ಮಾನ್ಯತೆ. ಈವರೆಗೆ ಬೈಕ್ ಟ್ಯಾಕ್ಸಿ ಚಾಲಕರು ಕಾನೂನಿನ ಕಣ್ಣಿನಲ್ಲಿ 'ಅಕ್ರಮ' ಎಂಬ ಹಣೆಪಟ್ಟಿ ಹೊತ್ತಿದ್ದರು, ಆದರೆ ಈಗ ಅವರಿಗೆ ವಿಮೆ, ಪಿಎಫ್ ಮತ್ತು ಕನಿಷ್ಠ ವರಮಾನದ ಭದ್ರತೆ ಒದಗಿಸಲು ಹಾದಿ ಸುಗಮವಾಗಿದೆ. ಆರ್ಥಿಕವಾಗಿ ಹಿಂದುಳಿದ ವಲಸೆ ಕಾರ್ಮಿಕರಿಗೆ ಮತ್ತು ಶೈಕ್ಷಣಿಕ ವೆಚ್ಚ ಭರಿಸುವ ಶೇಕಡಾ 25 ರಷ್ಟು ವಿದ್ಯಾರ್ಥಿ ಚಾಲಕರಿಗೆ ಇದು ಜೀವನಾಧಾರವಾಗಲಿದೆ. ಸರ್ಕಾರವು 'ಗಿಗ್ ವರ್ಕರ್ಸ್ ಕಲ್ಯಾಣ ಮಂಡಳಿ'ಯನ್ನು ಸ್ಥಾಪಿಸುವ ಮೂಲಕ ಕಂಪನಿಗಳು ಚಾಲಕರನ್ನು ಶೋಷಣೆ ಮಾಡದಂತೆ ನೋಡಿಕೊಳ್ಳುವುದು ಅನಿವಾರ್ಯವಾಗಿದೆ.

ನಗರ ಯೋಜನೆಯಲ್ಲಿ ಮೈಕ್ರೋ-ಮೊಬಿಲಿಟಿಯ ಪಾತ್ರವನ್ನು ಕಡೆಗಣಿಸುವಂತಿಲ್ಲ. ಬೆಂಗಳೂರಿನ ಭವಿಷ್ಯದ ಸಾರಿಗೆ ಯೋಜನೆಯಲ್ಲಿ ಬೈಕ್ ಟ್ಯಾಕ್ಸಿ ಗಳನ್ನು ಒಂದು ಪ್ರಮುಖ ಅಂಗವಾಗಿ ಪರಿಗಣಿಸಬೇಕಿದೆ. ಟ್ರಾಫಿಕ್ ಸಿಗ್ನಲ್ ಆಪ್ಟಿಮೈಸೇಶನ್ ಅಡಿಯಲ್ಲಿ ಲಕ್ಷಾಂತರ ಬೈಕ್ ಟ್ಯಾಕ್ಸಿಗಳು ರಸ್ತೆಗೆ ಇಳಿದಾಗ, ಸಂಚಾರ ಪೊಲೀಸರು ಎಐ ಆಧಾರಿತ ಸಿಗ್ನಲ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕು. ಸಾಧ್ಯವಿರುವ ಕಡೆಗಳಲ್ಲಿ ದ್ವಿಚಕ್ರ ವಾಹನಗಳಿಗೆ ಪ್ರತ್ಯೇಕ ಪಥಗಳನ್ನು ಅಥವಾ ಪ್ರಯಾರಿಟಿ ಲೇನ್‌ಗಳನ್ನು ನಿರ್ಮಿಸುವುದರಿಂದ ಅಪಘಾತಗಳ ಸಂಖ್ಯೆಯನ್ನು ಗಣನೀಯವಾಗಿ ಕಡಿಮೆ ಮಾಡಬಹುದು. ಮೆಟ್ರೋ ನಿಲ್ದಾಣಗಳ ಬಳಿ ಬೈಕ್ ಟ್ಯಾಕ್ಸಿಗಳಿಗಾಗಿಯೇ ಪ್ರತ್ಯೇಕ ಪಾರ್ಕಿಂಗ್ ಮತ್ತು ಪಿಕಪ್ ವಲಯಗಳನ್ನು ಗುರುತಿಸುವುದರಿಂದ ರಸ್ತೆಯ ಮೇಲೆ ವಾಹನಗಳು ಗುಂಪುಗೂಡುವುದು ತಪ್ಪುತ್ತದೆ. ಆಟೋ

ರಿಕ್ಷಾ ಮತ್ತು ಬೈಕ್ ಟ್ಯಾಕ್ಸಿಗಳ ಸಹಬಾಳ್ವೆಯ ವಿಚಾರವು ಅತ್ಯಂತ ಸೂಕ್ಷ್ಮವಾಗಿದ್ದು, ಆಟೋ ಚಾಲಕರ ಕಳವಳವನ್ನು ಬಗೆಹರಿಸಲು ಹೈಬ್ರಿಡ್ ಮಾದರಿಯನ್ನು ಅನುಸರಿಸಬಹುದು. ಬೈಕ್ ಟ್ಯಾಕ್ಸಿಗಳು ಒಬ್ಬ ವ್ಯಕ್ತಿಗೆ ಮತ್ತು ಕಡಿಮೆ ಲಗೇಜ್ ಇರುವವರಿಗೆ ಸೀಮಿತವಾಗಲಿ, ಹಾಗೂ ಕುಟುಂಬಗಳು, ಹಿರಿಯ ನಾಗರಿಕರು ಮತ್ತು ಮಳೆಗಾಲದ ಸಮಯದಲ್ಲಿ ಆಟೋಗಳೇ ಸಾರ್ವಜನಿಕರ ಮೊದಲ ಆಯ್ಕೆಯಾಗಿ ಮುಂದುವರಿಯಲಿ. ಸರ್ಕಾರವು ಆಟೋ ಚಾಲಕರಿಗೆ ತಾಂತ್ರಿಕ ತರಬೇತಿ ನೀಡುವುದರ ಜೊತೆಗೆ, ಬೈಕ್ ಟ್ಯಾಕ್ಸಿ ಗಳಿಂದ ಬರುವ ವರಮಾನದ ಒಂದು ಸಣ್ಣ ಭಾಗವನ್ನು ಆಟೋ ಚಾಲಕರ ಕಲ್ಯಾಣ ನಿಧಿಗೆ ಮೀಸಲಿಡುವ ಬಗ್ಗೆ ಗಂಭೀರವಾಗಿ ಚಿಂತಿಸಬೇಕಿದೆ.

ಮಹಿಳಾ ಸಬಲೀಕರಣ ಮತ್ತು 'ಪಿಂಕ್ ಮೊಬಿಲಿಟಿ' ಪರಿಕಲ್ಪನೆಯು ಸಾರಿಗೆ ಕ್ರಾಂತಿಯಲ್ಲಿ ಹೊಸ ಆಯಾಮವನ್ನು ತರಲಿದೆ. ತಡರಾತ್ರಿ ಕೆಲಸ ಮುಗಿಸಿ ಬರುವ ಮಹಿಳೆಯರಿಗೆ ಮನೆ ಬಾಗಿಲಿಗೆ ತಲುಪಲು ಇದು ಸುರಕ್ಷಿತ ಮತ್ತು ಅತ್ಯಂತ ಅಗ್ಗದ ಮಾರ್ಗವಾಗಲಿದೆ. ಮಹಿಳಾ ಚಾಲಕರಿಗೆ ಉತ್ತೇಜನ ನೀಡಲು ಸರ್ಕಾರವು ವಿಶೇಷ ಸಬ್ಸಿಡಿ ನೀಡಿದರೆ ಮಹಿಳಾ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ. ಪರಿಸರ ಮತ್ತು ಸುಸ್ಥಿರತೆಯ ದೃಷ್ಟಿಯಿಂದ, 2026ರ ಹವಾಮಾನ ಬದಲಾವಣೆಯ ಸವಾಲುಗಳನ್ನು ಎದುರಿಸಲು ಬೈಕ್ ಟ್ಯಾಕ್ಸಿಗಳ ಕೊಡುಗೆ ದೊಡ್ಡದಿದೆ. ಒಂದು ಕಾರಿನಲ್ಲಿ ಒಬ್ಬರೇ ಪ್ರಯಾಣಿಸುವುದಕ್ಕಿಂತ ಬೈಕ್ ಟ್ಯಾಕ್ಸಿ ಬಳಕೆಯಿಂದ ಇಂಧನ ಬಳಕೆ ಶೇಕಡಾ 60 ರಷ್ಟು ಕಡಿಮೆಯಾಗುತ್ತದೆ. ಮುಂದಿನ ಮೂರು ವರ್ಷಗಳಲ್ಲಿ ಶೇಕಡಾ 100 ರಷ್ಟು ಬೈಕ್ ಟ್ಯಾಕ್ಸಿಗಳು ಎಲೆಕ್ಟ್ರಿಕ್ ಆಗಿರಬೇಕು ಎಂಬ ಕಠಿಣ ನಿಯಮವನ್ನು ಜಾರಿಗೆ ತಂದರೆ, ಬೆಂಗಳೂರಿನ ಕಾರ್ಬನ್ ಫುಟ್‌ಪ್ರಿಂಟ್ ಗಣನೀಯವಾಗಿ ತಗ್ಗಲಿದ್ದು, ಇದು 'ಹಸಿರು ಬೆಂಗಳೂರು' ನಿರ್ಮಾಣಕ್ಕೆ ಮುನ್ನುಡಿಯಾಗಲಿದೆ. ತಾಂತ್ರಿಕ ಭದ್ರತೆ ಮತ್ತು ಡೇಟಾ ಗೌಪ್ಯತೆಯ ವಿಷಯದಲ್ಲಿ, ಅಗ್ರಿಗೇಟರ್ ಕಂಪನಿಗಳು ಸಂಗ್ರಹಿಸುವ ಸವಾರರ ಮತ್ತು ಚಾಲಕರ ಮಾಹಿತಿಯು ಸುರಕ್ಷಿತವಾಗಿರಲು ಡೇಟಾ ಲೋಕಲೈಸೇಶನ್ ಅಡಿಯಲ್ಲಿ ಸ್ಥಳೀಯ ಸರ್ವರ್‌ಗಳ ಬಳಕೆ ಕಡ್ಡಾಯವಾಗಲಿ. ಚಾಲಕರು ಲಾಗಿನ್ ಆಗುವಾಗ ಮುಖ ಗುರುತಿಸುವಿಕೆ ಅಥವಾ ಲೈವ್ ಸೆಲ್ಫಿ ತಂತ್ರಜ್ಞಾನವನ್ನು ಬಳಸುವುದು ಸುರಕ್ಷತೆಯ ದೃಷ್ಟಿಯಿಂದ ಅತ್ಯಗತ್ಯ.

ಸರ್ಕಾರದ ಮುಂದಿರುವ ಸವಾಲುಗಳನ್ನು ಗಮನಿಸಿದರೆ, ಕಾನೂನುಬದ್ಧಗೊಳಿಸುವುದು ಕೇವಲ ಮೊದಲ ಹೆಜ್ಜೆಯಷ್ಟೇ ಆಗಿದೆ.

ಅದರ ಅನುಷ್ಠಾನದ ಹಂತದಲ್ಲಿ ಪರವಾನಗಿ ಪ್ರಕ್ರಿಯೆಯು


ಆನ್‌ಲೈನ್ ಮೂಲಕವೇ ಸರಳವಾಗಿ ಮತ್ತು ಭ್ರಷ್ಟಾಚಾರ ರಹಿತವಾಗಿ ನಡೆಯುವಂತಾಗಬೇಕು. ಪ್ರಯಾಣಿಕರು ಮತ್ತು ಚಾಲಕರ ನಡುವಿನ ಯಾವುದೇ ವಿವಾದಗಳನ್ನು ತ್ವರಿತವಾಗಿ ಬಗೆಹರಿಸಲು ಸಾರಿಗೆ ಇಲಾಖೆಯಲ್ಲಿ ಪ್ರತ್ಯೇಕ ಸಹಾಯವಾಣಿ ಅಥವಾ ಲೋಕಾಯುಕ್ತ ಮಾದರಿಯ ದೂರು ನಿರ್ವಹಣಾ ವ್ಯವಸ್ಥೆ ಇರಬೇಕು. ಒಟ್ಟಾರೆಯಾಗಿ, ಕರ್ನಾಟಕ ಹೈಕೋರ್ಟ್‌ನ ಈ ಐತಿಹಾಸಿಕ ತೀರ್ಪು ಕೇವಲ ಒಂದು ಸಾರಿಗೆ ಮಾಧ್ಯಮಕ್ಕೆ ನೀಡಿದ ಅನುಮತಿಯಲ್ಲ, ಇದು ಕಾಲಕ್ಕೆ ತಕ್ಕಂತೆ ಬದಲಾವಣೆಯನ್ನು ಒಪ್ಪಿಕೊಳ್ಳುವ ಪ್ರಬುದ್ಧ ಮನೋಭಾವದ ಸಂಕೇತವಾಗಿದೆ. ತಂತ್ರಜ್ಞಾನ ಮತ್ತು ಸಂಪ್ರದಾಯದ ನಡುವೆ ಸಮತೋಲನ ಕಾಯ್ದುಕೊಳ್ಳುತ್ತಾ ಸರ್ಕಾರವು ದೃಢವಾದ ಮಾರ್ಗಸೂಚಿಗಳನ್ನು ಜಾರಿಗೆ ತಂದರೆ, ಕರ್ನಾಟಕವು ಇಡೀ ದೇಶಕ್ಕೆ ನಗರ ಸಾರಿಗೆ ನಿರ್ವಹಣೆಯಲ್ಲಿ ಒಂದು ಅದ್ಭುತ ಮಾದರಿಯಾಗಿ ದಾರಿದೀಪವಾಗಬಲ್ಲದು. ಬೈಕ್ ಟ್ಯಾಕ್ಸಿಗಳು ಬೆಂಗಳೂರಿನ ರಸ್ತೆಗಳ

ಮೇಲಿನ ವಾಹನಗಳ ಹೊರೆ ತಗ್ಗಿಸಿ, ಸಾಮಾನ್ಯ ಮನುಷ್ಯನ ಆರ್ಥಿಕ ಸ್ಥಿತಿಗೆ ಹೊರೆಯಾಗದಂತೆ ಸುಗಮ ಪ್ರಯಾಣಕ್ಕೆ ಹಾದಿ ಮಾಡಿಕೊಡಲಿ ಎಂಬುದು ಸಮಸ್ತ ಸಾರ್ವಜನಿಕರ ಆಶಯವಾಗಿದೆ.

Scanned with OKEN Scanner

# ವಿಕಸಿತ ಭಾರತಕ್ಕೆ ಮೋದಿ ಲೆಕ್ಕ

ಕೇಂದ್ರ ಮುಂಗಡ ಪತ್ರ



# ಬಜೆಟ್ 2026

ಬಜೆಟ್ ಹತ್ತಿರ ಬಂದಿದೆ. ನಿರೀಕ್ಷೆ ಬೆಟ್ಟದಷ್ಟಿದೆ. ದಾಖಲೆಯ ಒಂಬತ್ತನೇ ಬಜೆಟ್ ಮಂಡಿಸಲು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸಿದ್ಧರಾಗಿದ್ದಾರೆ. ಈ ಬಾರಿ ವಿಕಸಿತ ಭಾರತದೆಡೆಗೆ ಜನರನ್ನು ಕೊಂಡೊಯ್ಯುವ ದಿಕ್ಸೂಚಿ ಬಜೆಟನ್ನು ಅವರು ಮಂಡಿಸಲಿದ್ದಾರೆ ಎಂದು ಬಣ್ಣಿಸಲಾಗುತ್ತಿದೆ. ಆದರೆ ಎಲ್ಲರ ನಿರೀಕ್ಷೆಗಳನ್ನೂ ಪೂರೈಸಲು ಸಾಧ್ಯವಾಗದು ಎನ್ನುವುದು ವಾಸ್ತವಿಕ ಸಂಗತಿ. ಇಲ್ಲಿ ವಿವಿಧ ವಲಯಗಳ ನಿರೀಕ್ಷೆಗಳೇನು, ಜನರ ಅಪೇಕ್ಷೆಗಳೇನು ಎಂದು ಗುರುತಿಸುವ ಪ್ರಯತ್ನ ನಡೆದಿದೆ.

# ಈ ಸಲ ದೇಶದ ನಿರೀಕ್ಷೆಗಳೇನು?



## ಮಹಿಳಾ ಸಬಲೀಕರಣಕ್ಕೆ ಒತ್ತು

ಸರ್ಕಾರದ ಅನೇಕ ಕಾರ್ಯಕ್ರಮಗಳಲ್ಲಿ ಮಹಿಳಾ ಸಬಲೀಕರಣಕ್ಕೆ ಒತ್ತುನೀಡಲಾಗುತ್ತಿದೆ. ಈ ಬಾರಿಯ ಬಜೆಟ್‌ನಲ್ಲೂ ಮತ್ತಷ್ಟು ಕ್ರಮಗಳನ್ನು ಮಂಡಿಸುವ ನಿರೀಕ್ಷೆ ಇದೆ. ಮಹಿಳಾ ಉದ್ಯೋಗಿಗಳು ಗಳಿಸುವ ಆದಾಯಕ್ಕೆ ಹೆಚ್ಚಿನ ತೆರಿಗೆ ವಿನಾಯಿತಿ, ಮಹಿಳಾ ಉದ್ಯಮಿಗಳು ಶುರು ಮಾಡುವ ನವೋದ್ಯಮಗಳಿಗೆ ಕಡಿಮೆ ತೆರಿಗೆ ಹಾಗೂ ಕಡಿಮೆ ಬಡ್ಡಿ ಸಾಲ ನೀಡುವ ನಿರೀಕ್ಷೆ. ಅದರಲ್ಲೂ ಗ್ರಾಮೀಣ ಪ್ರದೇಶದ ಮಹಿಳೆಯರಲ್ಲಿ ಜಾಗೃತಿ ಮೂಡಿಸಿ ಅವರನ್ನೂ ಮುಖ್ಯವಾಹಿನಿಗೆ ತರಲು ಒತ್ತು ನೀಡಬೇಕೆನ್ನುವುದು ತಜ್ಞರ ಸಲಹೆ. ಇದರ ಜೊತೆಗೆ ಬಾಣಂತಿ ಆರೈಕೆಗೆ ಕ್ರಮಗಳು, ಪೌಷ್ಠಿಕ ಕಾರ್ಯಕ್ರಮಗಳು ಇನ್ನಷ್ಟು ಹೆಚ್ಚಿಸಬೇಕು. ಹಣದುಬ್ಬರವನ್ನು ನಿಭಾಯಿಸಲು ಆರ್ಥಿಕ ಬೆಂಬಲ ದೊರೆಯಬೇಕು.




## ತೆರಿಗೆಯಲ್ಲಿ ಬದಲಾವಣೆ ನಿರೀಕ್ಷೆ

DIRECT TAX
Standard Deduction

**ಸ್ಟ್ಯಾಂಡರ್ಡ್ ಡಿಡಕ್ಷನ್ ಏರಿಕೆ:** ತೆರಿಗೆ ಲೆಕ್ಕ ಹಾಕುವ ಮೊದಲೇ ಆದಾಯದಲ್ಲಿ ಕಡಿತ ತೋರಿಸಲು ಇರುವ ಅವಕಾಶಕ್ಕೆ ಸ್ಟ್ಯಾಂಡರ್ಡ್ ಡಿಡಕ್ಷನ್ ಎನ್ನುತ್ತಾರೆ. ಹೊಸ ತೆರಿಗೆ ಪದ್ಧತಿಯಲ್ಲಿ ಸ್ಟ್ಯಾಂಡರ್ಡ್ ಡಿಡಕ್ಷನ್ ಅನ್ನು 50,000ದಿಂದ 75,000 ರೂ.ಗೆ ಏರಿಸಲಾಗಿದೆ. ಇದನ್ನು 1.5 ಲಕ್ಷ ಅಲ್ಲದಿದ್ದರೂ, 1 ಲಕ್ಷಕ್ಕಾದರೂ ಏರಿಸಬೇಕು ಎನ್ನುವ ಬೇಡಿಕೆ ಇದೆ.

Capital Gains

**ಬಂಡವಾಳ ಲಾಭದ ತೆರಿಗೆಯಲ್ಲಿ ವಿನಾಯ್ತಿ:** ಕ್ಯಾಪಿಟಲ್ ಗೇನ್ಸ್ ಅಥವಾ ಬಂಡವಾಳ ಲಾಭದ ತೆರಿಗೆ ಸೆಕ್ಷನ್ 87ಎ ವಿನಾಯಿತಿ 12 ಲಕ್ಷ ರೂ ಆದಾಯದವರೆಗೆ 60,000 ರೂ.ಗೆ ಏರಿಸಲಾಗಿದೆ. ಆದರೆ ಈ ವಿನಾಯಿತಿ ಈಕ್ವಿಟಿ ಷೇರು ಮತ್ತು ಮ್ಯೂಚುಯಲ್ ಫಂಡ್‌ನಿಂದ ಬರುವ ಬಂಡವಾಳ ಲಾಭಕ್ಕೆ ಅನ್ವಯ ಇಲ್ಲ. ಈ ಬಜೆಟ್‌ನಲ್ಲಾದರೂ 12 ಲಕ್ಷ ರೂ.ಗಿಂತ ಕಡಿಮೆ ಆದಾಯ ಇರುವ ಎಲ್ಲರಿಗೂ ಷೇರು ಮತ್ತು ಮ್ಯೂಚುಯಲ್ ಫಂಡ್‌ನಿಂದ ಬರುವ ಆದಾಯವನ್ನೂ ಸೇರಿವಿನಾಯಿತಿ ಲಾಭಕ್ಕೆ ಸೇರಿಸಬೇಕು.

medical

**ಆರೋಗ್ಯ ವಿಮೆಗೂ ತೆರಿಗೆ ಕಡಿತ:** ಹಳೇ ಆದಾಯ ತೆರಿಗೆ ಪದ್ಧತಿಯಲ್ಲಿ ಆರೋಗ್ಯವಿಮೆಯ ಕಂತನ್ನೂ ಆದಾಯ ತೆರಿಗೆ ಲೆಕ್ಕ ಹಾಕುವಾಗ ಕಡಿತಗೊಳಿಸಲಾಗುತ್ತಿತ್ತು. ಆದರೆ ಹೊಸ ತೆರಿಗೆ ಪದ್ಧತಿಯಲ್ಲಿ ಆರೋಗ್ಯ ತೆರಿಗೆಗೆ ಆ ಸೌಲಭ್ಯ ಇಲ್ಲ. ಹೀಗಾಗಿ ಈ ಬಾರಿ ಸಣ್ಣ ತೆರಿಗೆದಾರರಿಗೆ ಈ ಅನುಕೂಲ ಮತ್ತೆ ಕಲ್ಪಿಸಬೇಕು.

Housing

**ಮನೆ ಸಾಲದ ಬಡ್ಡಿಗೆ ತೆರಿಗೆ ರಿಬೇಟ್?:** ಹೊಸ ತೆರಿಗೆ ವ್ಯವಸ್ಥೆಯಲ್ಲಿ ಮನೆ ಖರೀದಿಸಿದಾಗ ಪಡೆದುಕೊಳ್ಳುವ ಸಾಲದ ಮೇಲಿನ ಬಡ್ಡಿಗೆ ತೆರಿಗೆಯಲ್ಲಿ ಕಡಿತ ಇಲ್ಲ. ಮನೆ ಬೆಲೆಯೂ ತುಂಬಾ ದುಬಾರಿಯಾಗಿರುವ ಸಂದರ್ಭದಲ್ಲಿ ಮನೆ ಕೊಳ್ಳುವವರ ಮೇಲೆ ಹೆಚ್ಚಿನ ಭಾರ ಬಿದ್ದಿದೆ. ಹೀಗಾಗಿ ಸಾಲದ ಮೇಲಿನ ಬಡ್ಡಿಯನ್ನು ಕಡಿತಗೊಳಿಬೇಕು.

TDS

**ಟಿಡಿಎಸ್ ಸರಳೀಕರಣ:** ಟ್ಯಾಕ್ಸ್ ಡಿಡಕ್ಷನ್ ಅಟ್ ಸೋರ್ಸ್ ಆದಾಯದ ಮೂಲವಲ್ಲ. ಬದಲಾಗಿ ತೆರಿಗೆ ತಪ್ಪಿಹೋಗದಂತೆ ಮಾಡುವ ಒಂದು ವಿಧಾನ. ಈಗ ಟಿಡಿಎಸ್ ಅನ್ನು 0.1%, 1%, 2%, 5%, 10% ಮತ್ತು 20%ಗಳಲ್ಲಿ ಕಡಿತಗೊಳಿಸಲಾಗುತ್ತಿದೆ. ಇದನ್ನು ಸರಳೀಕರಣಗೊಳಿಸಿ, 1 ಮತ್ತು 5 ಪರ್ಸೆಂಟ್‌ಗಳಿಗೆ ಸೀಮಿತಗೊಳಿಸಬೇಕು ಎನ್ನುವುದು ತಜ್ಞರ ಸಲಹೆ.

INCOME TAX

**ಆದಾಯ ತೆರಿಗೆ ರೀಫಂಡ್ ನೈಜ ಸಮಯದ ಮಾಹಿತಿ:** ಆದಾಯ ತೆರಿಗೆ ರೀಫಂಡ್ ಕುರಿತು ನೈಜ ಸಮಯದ ಮಾಹಿತಿ ತೆರಿಗೆದಾರರಿಗೆ ಲಭ್ಯವಾಗುವಂಥ ವ್ಯವಸ್ಥೆಯನ್ನು ಈ ಬಜೆಟ್‌ನಲ್ಲೇ ಮಂಡಿಸುವ ನಿರೀಕ್ಷೆ.

## ಸಾರ್ವಜನಿಕ ಆರೋಗ್ಯ ಕ್ಷೇತ್ರಕ್ಕೆ ಬೇಕು ಹೆಚ್ಚಿನ ಅನುದಾನ

ವೈದ್ಯಕೀಯ ವೆಚ್ಚ ಭಾರೀ ಪ್ರಮಾಣದಲ್ಲಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡುವ ಅಗತ್ಯ ಇದೆ ಎಂದು ಅಧ್ಯಯನ ವರದಿಗಳು ಹೇಳಿವೆ. ಕಳೆದ ವರ್ಷದ ಡಿಸೆಂಬರ್‌ನಲ್ಲಿ ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಅಡ್ವಾನ್ಸ್‌ಡ್ ರಿಸರ್ಚ್‌ನಲ್ಲಿ ಪ್ರಕಟವಾದ 'ಇಂಪ್ಯಾಕ್ಟ್ ಆಫ್ ಡಿಟರ್ಮಿನೆಂಟ್ಸ್ ಆಫ್ ಹೆಲ್ತ್‌ಕೇರ್ ಎಕ್ಸ್‌ಪೆಂಡಿಚರ್ ಇನ್ ಇಂಡಿಯಾ: ದಿ ಎಆರ್‌ಡಿಎಲ್ ಬೌಂಡ್ಸ್ ಟೆಸ್ಟಿಂಗ್ ಅಪ್ರೋಚ್' ವರದಿ ಪ್ರಕಟಿಸಲಾಗಿದೆ. ಇದರಲ್ಲಿ 1991ರಿಂದ 2023ರವರೆಗಿನ ಒಂದು ಕುಟುಂಬಕ್ಕೆ ಎಷ್ಟು ಮತ್ತು ತಲಾದಾಯದ ಪ್ರಮಾಣದಲ್ಲಿ ಎಷ್ಟು ವೈದ್ಯಕೀಯಕ್ಕಾಗಿ ಖರ್ಚು ಮಾಲಾಗುತ್ತಿದೆ ಎನ್ನುವ ಮಾಹಿತಿಯನ್ನು ವಿಶ್ಲೇಷಿಸಲಾಗಿದೆ. ಆರೋಗ್ಯ ಕ್ಷೇತ್ರದ ಮೇಲೆ ಮಾಡುವ ವೆಚ್ಚವು ಆದಾಯ ಹೆಚ್ಚಳ, ಶಿಕ್ಷಣ ಮಟ್ಟ, ಹಣದುಬ್ಬರ ಮತ್ತು ಜೀವಿತಾವಧಿ ಎಲ್ಲದರ ಮೇಲೂ ಪರಿಣಾಮ ಬೀರುತ್ತದೆ ಎಂದು ತಿಳಿಸಿದೆ. ಭಾರತದ ಅಭಿವೃದ್ಧಿ ಪಥ ಆರೋಗ್ಯ ವೆಚ್ಚವನ್ನೂ ಹೆಚ್ಚಿಸಿದೆ. ಗ್ರಾಮೀಣ ಹಾಗೂ ಕಡಿಮೆ ಆದಾಯದ ಕುಟುಂಬಗಳನ್ನು ಇದು ತೊಂದರೆಗೆ ತಳ್ಳಿದೆ. ಹೀಗಾಗಿ ಸರ್ಕಾರದ ನೆರವಿಲ್ಲದೆ ಅನಾರೋಗ್ಯದ ಹೊರೆ ತಗ್ಗಿಸಿಕೊಳ್ಳುವುದು ಜನರಿಗೆ ಕಷ್ಟವಾಗಿದೆ ಎಂದೂ ಅಧ್ಯಯನ ವರದಿ ತಿಳಿಸಿದೆ. ಇದನ್ನೆಲ್ಲ ಪರಿಗಣಿಸಿ, ಸಾರ್ವಜನಿಕ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಹಣ ನಿಗದಿಪಡಿಸುವ ಅಗತ್ಯ ಇದೆ.



## ರಕ್ಷಣಾ ಇಲಾಖೆಗೆ ಹೆಚ್ಚಿನ ಒತ್ತು

ಇನ್ನು 2026–27ರ ಆರ್ಥಿಕ ವರ್ಷದಿಂದ ಸಾಲ–ಜಿಡಿಪಿ ಅನುಪಾತವನ್ನು ಕಡಿಮೆ ಮಾಡುವತ್ತ ಗಮನಹರಿಸಿ, ಹೆಚ್ಚುತ್ತಿರುವ ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳ ಹಿನ್ನೆಲೆಯಲ್ಲಿ ರಕ್ಷಣಾ ವೆಚ್ಚಕ್ಕೆ ಹೆಚ್ಚಿನ ಅನುದಾನ ಹಂಚಿಕೆ ಮಾಡುವ ನಿರೀಕ್ಷೆಯನ್ನು ಇಟ್ಟುಕೊಳ್ಳಲಾಗಿದೆ. ವಿಕಸಿತ ಭಾರತ ಗ್ರಾಮೀಣ ರೋಜ್ಗಾರ ಮತ್ತು ಆಜೀವಿಕಾ ಮಿಷನ್ ಯೋಜನೆಗೆ 2026ರ ಯೂನಿಯನ್ ಬಜೆಟ್‌ನಲ್ಲಿ ಪ್ರತ್ಯೇಕ ಹಂಚಿಕೆ ಘೋಷಣೆಯಾಗಬಹುದು ಎಂದು ನಿರೀಕ್ಷಿಸಲಾಗಿದೆ.

### 8ನೇ ವೇತನ ಆಯೋಗ

8ನೇ ವೇತನ ಆಯೋಗ 2026, ಜನವರಿ 1ರಿಂದಲೇ ಪೂರ್ವಾನ್ವಯವಾಗಿ ಜಾರಿಗೆ ಬರಲಿದೆ ಎಂಬುದು ನಿರೀಕ್ಷೆ. ಹದಿನಾರನೇ ಹಣಕಾಸು ಆಯೋಗದ ಶಿಫಾರಸುಗಳಿಗೆ ಅನುಗುಣವಾಗಿ ರಾಜ್ಯಗಳಿಗೆ ತೆರಿಗೆ ಹಂಚಿಕೆಯಾಗುವ ನಿರೀಕ್ಷೆಯೂ ಇದೆ.



## ಇನ್ಶುರೆನ್ಸ್ ವಲಯ ಏನು ನಿರೀಕ್ಷಿಸುತ್ತಿದೆ?




- ಹೆಲ್ತ್ ಇನ್ಶುರೆನ್ಸ್ ಮೇಲಿನ ಕಂತುಗಳಿಗೆ ಜಿಎಸ್‌ಟಿ ತೆಗೆದಿರುವುದು ಲಾಭವಾಗಿದೆ. ಅದೇ ರೀತಿ ಆದಾಯ ತೆರಿಗೆ ಸೆಕ್ಷನ್ 80 ಡಿ ಅಡಿಯಲ್ಲಿ ನೀಡಲಾಗುತ್ತಿದ್ದ ತೆರಿಗೆ ವಿನಾಯಿತಿಯನ್ನು ಹೊಸ ತೆರಿಗೆ ಪದ್ಧತಿಯಲ್ಲೂ ಮುಂದುವರಿಸಬೇಕು.
- ಜೀವ ವಿಮೆಗೆ ಆದಾಯ ತೆರಿಗೆಯ ಸೆಕ್ಷನ್ 80ಡಿ ನೀಡುತ್ತಿರುವ 25,000 ತೆರಿಗೆ ಕಡಿತದ ಲಾಭವನ್ನು ಕನಿಷ್ಠ 50,000 ರೂ.ಗೆ ಹೆಚ್ಚಿಸಬೇಕು.
- ಕೈಗೆಟುಕುವ ಆರೋಗ್ಯ ವಿಮೆ ದರ ಮೀರಿ ಆಸ್ಪತ್ರೆ ಖರ್ಚು ಹೆಚ್ಚಾಗುತ್ತಿದೆ. ವೈದ್ಯಕೀಯ ಉಪಕರಣಗಳ ತಯಾರಿಕೆಗೆ ನೀಡುತ್ತಿರುವ ಪ್ರೋತ್ಸಾಹಧನ ಸೇರಿ, ಈ ಖರ್ಚು ತಗ್ಗುವ ಹಾಗೆ ನೋಡಿಕೊಳ್ಳಬೇಕು. ಅನಗತ್ಯ ವೈದ್ಯಕೀಯ ಪ್ರಕ್ರಿಯೆಗಳು, ಅತಿಯಾದ ಬೆಲೆ ತಡೆಗೆ ಕ್ರಮ ಕೈಗೊಳ್ಳಬೇಕು.
- ಜೀವ ವಿಮೆ, ಆರೋಗ್ಯ ವಿಮೆ ಮತ್ತು ಜನರಲ್ ವಿಮೆಗಳನ್ನು ಒಂದೇ ಫ್ರೇಂ ವರ್ಕ್ ಅಡಿಯಲ್ಲಿ ತರುವುದು ಈ ಕ್ಷೇತ್ರದ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಮತ್ತು ವೆಚ್ಚವನ್ನು ತಗ್ಗಿಸುತ್ತದೆ.

## ವಿದ್ಯುತ್ ಬೈಕ್‌ಗಳಿಗೆ ಬೇಕು ಹೆಚ್ಚಿನ ಸಬ್ಸಿಡಿ

2025ರಲ್ಲಿ ದಾಖಲೆಯ 23 ಲಕ್ಷ ವಿದ್ಯುತ್ ವಾಹನಗಳು ಮಾರಾಟವಾಗಿವೆ. ಇದರಲ್ಲಿ 12.8 ಲಕ್ಷ ದ್ವಿಚಕ್ರ ವಾಹನಗಳು. ಈ ಕ್ಷೇತ್ರದಲ್ಲಿ ಇನ್‌ವರ್ಟೆಡ್ ಟ್ಯಾಕ್ಸ್ ಸ್ಥಳೀಯ ಉತ್ಪಾದಕರ ಕಳವಳಕ್ಕೆ ಕಾರಣ. ಈ ಕ್ಷೇತ್ರದಲ್ಲಿ ತಯಾರಾದ ವಸ್ತುಗಳ ಮೇಲೆ 5% ತೆರಿಗೆ ಇದೆ. ಆದರೆ ಕಚ್ಚಾ ವಸ್ತುಗಳ ಮೇಲೆ 18% ತೆರಿಗೆ ಕಟ್ಟಬೇಕಾಗುತ್ತದೆ. ಹೆಚ್ಚುವರಿ ತೆರಿಗೆ ನಂತರ ರೀಫಂಡ್ ಆಗುತ್ತದಾದರೂ, ಭಾರೀ ಪ್ರಮಾಣದ ವರ್ಕಿಂಗ್ ಕ್ಯಾಪಿಟಲ್ ಅಗತ್ಯ ಬೀಳುತ್ತದೆ. ಈ ಸೆಕ್ಟರ್‌ಗೆ ಬೇಕಾದ ಕಚ್ಚಾ ವಸ್ತುಗಳನ್ನೂ ಕೂಡ ಅದೇ ಪ್ರಮಾಣದ ತೆರಿಗೆಯೊಂದಿಗೆ ಹೊಂದಾಣಿಕೆ ಮಾಡಬೇಕೆನ್ನುವುದು ನಿರೀಕ್ಷೆ. ಜೊತೆಗೆ ಎಲೆಕ್ಟ್ರಿಕ್ ಸ್ಕೂಟರ್‌ಗಳು ಸಾಕಷ್ಟು ಪ್ರಮಾಣದಲ್ಲಿ ಬಂದಿವೆ. ಭಾರತದಲ್ಲಿ ಸ್ಕೂಟರ್‌ಗಿಂತ ಬೈಕ್‌ಗಳು ಹೆಚ್ಚಿನ ಪ್ರಮಾಣದಲ್ಲಿವೆ. ಶೇ.70ರಷ್ಟು ಬೈಕ್‌ಗಳೇ ಇವೆ. ಆದರೆ ವಿದ್ಯುತ್ ಬೈಕ್‌ಗಳು ಆ ಪ್ರಮಾಣದಲ್ಲಿ ಬರುತ್ತಿಲ್ಲ. ಹೀಗಾಗಿ 2030ರ ರಾಷ್ಟ್ರೀಯ ಗುರಿ ಮುಟ್ಟಲು ಈ ಕ್ಷೇತ್ರದಲ್ಲಿ ಹೆಚ್ಚಿನ ಸಬ್ಸಿಡಿಯ ಅವಶ್ಯಕತೆ ಇದೆ.

**ಇ–ಮೊಬಿಲಿಟಿ:** ಸಾರ್ವಜನಿಕ ಸಾರಿಗೆಯಲ್ಲಿ ವಿದ್ಯುತ್ ವಾಹನಗಳಿಗೆ ಹೆಚ್ಚಿನ ಪ್ರೋತ್ಸಾಹದ ಅಗತ್ಯವಿದೆ. ಎಂಎನ್‌ಆರ್‌ಇ ಯೋಜನೆ ಅಡಿಯಲ್ಲಿ ಈಗಾಗಲೇ ಫೇಮ್ ಮತ್ತು ಎಸಿಸಿ ಸೆಲ್ ಬ್ಯಾಟರಿಗಳ ಉತ್ಪಾದನಾ ಆಧರಿತ ಪ್ರೋತ್ಸಾಹಧನ(ಪಿಎಲ್‌ಐ) ಮುಂತಾದ ಉಪಕ್ರಮಗಳು ಕ್ಷೇತ್ರವನ್ನು ಸುಸ್ಥಿರಗೊಳಿಸಿವೆ. ಇದರ ಜೊತೆಗೆ ಅತ್ಯುತ್ತಮ ನಿರ್ವಹಣೆಯ ಬ್ಯಾಟರಿ ಬಿಡಿ ಭಾಗಗಳು, ಮುಂದಿನ ತಲೆಮಾರಿನ ವಿದ್ಯುತ್ ಸ್ಟೋರೇಜ್ ಮುಂತಾದವುಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗೆ ಹೆಚ್ಚಿನ ಪ್ರೋತ್ಸಾಹವನ್ನು ಈ ಕ್ಷೇತ್ರ ನಿರೀಕ್ಷಿಸುತ್ತಿದೆ.





## ಸುಸ್ಥಿರ ನಗರ ಯೋಜನೆ ಮತ್ತು ರಿಯಲ್ ಎಸ್ಟೇಟ್‌ಗೆ ಪ್ರೋತ್ಸಾಹ

ನಗರ ಮೂಲಸೌಕರ್ಯ ಮತ್ತು ರಿಯಲ್ ಎಸ್ಟೇಟ್ ವಿಭಾಗಗಳು ಹೊಂದಾಣಿಕೆಯಿಂದ ಅಭಿವೃದ್ಧಿಯಾಗುವ ನಿರೀಕ್ಷೆ ಇದೆ. ಇತ್ತೀಚಿನ ವರ್ಷಗಳಲ್ಲಿ ನ್ಯಾಷನಲ್ ಮಿಷನ್ ಆನ್ ಸಸ್ಟೇನೆಬಲ್ ಹ್ಯಾಬಿಟೇಟ್, ನಗರ ಹಸಿರು ಮಾರ್ಗಸೂಚಿ ವಿಸ್ತರಣೆ, ಗೃಹ ಮತ್ತು ಇತರ ಹಸಿರು ಕಟ್ಟಡಗಳ ಗುಣಮಟ್ಟಕ್ಕೆ ಬೆಂಬಲ ಇತ್ಯಾದಿ ಉಪಕ್ರಮಗಳಿಂದ ಸ್ವಚ್ಛ ಮತ್ತು ಪರಿಸರ ಸುಸ್ಥಿರ ನಗರಗಳ ನಿರ್ಮಾಣಕ್ಕೆ ಬುನಾದಿ ಹಾಕಲಾಗಿದೆ. ಆದರೆ ಇವುಗಳ ಅನುಷ್ಠಾನದಲ್ಲಿ ಸಾಕಷ್ಟು ತೊಂದರೆಗಳಿವೆ. ನಿಯಂತ್ರಣ ಪ್ರಾಧಿಕಾರಗಳು ಮತ್ತು ಅನುಷ್ಠಾನ ಸಂಸ್ಥೆಗಳ ನಡುವೆ ಉತ್ತಮ ಹೊಂದಾಣಿಕೆಯಿಂದ ನೀತಿಗಳ ಉದ್ದೇಶದಿಂದ ಅನುಷ್ಠಾನದತ್ತ ಪ್ರಗತಿ ಸಾಧ್ಯವಾಗುತ್ತದೆ. ಸುಸ್ಥಿರ ನೀತಿಗಳನ್ನು ಕೇವಲ ವಿನ್ಯಾಸದಲ್ಲಿ ಮಾತ್ರವಲ್ಲ ಅನುಷ್ಠಾನದಲ್ಲೂ ಅಳವಡಿಸಿಕೊಳ್ಳಲು ಪ್ರೋತ್ಸಾಹಧನ, ಕಟ್ಟಡಗಳ ಹಸಿರು ಸರ್ಟಿಫಿಕೇಷನ್‌ಗೆ ಬೆಂಬಲ, ನೀರು, ಕಸ ನಿರ್ವಹಣೆ, ಇಂಧನ ಸಮರ್ಥ ಬಳಕೆ ಮುಂತಾದವು ಹೆಚ್ಚಿನ ನೆರವನ್ನು ಬೇಡುತ್ತಿವೆ. ನಿರ್ದಿಷ್ಟ ಮಾರ್ಗಸೂಚಿಯೊಂದಿಗೆ ಪರಿಸರ ಕ್ಲಿಯರೆನ್ಸ್ ಡಿಜಿಟಲ್ ಪ್ರಕ್ರಿಯೆಗಳು ಪಾರದರ್ಶಕತೆಯನ್ನು ಹೆಚ್ಚಿಸಲಿವೆ ಎನ್ನುತ್ತಾರೆ ತಜ್ಞರು.

### ಮೊದಲ ಬಾರಿ ಮನೆ ಕೊಳ್ಳುಗರಿಂದ ನಿರೀಕ್ಷೆ

ಜಿಡಿಪಿಯ 7%ರಷ್ಟು ವಸತಿ ವಲಯಕ್ಕೇ ಸಲ್ಲುತ್ತದೆ. ಹತ್ತಾರು ಲಕ್ಷ ಜನ ಇದರಲ್ಲಿ ಉದ್ಯೋಗವನ್ನು ಕಂಡುಕೊಂಡಿದ್ದಾರೆ. ಆರ್ಥಿಕ ಪ್ರಗತಿಯ ಮುಖ್ಯ ಮಾನದಂಡವೆನ್ನಿಸುತ್ತದೆ. ಪ್ರಮುಖ 8 ಮೆಟ್ರೋಗಳಲ್ಲೇ ಮನೆಗಳ 50% ಮಾರಾಟ ಆಗುತ್ತಿವೆ. 2 ಮತ್ತು 3ನೇ ಶ್ರೇಣಿ ನಗರಗಳಾದ ಜೈಪುರ, ಸೂರತ್, ಕೊಯಂಬತ್ತೂರು, ಭುವನೇಶ್ವರಗಳಲ್ಲಿ ಮೊದಲ ಬಾರಿಯ ಶೇ.40ರಷ್ಟು ಕೊಳ್ಳುಗರು ಇದ್ದಾರೆ. ಗಮನಿಸಬೇಕಾದ ಒಂದು ಅಂಶವೆಂದರೆ ಮನೆ ಖರೀದಿದಾರರ ವಯಸ್ಸು 55%ಗಿಂತಲೂ ಹೆಚ್ಚು 40 ವಯಸ್ಸಿಗೆ ಇಳಿದಿದೆ. ಇವರು 20–25 ವರ್ಷದ ದೀರ್ಘಾವಧಿ ಸಾಲ, ತೆರಿಗೆಯಲ್ಲಿ ಇನ್ನಷ್ಟು ಸ್ಪಷ್ಟತೆ, ಸಾಲ ಸುಲಭ ಲಭ್ಯತೆ ಮುಂತಾದ ನೀತಿಗಳನ್ನು ನಿರೀಕ್ಷಿಸುತ್ತಿದ್ದಾರೆ.

## ಆಧುನಿಕ, ಸುಸ್ಥಿರ ಕೃಷಿ ವಲಯಕ್ಕೆ ರೂಪುರೇಷೆ

### ಕೃಷಿ ಆಧರಿತ ಎಂಎಸ್‌ಎಂಇ ಬೆಂಬಲಕ್ಕೆ ಕ್ರಮಗಳ ನಿರೀಕ್ಷೆ

ಟೈಯರ್ 2 ಮತ್ತು ಟೈಯರ್ 3 ನಗರಗಳಲ್ಲಿ ಕೃಷಿ ಆಧರಿತ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಪ್ರೋತ್ಸಾಹ ಸಿಗಲಿದೆ ಎನ್ನುವ ನಿರೀಕ್ಷೆ ಇದೆ. ಸುಲಭದರದಲ್ಲಿ ಸಾಲ, ಸಂಶೋಧನೆ ಮತ್ತು ಅಭಿವೃದ್ಧಿಗೆ ಪ್ರೋತ್ಸಾಹ ಧನ, ಉತ್ಪಾದನೆ ಆಧರಿತ ಪ್ರೋತ್ಸಾಹಧನ ಮತ್ತು ಕೃಷಿ ತಂತ್ರಜ್ಞಾನ ಆವಿಷ್ಕಾರಗಳಿಗೆ ಬೇಗನೆ ಅನುಮೋದನೆ ನೀಡುವ ನೀತಿಯ ಅಗತ್ಯವಿದೆ. ಇದರಿಂದ ಗ್ರಾಮೀಣ ಪೂರೈಕೆ ಸರಪಳಿ ಬಲಗೊಂಡು, ಕಾರ್ಮಿಕರ ಮೇಲಿನ ಅವಲಂಬನೆಯನ್ನೂ ತಗ್ಗಿಸಿ, ಮೇಕ್ ಇನ್ ಇಂಡಿಯಾಗೆ ಇನ್ನಷ್ಟು ಪುಷ್ಠಿ ಸಿಗುತ್ತದೆ ಎನ್ನುತ್ತಾರೆ ತಜ್ಞರು.

ಈ ಬಜೆಟ್ ಆಧುನಿಕ, ಸುಸ್ಥಿರ ಮತ್ತು ಸ್ವಾವಲಂಬಿ ಕೃಷಿ ಮತ್ತು ಪೂರಕ ವ್ಯವಸ್ಥೆಗಳ ನಿರ್ಮಾಣಕ್ಕೆ ರೂಪುರೇಷೆ ನೀಡಬೇಕು ಎನ್ನುವುದು ಕೃಷಿ ತಂತ್ರಜ್ಞಾನ, ರಸಗೊಬ್ಬರ, ಡೈರಿ ವಲಯಗಳ ನಿರೀಕ್ಷೆ. ರೈತರ ಆದಾಯ ಹೆಚ್ಚಿಸಬೇಕು ಎನ್ನುವುದು ಸರ್ಕಾರದ ಉದ್ದೇಶವೂ ಆಗಿದ್ದು, ಆ ನಿಟ್ಟಿನಲ್ಲೂ ಈ ಬಜೆಟ್‌ನಲ್ಲಿ ಕ್ರಮಗಳನ್ನು ಪ್ರಕಟಿಸುವ ಸಾಧ್ಯತೆ.

**ಡ್ರೋನ್ ತಂತ್ರಜ್ಞಾನ ಬಳಕೆ:** ಕೃಷಿಯಲ್ಲಿ ಡ್ರೋನ್ ತಂತ್ರಜ್ಞಾನವನ್ನು ಬಳಸಿಕೊಳ್ಳುವುದಕ್ಕೆ ಆದ್ಯತೆ. ಇದರಿಂದ ಟಯರ್ 2 ಮತ್ತು ಟಯರ್ 3 ನಗರಗಳಲ್ಲಿ ಕೃಷಿ ಕೇಂದ್ರೀಕೃತ ಎಂಎಸ್‌ಎಂಇಗಳಿಗೆ ಪ್ರೋತ್ಸಾಹ ದೊರೆಯುತ್ತದೆ.

**ಡೈರಿ ಉತ್ಪನ್ನ ರಫ್ತು:** ಭಾರತ ಜಗತ್ತಿನಲ್ಲೇ ಅತಿ ಹೆಚ್ಚು ಹಾಲು ಉತ್ಪಾದಿಸುತ್ತಿದ್ದರೂ, ಡೈರಿ ಉತ್ಪನ್ನಗಳ ರಫ್ತಿನಲ್ಲಿ ಹಿಂದುಳಿದಿದೆ. 8 ಕೋಟಿ ಸಣ್ಣ ಹಾಲು ಉತ್ಪಾದಕರಿದ್ದಾರೆ. ಹೀಗಾಗಿ ಆಧುನಿಕ ಕೃಷಿ ತಂತ್ರಜ್ಞಾನ ಬಳಕೆ, ಹಾಲಿನ ಗುಣಮಟ್ಟ ಹೆಚ್ಚಿಸಲು ಕೋಲ್ಡ್ ಚೈನ್ ಮೂಲಸೌಕರ್ಯ ಮುಂತಾದವುಗಳಿಗೆ ಆದ್ಯತೆ ನೀಡಬೇಕು.

**ಧಾನ್ಯ, ಬೇಳೆಕಾಳುಗಳ ರಫ್ತು:** ಭಾರತ ಧಾನ್ಯ, ಬೇಳೆಕಾಳು, ಮಸಾಲೆ ಪದಾರ್ಥ ಮತ್ತು ತೋಟಗಾರಿಕೆಯಲ್ಲಿ ತನ್ನ ಸಾಮರ್ಥ್ಯಕ್ಕೆ ತಕ್ಕಷ್ಟು ರಫ್ತು ಮಾಡುತ್ತಿಲ್ಲ. ಇದಕ್ಕೆ ಮೂಲಸೌಕರ್ಯ ಮತ್ತು ಸಾಂಸ್ಥಿಕ ಬೆಂಬಲದ ಕೊರತೆ ಕಾರಣ. ಹೀಗಾಗಿ ರಫ್ತು ಆಧಾರಿತ ಕೃಷಿ ಕ್ಲಸ್ಟರ್‌ಗಳನ್ನು ಆರಂಭಿಸಬೇಕು. ಆಧುನಿಕ ಪ್ಯಾಕ್ ಹೌಸ್, ಕೋಲ್ಡ್‌ಚೈನ್ ನೆರವು ನೀಡಬೇಕು.



## ಆಭರಣ ಮತ್ತು ವಜ್ರದ ಉದ್ಯಮದ ಬೇಡಿಕೆಗಳು

1. ಆಮದು ಸುಂಕದ ಇಳಿಕೆಗೆ ಮನವಿ ಪ್ರಸ್ತುತ ಚಿನ್ನದ ಆಮದು ಸುಂಕ ಶೇ. 6 ರಷ್ಟಿದೆ. ಇದನ್ನು ಮತ್ತಷ್ಟು ಇಳಿಸಬೇಕು ಎಂಬುದು ಈ ವಲಯದ ಪ್ರಮುಖ ಬೇಡಿಕೆಯಾಗಿದೆ. ಕತ್ತರಿಸಿದ ಮತ್ತು ಪಾಲಿಶ್ ಮಾಡಿದ ವಜ್ರಗಳ ಮೇಲಿನ ಶೇ. 5 ರಷ್ಟು ಆಮದು ಸುಂಕವನ್ನು ಶೇ. 2.5 ಕ್ಕೆ ಇಳಿಸುವುದರಿಂದ ರಫ್ತು ಹೆಚ್ಚಾಗುತ್ತದೆ ಎನ್ನುವುದು ಆಶಯ.
2. ಜಿಎಸ್‌ಟಿ ದರ ಪರಿಷ್ಕರಣೆ: ಆಭರಣಗಳ ಮೇಲೆ ಪ್ರಸ್ತುತ ಇರುವ ಶೇ.3ರಷ್ಟು ಇರುವ ಜಿಎಸ್‌ಟಿ ದರವನ್ನು ಶೇ.1.25 1.ಕ್ಕೆ ಇಳಿಸಬೇಕು ಎಂಬುದು ಪ್ರಮುಖ ಬೇಡಿಕೆಯಾಗಿದೆ.
3. ವಜ್ರದ ವಲಯಕ್ಕೆ ಪ್ರೋತ್ಸಾಹ ನೀಡಬೇಕು ನೈಸರ್ಗಿಕ ವಜ್ರಗಳ ಜೊತೆಗೆ 'ಲ್ಯಾಬ್-ಗ್ರೋನ್' (ಲ್ಯಾಬ್‌ನಲ್ಲಿ ಬೆಳೆಯುವ ವಜ್ರ) ವಜ್ರಗಳು ಬೆಳೆಯುತ್ತಿರುವ ಕ್ಷೇತ್ರವಾಗಿದೆ. ಇದಕ್ಕೆ ಬೇಕಾದ ಕಚ್ಚಾ ಸಾಮಗ್ರಿಗಳು ಮತ್ತು ಉಪಕರಣಗಳ ಮೇಲಿನ ಸುಂಕ ಇಳಿಸಬೇಕು ಹಾಗೂ ಎಂಎಸ್‌ಎಂಇ ಘಟಕಗಳಿಗೆ ಸುಲಭ ಸಾಲ ಸೌಲಭ್ಯ ನೀಡಬೇಕು.
4. ಕೌಶಲ್ಯ ಅಭಿವೃದ್ಧಿ ಮತ್ತು ತಂತ್ರಜ್ಞಾನ: ಸ್ಥಳೀಯ ಆಭರಣ ತಯಾರಕರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡುವುದು ಮತ್ತು ತಂತ್ರಜ್ಞಾನದ ಅಳವಡಿಕೆಗೆ ಪ್ರೋತ್ಸಾಹ ನೀಡುವುದು ಅವಶ್ಯಕವಾಗಿದೆ.

## ಜಾಗತಿಕವಾಗಿ ಸ್ಪರ್ಧಾತ್ಮಕತೆ ಎದುರಿಸಬಲ್ಲ ನವೋದ್ಯಮ

ಇದೀಗ ಭಾರತದಲ್ಲಿ ನವೋದ್ಯಮಗಳ ಕಾಲ. ಜಾಗತಿಕ ಸ್ಪರ್ಧೆಯನ್ನು ಎದುರಿಸಬಲ್ಲ ನವೋದ್ಯಮಗಳು ಈಗ ಹುಟ್ಟಿಕೊಂಡಿವೆ. ಎಫ್‌ಎಂಸಿಜಿ, ಡಿ2ಸಿ (ನೇರವಾಗಿ ಗ್ರಾಹಕರಿಗೆ) ಆವಿಷ್ಕಾರಗಳು ಸರಕುಗಳನ್ನು ಜಾಗತಿಕ ವೇದಿಕೆಗೆ ತಲುಪಿಸುವಲ್ಲಿ ನೆರವಾಗುತ್ತಿದೆ. ಇದಕ್ಕೆ ಬೇಕಾಗಿರುವುದು:

1. **ಮಾರುಕಟ್ಟೆ ಸರಳ ಪ್ರವೇಶಾವಕಾಶ**
2. **ರಫ್ತು ಸ್ನೇಹಿ ಮೂಲಸೌಕರ್ಯ**
3. **ಅಭಿವೃದ್ಧಿ ಬಂಡವಾಳದ ಸುಲಭ ಲಭ್ಯತೆ**



ಇದರ ಜೊತೆಗೆ ಆವಿಷ್ಕಾರ, ಕೌಶಲ್ಯ, ಪೂರಕ ಪರಿಸರಗಳು ಈ ಬ್ರ್ಯಾಂಡ್‌ಗಳ ಮೇಲೆ ಹೆಚ್ಚಿನ ಹೊಣೆಗಾರಿಕೆಯನ್ನು ನೀಡುತ್ತವೆ. ಹೆಚ್ಚಿನ ಉದ್ಯೋಗಾವಕಾಶಗಳ ಸೃಷ್ಟಿಗೆ ಕಾರಣವಾಗುತ್ತದೆ.



Scanned with OKEN Scanner

**ಉತ್ಕೃಷ್ಟ ಟ್ರೈನಿಂಗ್** ತೈಲೋದ್ಯಮ ಸಿಬ್ಬಂದಿ ಜೀವ ರಕ್ಷಣೆಗೆ ವಿಶ್ವದ ದರ್ಜೆಯ ಟ್ರೇನಿಂಗ್ ಸೆಂಟರ್ | ಸಮುದ್ರದಲ್ಲಿ ಕಾಪ್ಟರ್‌ಪತನಗೊಂಡರೂ ಬದುಕಿ ಬರುವ ತರಬೇತಿ

# ಬರಡು ನೆಲದಲ್ಲಿ ಒಎನ್‌ಜಿಸಿಯಿಂದ ದೇಶದ ಬೃಹತ್ ತರಬೇತಿ ಸಾಮ್ರಾಜ್ಯ!

• **ಎಂ.ಎಲ್. ಲಕ್ಷ್ಮೀಕಾಂತ್**

**ಕನ್ನಡಪ್ರಭ ವಾರ್ತೆ** ಬೈತೂಲ್ (ಗೋವಾ)

ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರು ಪ್ರಯಾಣಿಸುತ್ತಿದ್ದ ವಿಮಾನ ಬುಧವಾರ ಬೆಳ್ಳಂಬೆಳಗ್ಗೆ ನೆಲಕ್ಕಪ್ಪಳಿಸುತ್ತಿದ್ದಂತೆ ಬೆಂಕಿ ಕಾಣಿಸಿಕೊಂಡು ಅವರು ಹತರಾಗಿದ್ದಾರೆ. ಕೂಡಲೇ ಜನರು, ರಕ್ಷಣಾ ತಂಡ ಸ್ಥಳಕ್ಕೆ ದೌಡಾಯಿಸಿವೆ. ಸುಮ್ಮನೆ ಊಹಿಸಿಕೊಳ್ಳಿ. ತೀರದಿಂದನೂರಾರು ಕಿ.ಮೀ. ದೂರದಲ್ಲಿರುವ ತೈಲ ಬಾವಿಗಳಲ್ಲಿ ದುಡಿಯಲು ನಿತ್ಯ ಹೆಲಿಕಾಪ್ಟರ್‌ಗಳಲ್ಲಿ ಪ್ರಯಾಣಿಸುವ ತೈಲ ಕಂಪನಿಗಳ ಸಿಬ್ಬಂದಿಯ ಕಾಪ್ಟರ್ ಕೂಡ ಪವಾರ್ ವಿಮಾನದ ರೀತಿಯಲ್ಲಿ ಸಮುದ್ರ ಮಧ್ಯೆ ಪತನಗೊಂಡರೆ?!

ಅಲ್ಲಿ ರಕ್ಷಣೆಗೆ ಯಾರೂ ಇರುವುದಿಲ್ಲ. ಆದರೂ ಅವರು ಹೊರಗೆ ಬರುತ್ತಾರೆ! ಅದು ಹೇಗೆ ಎಂಬ ಪ್ರಶ್ನೆಗೆ ದೇಶದ ಅತಿದೊಡ್ಡ ಸರ್ಕಾರಿ ಸ್ವಾಮ್ಯದ ತೈಲ ಮತ್ತು ನೈಸರ್ಗಿಕ ಅನಿಲ ಕಂಪನಿಯಾಗಿರುವ ಒಎನ್‌ಜಿಸಿ ನೀಡುವ ತರಬೇತಿ.

ನಾಲ್ಕನೇ ಆವೃತ್ತಿಯ 'ಇಂಡಿಯಾ ಎನರ್ಜಿ ವೀಕ್ (ಭಾರತ ಇಂಧನ ಸಪ್ತಾಹ)- 2026'



ದಕ್ಷಿಣ ಗೋವಾದ ಬೇತೂಲ್‌ನಲ್ಲಿರುವ ಒಎನ್‌ಜಿಸಿಗೆ ಸೇರಿದ ದೇಶದ ಅತಿದೊಡ್ಡ ಹಾಗೂ ವಿಶ್ವದರ್ಜೆಯ ಅಡ್ವಾನ್ಸ್ಡ್ ಟ್ರೇನಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ ಆಯೋಜನೆಗೊಂಡಿದೆ. ಅದರಲ್ಲಿ ಭಾಗಿಯಾಗಿರುವ ದೇಶದ ವಿವಿಧ ರಾಜ್ಯಗಳ ಮಾಧ್ಯಮ ಪ್ರತಿನಿಧಿಗಳಿಗೆ ಅಲ್ಲಿರುವ ತರಬೇತಿಯ ಪ್ರಾತ್ಯಕ್ಷಿಕೆಯನ್ನು ಬುಧವಾರ ಒಎನ್‌ಜಿಸಿ ಸಿಬ್ಬಂದಿ ಪ್ರಸ್ತುತಪಡಿಸಿದರು.

ಬೇತೂಲ್‌ನಲ್ಲಿ 250 ಎಕರೆ ಬರಡು ನೆಲದಲ್ಲಿ ಒಎನ್‌ಜಿಸಿಯ ತರಬೇತಿ ಕೇಂದ್ರಗಳು, ಸಮ್ಮೇಳನ ಸಭಾಂಗಣಗಳು ಹಾಗೂ ಪ್ರದರ್ಶನ ಕೇಂದ್ರಗಳ ಸಾಮ್ರಾಜ್ಯವೇ ಸೃಷ್ಟಿಯಾಗಿದೆ. ತೈಲ ಬಾವಿಗಳಿಂದ ತೈಲ- ಅನಿಲ ನಿಯಂತ್ರಣ ಮೀರಿದ ಒತ್ತಡದಿಂದ ರಭಸವಾಗಿ ಹೊರಗೆ ಬಂದರೆ ಅದನ್ನು ಹತ್ತಿಕ್ಕುವುದು ಹೇಗೆ? ತೈಲ ಟ್ಯಾಂಕರ್‌ಗಳಲ್ಲಿ ದಿಢೀರ್ ಬೆಂಕಿ ಕಾಣಿಸಿಕೊಂಡಾಗ ನಂದಿಸುವುದು ಹೇಗೆ? ಸಿಬ್ಬಂದಿ ಯಾವ ರೀತಿ ಸಮನ್ವಯತೆಯಿಂದ ಕೆಲಸ ಮಾಡಬೇಕು? ಕಾರ್ಯಾಚರಣೆ ಮುಗಿದ ಬಳಿಕ ತಲೆ ಎಣಿಕೆ ಮಾಡಿ ಎಲ್ಲರೂ ಇದ್ದಾರಾ ಎಂಬುದನ್ನು ಯಾವ ರೀತಿ ಖಚಿತಪಡಿಸಿಕೊಳ್ಳಬೇಕು ಎಂಬುದೂ ಸೇರಿ ಮೈನವಿರೇಳಿಸುವ ಸಾಹಸ ಹೊಂದಿದ್ದ ಪ್ರಾತ್ಯಕ್ಷಿಕೆಯನ್ನು ಎತ್ತರದ ಗೋಪುರದಲ್ಲಿ ಪತ್ರಕರ್ತರನ್ನು ಕೂರಿಸಿ ಒಎನ್‌ಜಿಸಿ ಪ್ರಸ್ತುತಪಡಿಸಿತು.

**ಕಾಪ್ಟರ್ ಮುಳುಗಿದರೂ ಹೊರಬಂದರು:** ಸಮುದ್ರದಲ್ಲಿ ಕಾಪ್ಟರ್ ಪತನ ಹೊಂದಿದಾಗ ಅದರ ಒಳಗೆ ಇರುವವರು ಯಾವ ರೀತಿ ಪಾರಾಗಿ ಹೊರಬರಬೇಕು ಎಂಬ ತರಬೇತಿಗಾಗಿಯೇ ಸಮುದ್ರ ರಕ್ಷಣಾ ಕೇಂದ್ರ ಎಂಬ ಘಟಕವಿದೆ. ಪ್ರಧಾನಿ ನರೇಂದ್ರ ಮೋದಿ ಅವರಿಂದ 2024ರಲ್ಲಿ ಉದ್ಘಾಟನೆಯಾದ ಘಟಕವಿದು. ಈ ಕೇಂದ್ರದಲ್ಲಿ ತರಬೇತಿ ಪಡೆಯುವವರಿಗೆ ಮುಖ್ಯವಾಗಿ ಕಾಪ್ಟರ್ ಪತನವಾದಾಗ ಎದೆಗುಂದದೆ, ಬದುಕಲು ಏನು ಮಾಡಬೇಕು ಎಂಬುದನ್ನು ತರಬೇತಿ ನೀಡಲಾಗುತ್ತದೆ. ಜೀವ ರಕ್ಷಕ ಜಾಕೆಟ್‌ಗಳನ್ನು ಧರಿಸಿ, ತುರ್ತು ನಿರ್ಗಮನ ದ್ವಾರದ ಮೂಲಕ ಯಾವ ರೀತಿ ಹೊರಗೆ ಬರಬೇಕು, ಬಂದ ಮೇಲೆ ಯಾವ ರೀತಿ ಒಬ್ಬರ ಕೈಯನ್ನು ಒಬ್ಬರು ಹಿಡಿದು ಜೀವ ಉಳಿಸಿಕೊಳ್ಳಬೇಕು ಎಂಬುದನ್ನು ಕಲಿಸಿಕೊಡಲಾಗುತ್ತದೆ. ಕಾಪ್ಟರ್ ಪತನಗೊಂಡ ಬಳಿಕ ರಕ್ಷಣಾ ತಂಡಗಳು ಆಗಮಿಸುವವರೆಗೂ ಬದುಕುಳಿಯುವ ಕಲೆಯನ್ನು ಇಲ್ಲಿ ಹೇಳಿಕೊಡಲಾಗುತ್ತದೆ.

ಸಾಗರ, ಕತ್ತಲು, ಹೆಲಿಕಾಪ್ಟರ್‌ಶಬ್ದ ರೀತಿಯ ಕೃತಕ ವಾತಾವರಣ ನಿರ್ಮಿಸಿ ಕ್ರೇನ್‌ನಿಂದ ಕಾಪ್ಟರ್ ಪ್ರತಿಕೃತಿ ಬೀಳಿಸಿ, ಅದು ಮುಳುಗಿದ ಬಳಿಕ ಸಿಬ್ಬಂದಿ ಯಾವ ರೀತಿ ಬರುತ್ತಾರೆ ಎಂಬುದನ್ನು ಮಾಧ್ಯಮಗಳಿಗೆ ಪ್ರದರ್ಶಿಸಲಾಯಿತು. ಈ ಪ್ರಾತ್ಯಕ್ಷಿಕೆ ನೀಡಿದ ನಾಲ್ಕೂ ಮಂದಿ ಯುವತಿಯರು.

## ತೈಲ ಸಪ್ತಾಹಕ್ಕೆ ಇನ್ನು ಗೋವಾ ಕಾಯಂ ಸ್ಥಳ

**ಬೈತೂಲ್:** ಇಂಡಿಯಾ ಎನರ್ಜಿ ವೀಕ್ ಎಂಬ ಭಾರತೀಯ ಇಂಧನ ಕ್ಷೇತ್ರದ ದೊಡ್ಡ ಜಾಗತಿಕ ಕಾರ್ಯಕ್ರಮ ಶುರುವಾ ಗಿದ್ದು ಬೆಂಗಳೂರಿನಲ್ಲಿ. 2023ರ ಫೆಬ್ರವರಿ 6ರಿಂದ 8ರವರೆಗೆ ಆಯೋಜನೆಗೊಂಡಿತ್ತು. ಅದು ಮತ್ತೆ ಬೆಂಗಳೂರಿಗೆ ಬರುವುದಿಲ್ಲ. ಏಕೆಂದರೆ, ಪ್ರವಾಸಿ ತಾಣ ಗೋವಾವನ್ನು ಕಾಯಂ ನೆಲೆ ಮಾಡಿಕೊಂಡಿದೆ. ಇದಕ್ಕಾಗಿ ಒಎನ್‌ಜಿಸಿ ಈಗಾಗಲೇ 4000 ಆಸನ ಸಾಮರ್ಥ್ಯದ ಪೃಥ್ವಿ ಎಂಬ ವಿಶಾಲ, ಅತ್ಯಾಧುನಿಕ ಸಮ್ಮೇಳನ ಸಭಾಂಗಣವನ್ನು ಕೇವಲ 13 ತಿಂಗಳಲ್ಲಿ ಕಟ್ಟಿ ನಿಲ್ಲಿಸಿದೆ. ಸಂಚಾರ ದಟ್ಟಣೆ ನಿವಾರಣೆಗಾಗಿ ರಸ್ತೆ, ಹೆಲಿಪ್ಯಾಡ್ ನಿರ್ಮಿಸಿದೆ. ಸ್ಪೀಡ್ ಬೋಟ್‌ಗಳಲ್ಲಿ ಅತಿಥಿಗಳನ್ನು ಕರೆತರಲು ಜೆಟ್ಟಿಯನ್ನು ಕೂಡ ನಿರ್ಮಾಣ ಮಾಡಿದೆ. ಈ ಜೆಟ್ಟಿಯನ್ನು ಪೆಟ್ರೋಲಿಯಂ ಸಚಿವ ಹರದೀಪ್ ಸಿಂಗ್ ಪುರಿ ಮಂಗಳವಾರ ಸಂಜೆ ಉದ್ಘಾಟಿಸಿದ್ದಾರೆ.

## 3 ತಿಂಗಳಲ್ಲಿ ಬೆಂಗಳೂರಿಗೆ ಕೊಚ್ಚಿ ಅನಿಲ

**ಬೇತೂಲ್:** ಸಾಕಷ್ಟು ತಡವಾಗಿರುವ ಕೊಚ್ಚಿ- ಬೆಂಗಳೂರು ಅನಿಲ ಕೊಳವೆ ಮಾರ್ಗ ಕಾಮಗಾರಿ ಮುಂದಿನ 2- 3 ತಿಂಗಳಲ್ಲಿ ಮುಕ್ತಾಯವಾಗಲಿದೆ. ಕೊಚ್ಚಿಯಿಂದ ಅನಿಲ ನೇರವಾಗಿ ಬೆಂಗಳೂರಿಗೆ ಸರಬರಾಜಾಗಲಿದೆ ಎಂದು ಪೆಟ್ರೋನೆಟ್‌ನ ಅಕ್ಷಯ್ ಕುಮಾರ್ ಸಿಂಗ್ ತಿಳಿಸಿದರು. ಕೊಚ್ಚಿಯಲ್ಲಿ ಪೆಟ್ರೋನೆಟ್ ಕಂಪನಿ 5 ದಶಲಕ್ಷ ಟನ್ ಸಾಮರ್ಥ್ಯದ ಎಲ್‌ಎನ್‌ಜಿ ಘಟಕ ಹೊಂದಿದ್ದರೂ ಬೆಂಗಳೂರು ಪೈಪ್‌ಲೈನ್ ಕಾಮಗಾರಿ ಮುಗಿಯದ ಕಾರಣ 1.2 ದಶಲಕ್ಷ ಟನ್ ಸಾಮರ್ಥ್ಯವನ್ನು ಮಾತ್ರ ಬಳಸಿಕೊಳ್ಳಲಾಗುತ್ತಿದೆ. ಕಾಮಗಾರಿ ಮುಗಿದರೆ ಕೊಚ್ಚಿಯಿಂದ ನೇರವಾಗಿ ನೈಸರ್ಗಿಕ ಅನಿಲವನ್ನು ಸರಬರಾಜು ಮಾಡಬಹುದಾಗಿದೆ. ಬೆಂಗಳೂರಿಗೆ ಸಂಪರ್ಕ ಸಿಕ್ಕರೆ ಈ ನೈಸರ್ಗಿಕ ಅನಿಲ ಮಾರ್ಗ ರಾಷ್ಟ್ರೀಯ ಗ್ಯಾಸ್ ಗ್ರಿಡ್‌ಗೆ ಸೇರ್ಪಡೆಯಾಗಲಿದೆ ಎಂದು ವಿವರಿಸಿದರು.

## ಎಂ.ಕೆ.ಹುಬ್ಬಳ್ಳಿ ಘಟಕ ಕೆಲಸ ಶೀಘ್ರ ಪೂರ್ಣ

**ಬೇತೂಲ್:** ಪೆಟ್ರೋಲ್, ಡೀಸೆಲ್‌ಗೆ ಪರ್ಯಾಯವಾಗಿರುವ, ಕಡಿಮೆ ಇಂಗಾಲವನ್ನು ಹೊರಸೂಸುವ ನೈಸರ್ಗಿಕ ಅನಿಲ ಎಲ್‌ಎನ್‌ಜಿ (ಲಿಕ್ವಿಫೈಡ್ ನ್ಯಾಚುರಲ್ ಗ್ಯಾಸ್) ಅನ್ನು ಟ್ರಕ್‌ನಂತಹ ದೊಡ್ಡ ವಾಹನಗಳಿಗೆ ತುಂಬುವ ಕೇಂದ್ರ ಬೆಳಗಾವಿ ಜಿಲ್ಲೆಯ ಎಂ.ಕೆ.ಹುಬ್ಬಳ್ಳಿಯಲ್ಲಿ ಶೀಘ್ರದಲ್ಲಿ ಕಾರ್ಯಾರಂಭ ಮಾಡಲಿದೆ.

ಸರ್ಕಾರಿ ಸ್ವಾಮ್ಯದ ಅನಿಲ ಕಂಪನಿ ಪೆಟ್ರೋನೆಟ್ ಇದರ ಕಾಮಗಾರಿಯನ್ನು ಮುಗಿಸಿದೆ. ಇನ್ನು ಕೆಲವೇ ತಿಂಗಳಲ್ಲಿ ಸೇವೆ ಆರಂಭವಾಗಲಿದೆ ಎಂದು ಕಂಪನಿಯ ಎಂಡಿ ಹಾಗೂ ಸಿಇಒ ಎ.ಕೆ. ಮಿಶ್ರಾ ಅವರು ತಿಳಿಸಿದ್ದಾರೆ.

Scanned with OKEN Scanner

# ಎಂಎಸ್ಎಂಇ ಇಂಗಾಲ ಮುಕ್ತಗೊಳಿಸಲು ನೀತಿ ಆಯೋಗ ಕರೆ; ಹಸಿರು ಪರಿವರ್ತನೆಗೆ ಸರಕಾರ ಕೈಗೊಂಡ ಕ್ರಮಗಳೇನು?

**ರಶ್ಮಿ ಕಾಸರಗೋಡು**

ಶ್ರೀಮಂತ ಪಾಶ್ಚಿಮಾತ್ಯ ದೇಶಗಳು ಪರಿಸರ ಸ್ನೇಹಿ ಅಲ್ಲದ ವಸ್ತುಗಳಿಗೆ ಹೆಚ್ಚಿನ ಸುಂಕ ವಿಧಿಸುವುದು ಅಥವಾ ಅವುಗಳ ಆಮದುಗಳನ್ನು ರದ್ದುಪಡಿಸುವುದು ಹೆಚ್ಚಾಗಿದೆ. ಹೀಗಿರುವಾಗ, ರಫ್ತುದಾರರು ಹಸಿರು ಉತ್ಪನ್ನ ಅವಶ್ಯಕತೆಗಳನ್ನು ಪೂರೈಸಲು ನೆರವಾಗುವ ಉದ್ದೇಶದಿಂದ, ಭಾರತದ ವಿಶಾಲವಾದ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ (ಎಂಎಸ್ಎಂಇ) ವಲಯವನ್ನು ಇಂಗಾಲರಹಿತಗೊಳಿಸಲು ಹೊಸ ಕಾರ್ಯವಿಧಾನಕ್ಕೆ ನೀತಿ ಆಯೋಗ ಕರೆ ನೀಡಿದೆ.

ಜ. 22ರ ವರದಿಯಲ್ಲಿ, ಸರಕಾರದ ಚಿಂತಕರ ಚಾವಡಿ ರಾಷ್ಟ್ರೀಯ ಯೋಜನಾ ನಿರ್ವಹಣಾ ಸಂಸ್ಥೆ (NPMA) ಸ್ಥಾಪನೆ, ಕಾರ್ಯಸಾಧ್ಯತಾ ಅಂತರ ನಿಧಿ (VGF) ಒದಗುವಿಕೆ, ಎಂಎಸ್ಎಂಇಗಳಿಗೆ ಮೇಲ್ಛಾವಣಿ ಸೌರ ಯೋಜನೆ ರೂಪಣೆ ಮತ್ತು ಸ್ವಚ್ಛ ಉತ್ಪಾದನಾ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಕ್ಲಸ್ಟರ್‌ಗಳನ್ನು ಗುರುತಿಸುವುದನ್ನು ಪ್ರಸ್ತಾಪಿಸಿದೆ. ಭಾರತದ ರಫ್ತಿನಲ್ಲಿ ಶೇ. 45, ಆರ್ಥಿಕ ಉತ್ಪಾದನೆಯಲ್ಲಿ ಶೇ. 30 ಕೊಡುಗೆ ನೀಡುವ ಮತ್ತು ಸುಮಾರು 330 ಮಿಲಿಯನ್ ಜನರಿಗೆ ಉದ್ಯೋಗ ನೀಡುವ ಈ ವಲಯಕ್ಕೆ ಈ ಪ್ರಯತ್ನ ನಿರ್ಣಾಯಕವಾಗಿದೆ.

### ಎಂಎಸ್ಎಂಇ ಕಾರ್ಯಾಚರಣೆಗಳನ್ನು ಇಂಗಾಲ ಮುಕ್ತಗೊಳಿಸುವ ಅಗತ್ಯ ಏಕೆ?

ಭಾರತದ ರಫ್ತು ಮಾರುಕಟ್ಟೆಗಳಲ್ಲಿ ಸ್ವಚ್ಛ ಉತ್ಪಾದನಾ ಪದ್ಧತಿಗಳಿಗೆ ಸಂಬಂಧಿಸಿದ ಕಟ್ಟುನಿಟ್ಟಾದ ವ್ಯಾಪಾರ ಅಡೆತಡೆಗಳು ಆರಂಭವಾಗುತ್ತಿರುವುದರಿಂದ, ರಫ್ತುಗಳಲ್ಲಿ ಸ್ಪರ್ಧಾತ್ಮಕವಾಗಿ ಉಳಿಯಲು ಎಂಎಸ್ಎಂಇಗಳು ತಮ್ಮ ಕಾರ್ಯಾಚರಣೆಗಳನ್ನು ಇಂಗಾಲ ಮುಕ್ತಗೊಳಿಸುವ ಅಗತ್ಯವಿದೆ. ಉದಾಹರಣೆಗೆ, ಯುರೋಪಿಯನ್ ಒಕ್ಕೂಟಕ್ಕೆ ಕಡಿಮೆ ಸುಸ್ಥಿರ ಆಮದುಗಳನ್ನು ತಡೆಯುವ ಕಾರ್ಯವಿಧಾನವಾದ ಯುರೋಪಿಯನ್ ಒಕ್ಕೂಟದ ಕಾರ್ಬನ್ ಬಾರ್ಡರ್ ಅಡ್ಜಸ್ಟ್‌ಮೆಂಟ್ ಮೆಕ್ಯಾನಿಸಂ (CBAM) ಜನವರಿ 1ರಿಂದ ತನ್ನ ನಿರ್ಣಾಯಕ ಹಂತವನ್ನು ಪ್ರಾರಂಭಿಸಿದೆ.

''ಅಭಿವೃದ್ಧಿ ಹೊಂದಿದ ದೇಶಗಳು ಮತ್ತು ಪ್ರದೇಶಗಳ, ವಿಶೇಷವಾಗಿ ಯುರೋಪ್ ಮತ್ತು ಅಮೆರಿಕಾದ ಹಸಿರು 'ಮಟ್ಟದ' ಉತ್ಪನ್ನ ಅಗತ್ಯಗಳನ್ನು ಪೂರೈಸಲು ಎಂಎಸ್ಎಂಇಗಳ ಪ್ರಕ್ರಿಯೆಗಳನ್ನು (ಉತ್ಪಾದನೆ ಇತ್ಯಾದಿ) ಇಂಗಾಲ ಮುಕ್ತಗೊಳಿಸುವುದು ಅನಿವಾರ್ಯ'' ಎಂದು ವರದಿ ಹೇಳಿದೆ.

ವರದಿಯ ಪ್ರಕಾರ, ನೀತಿ ಆಯೋಗವು ಈ ಉದ್ಯಮಗಳಿಗೆ ಅಗ್ಗದ ಸಾಲಗಳು ಮತ್ತು ತಾಂತ್ರಿಕ ತರಬೇತಿಯಂತಹ ವಿಶೇಷ ಆರ್ಥಿಕ ಸಹಾಯವನ್ನು ಒದಗಿಸುವ ಮೂಲಕ 'ಸೇತುವೆ'ಯಾಗಿ ಕಾರ್ಯನಿರ್ವಹಿಸಲು ಉದ್ದೇಶಿಸಿದೆ. ಇದರಿಂದ ಸಣ್ಣ ಕಾರ್ಖಾನೆಗಳೂ ಹೊಸ ಅಂತರ್‌ರಾಷ್ಟ್ರೀಯ 'ಹಸಿರು' ಮಾನದಂಡಗಳನ್ನು ಪೂರೈಸಬಹುದಾಗಿದೆ. ಪರಿಣಾಮವಾಗಿ, ಅವುಗಳ ಯುರೋಪ್ ಅಥವಾ ಅಮೆರಿಕಕ್ಕೆ ರಫ್ತು ನಿರ್ಬಂಧಿತವಾಗುವುದಿಲ್ಲ.

ವರದಿಯು ಐದು ಪ್ರಮುಖ ಉಪವಲಯಗಳನ್ನು ಗುರುತಿಸಿದೆ. ಅವುಗಳೆಂದರೆ ಜವಳಿ, ಕಾಗದ, ಉಕ್ಕಿನ ಮರು-ರೋಲಿಂಗ್, ಫೌಂಡ್ರಿ ಮತ್ತು ಫೋರ್ಜಿಂಗ್. ಇವು ಇಂಧನ-ಸಮರ್ಥ ಉತ್ಪಾದನೆಯನ್ನು ಸುಧಾರಿಸುವಲ್ಲಿ ಗಮನಾರ್ಹ ಕೊಡುಗೆ ನೀಡಬಲ್ಲವು. ಈ ವಲಯಗಳಲ್ಲಿನ ಕೆಲವು ಎಂಎಸ್ಎಂಇ ಕ್ಲಸ್ಟರ್‌ಗಳು ಹೆಚ್ಚಿನ ವಿದ್ಯುತ್ ಬೇಡಿಕೆಯನ್ನು ಹೊಂದಿದ್ದು, ಹಸಿರು ವಿದ್ಯುತ್ ಮಾರ್ಗಸೂಚಿಗಾಗಿ ಅವುಗಳನ್ನು ಗುರುತಿಸಲಾಗಿದೆ.

### ಸರಕಾರ ಯಾವ ಪರಿಹಾರವನ್ನು ಪ್ರಸ್ತಾಪಿಸಿದೆ?

ಆರಂಭಿಕವಾಗಿ, ಸರಕಾರದ ಚಿಂತಕರ ಚಾವಡಿ ಮತ್ತು ಎಂಎಸ್ಎಂಇ ಸಚಿವಾಲಯವು NPMA ರಚನೆಗೆ ಕರೆ ನೀಡಿದ್ದು, ಈ ಸಂಸ್ಥೆಗೆ ಹೆಚ್ಚಿನ ಅಧಿಕಾರ ನೀಡಲು ಶಿಫಾರಸು ಮಾಡಿದೆ. ಇಂಧನ-ಸಮರ್ಥ ಯಂತ್ರೋಪಕರಣಗಳು, ಹಸಿರು ವಿದ್ಯುತ್ ಉತ್ಪಾದನೆ ಮತ್ತು ಪರ್ಯಾಯ ಇಂಧನಗಳಿಗೆ ಬೇಡಿಕೆಯನ್ನು ಒಟ್ಟುಗೂಡಿಸಲು ಎಂಎಸ್ಎಂಇ ಕ್ಲಸ್ಟರ್‌ಗಳು ಹಾಗೂ ಕೈಗಾರಿಕಾ ಸಂಘಗಳೊಂದಿಗೆ ಕೆಲಸ ಮಾಡುವ ಮೂಲಕ NPMA ಡಿಕಾರ್ಬೊನೈಸೇಶನ್ ಯೋಜನೆಯನ್ನು ಜಾರಿಗೆ ತರಲಿದೆ.



ಎಂಎಸ್ಎಂಇ ಕ್ಲಸ್ಟರ್‌ಗಳಲ್ಲಿ ಹಳೆಯ ಯಂತ್ರೋಪಕರಣಗಳನ್ನು ಹೆಚ್ಚು ಇಂಧನ-ಸಮರ್ಥ ಯಂತ್ರೋಪಕರಣಗಳೊಂದಿಗೆ ಬದಲಾಯಿಸಲು, NPMA ಬೇಡಿಕೆಯನ್ನು ಒಟ್ಟುಗೂಡಿಸಿದ ಬಳಿಕ ಅನುಷ್ಠಾನ ಏಜೆನ್ಸಿಗಳಾದ ಇಂಧನ ಸೇವಾ ಕಂಪೆನಿಗಳು (ESCOs) ಗುರುತಿಸಲಾಗುತ್ತದೆ. ಈ ಹೊಸ ಯಂತ್ರೋಪಕರಣಗಳ ಮುಂಗಡ ವೆಚ್ಚವನ್ನು ಇಂಧನ ಸೇವಾ ಕಂಪೆನಿಗಳೇ ಭರಿಸುತ್ತವೆ. ಎಂಎಸ್ಎಂಇಗಳು ಕಾರ್ಯಾಚರಣಾ ವೆಚ್ಚದಲ್ಲಿ ಉಂಟಾಗುವ ಉಳಿತಾಯದಿಂದ ಈ ಕಂಪೆನಿಗಳಿಗೆ ಮರುಪಾವತಿ ಮಾಡಬಹುದು ಎಂದು ಯೋಜನೆ ವಿವರಿಸುತ್ತದೆ.

ಈ ಯೋಜನೆಯಡಿ ಇಂಧನ-ಸಮರ್ಥ ತಂತ್ರಜ್ಞಾನಗಳ ತಯಾರಕರಿಗೆ 6,000 ಕೋಟಿ ರೂ. ಕಾರ್ಯಸಾಧ್ಯತಾ ಅಂತರ ನಿಧಿಯನ್ನು ಪ್ರಸ್ತಾಪಿಸಲಾಗಿದೆ. ಎಂಎಸ್ಎಂಇ ಸಚಿವಾಲಯವು ಇಂಧನ ದಕ್ಷತೆಯ ಬ್ಯೂರೋ (ಬಿಇಇ) ಜೊತೆಗೆ ವ್ಯವಹಾರಗಳಿಗೆ ಶೇ. 20ಕ್ಕಿಂತ ಹೆಚ್ಚು ಉಳಿತಾಯ ಒದಗಿಸಬಲ್ಲ 67 ತಂತ್ರಜ್ಞಾನಗಳನ್ನು ಗುರುತಿಸಲಿದೆ. ಈ ತಂತ್ರಜ್ಞಾನಗಳ ತಯಾರಕರು VGF ಬೆಂಬಲಕ್ಕೆ ಅರ್ಹರಾಗುತ್ತಾರೆ.

ಹಸಿರು ವಿದ್ಯುತ್ ಉತ್ಪಾದನೆಗಾಗಿ, ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದ ಪಿಎಂ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆಯ ಮಾದರಿಯಲ್ಲಿ, 3 ಕಿಲೋವ್ಯಾಟ್‌ವರೆಗಿನ ಎಂಎಸ್ಎಂಇಗಳಿಗೆ ಮೇಲ್ಛಾವಣಿ ಸೌರಶಕ್ತಿ ಅಳವಡಿಕೆಗೆ 7,000 ಕೋಟಿ ರೂ. ಯೋಜನೆಯನ್ನು ಪ್ರಸ್ತಾಪಿಸಲಾಗಿದೆ.

ಈ ಯೋಜನೆಯಡಿಯಲ್ಲಿ ಮೇಲ್ಛಾವಣಿ ಸೌರ ಘಟಕಗಳ ಸ್ಥಾಪನೆಗೆ ಸಬ್ಸಿಡಿ ಹಾಗೂ ಕಡಿಮೆ ಬಡ್ಡಿದರದ, ಮೇಲಾಧಾರ-ಮುಕ್ತ ಸಾಲಗಳನ್ನು ಒದಗಿಸಲಾಗುತ್ತದೆ. ಜನವರಿ 22ರ ವರದಿಯ ಪ್ರಕಾರ, ಎಂಎಸ್ಎಂಇಗಳಿಗಾಗಿ ಪ್ರಸ್ತಾವಿತ ಈ ಮೇಲ್ಛಾವಣಿ ಸೌರ ಯೋಜನೆ ಐದು ವರ್ಷಗಳವರೆಗೆ ನಡೆಯಲಿದೆ ಮತ್ತು 11.5 ಮಿಲಿಯನ್ ಉದ್ಯಮಗಳನ್ನು ಗುರಿಯಾಗಿಟ್ಟುಕೊಂಡಿದೆ. ಜೊತೆಗೆ, ನವೀಕರಿಸಬಹುದಾದ ಇಂಧನ ಸೇವಾ ಕಂಪೆನಿಗಳು (RESCOಗಳು) ಎಂಎಸ್ಎಂಇಗಳಲ್ಲಿ ಸೌರಶಕ್ತಿ ಸೌಲಭ್ಯಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸಲಾಗುತ್ತದೆ. ಇದರಿಂದ ಸಣ್ಣ ಉದ್ಯಮಗಳ ಮುಂಗಡ ವೆಚ್ಚ ಕಡಿಮೆಯಾಗುತ್ತದೆ ಹಾಗೂ ಕೈಗೆಟುಕುವ ಹಸಿರು ವಿದ್ಯುತ್ ಲಭ್ಯವಾಗುತ್ತದೆ.

ಎಂಎಸ್ಎಂಇ ಸಚಿವಾಲಯವು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ನಿಯಂತ್ರಣ ಮಂಡಳಿ (PNGRB) ಜೊತೆಗೂಡಿ, ಕಲ್ಲಿದ್ದಲು, ಪೆಟ್ ಕೋಕ್, ಫರ್ನೇಸ್ ಆಯಿಲ್ ಮೊದಲಾದ ಇಂಧನಗಳ ಬದಲಿಗೆ ಎಂಎಸ್ಎಂಇ ಕ್ಲಸ್ಟರ್‌ಗಳಲ್ಲಿ ನೈಸರ್ಗಿಕ ಅನಿಲ ಬಳಕೆಯನ್ನು ಉತ್ತೇಜಿಸಲಿದೆ. ಇದರಿಂದ ಹಸಿರುಮನೆ ಅನಿಲ ಹೊರಸೂಸುವಿಕೆಗೆ ಕಾರಣವಾಗುತ್ತದೆ.

### ಎಂಎಸ್ಎಂಇ ವಲಯದ ಹಸಿರು ಪರಿವರ್ತನೆಗೆ ಸರಕಾರ ಕೈಗೊಂಡಿರುವ ಕ್ರಮಗಳೇನು?

ದೇಶದ ಎಂಎಸ್ಎಂಇಗಳಿಗೆ ಹಸಿರು ಕಾರ್ಯಾಚರಣೆಗಳಲ್ಲಿ ನೆರವಾಗಲು ಸರಕಾರ ಈಗಾಗಲೇ ಹಲವು ಕ್ರಮಗಳನ್ನು ಕೈಗೊಂಡಿದೆ. ಎಂಎಸ್ಎಂಇ ಸಚಿವಾಲಯದ ಹಸಿರು ಪೋರ್ಟಲ್ ಅಡಿಯಲ್ಲಿ ಜಾರಿಯಲ್ಲಿರುವ ಎರಡು ಪ್ರಮುಖ ಯೋಜನೆಗಳು

1. MSME-GIFT (Green Investment and Financing for Transformation)
2. MSME-SPICE (Scheme for Promotion and Investment in Circular Economy)

ಈ ಎರಡು ಯೋಜನೆಗಳನ್ನು ಡಿಸೆಂಬರ್ 2023ರಲ್ಲಿ ಆರಂಭಿಸಲಾಗಿದ್ದು, ಒಟ್ಟು ವೆಚ್ಚ 950 ಕೋಟಿ ರೂಪಾಯಿ. GIFT ಯೋಜನೆ ಮಾರ್ಚ್ 2026ರಲ್ಲಿ ಕೊನೆಗೊಳ್ಳಲಿದ್ದು, SPICE ಯೋಜನೆ ಮಾರ್ಚ್ 2027ರವರೆಗೆ ಜಾರಿಯಲ್ಲಿರುತ್ತದೆ.

478 ಕೋಟಿ ವೆಚ್ಚದ GIFT ಯೋಜನೆಯಡಿಯಲ್ಲಿ ಅತಿ ಸಣ್ಣ ಮತ್ತು ಸಣ್ಣ ಉದ್ಯಮಗಳಿಗೆ ಬಡ್ಡಿದರ ಇಳಿಕೆ ಹಾಗೂ ಸುಲಭ ಬ್ಯಾಂಕ್ ಸಾಲ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. SPICE ಯೋಜನೆಯಡಿಯಲ್ಲಿ, ಅಸ್ತಿತ್ವದಲ್ಲಿರುವ ಸಣ್ಣ ಕಾರ್ಖಾನೆಗಳು ತಮ್ಮ ತ್ಯಾಜ್ಯವನ್ನು ಎಸೆಯುವ ಬದಲು ಮರುಬಳಕೆ ಮಾಡಲು ಮುಂದಾದರೆ, ಯಂತ್ರೋಪಕರಣಗಳ ಮೇಲೆ ಶೇ. 25 ಸಬ್ಸಿಡಿ ನೀಡಲಾಗುತ್ತದೆ.

### ಈ ನಿರ್ಧಾರ ಎಂಎಸ್ಎಂಇಗಳ ಮೇಲೆ ಹೇಗೆ ಪರಿಣಾಮ ಬೀರುತ್ತದೆ?

ತಜ್ಞರ ಪ್ರಕಾರ, ನಗದು ಕೊರತೆಯಲ್ಲಿರುವ ಎಂಎಸ್ಎಂಇಗಳಿಗೆ ಸ್ವಚ್ಛ ಉತ್ಪಾದನಾ ಪದ್ಧತಿಗಳಿಗೆ ಹೊಂದಿಕೊಳ್ಳುವುದು ದುಬಾರಿ. ಭಾರತೀಯ ಎಂಎಸ್ಎಂಇಗಳು ಆಮದು ದೇಶಗಳು ವಿಧಿಸುವ ಇಂಗಾಲ ತೆರಿಗೆಯ ಭಾರವನ್ನು ಭರಿಸಬೇಕಾಗುತ್ತದೆ ಮತ್ತು ರಫ್ತಿಗೆ ಅರ್ಹರಾಗಲು ಇಂಗಾಲ ಹೊರಸೂಸುವಿಕೆಯನ್ನು ಕಡಿತಗೊಳಿಸಬೇಕಾಗುತ್ತದೆ. ಭಾರತದ ಉತ್ಪಾದನಾ ವಲಯದ ಎಂಎಸ್ಎಂಇಗಳು ಕಡಿಮೆ ಕಾರ್ಯನಿರತ ಬಂಡವಾಳದ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಇದರಿಂದ ಇಂಧನ ಪರಿವರ್ತನೆ ದೊಡ್ಡ ಸವಾಲಾಗುತ್ತದೆ ಎಂದು ಗೋಖಲೆ ಇನ್‌ಸ್ಟಿಟ್ಯೂಟ್ ಆಫ್ ಪಾಲಿಟಿಕ್ಸ್ ಆಂಡ್ ಇಕನಾಮಿಕ್ಸ್‌ನ ಸುಸ್ಥಿರ ಅಭಿವೃದ್ಧಿ ಕೇಂದ್ರದ ಪ್ರಾಧ್ಯಾಪಕ ಹಾಗೂ ನಿರ್ದೇಶಕ ಗುರುದಾಸ್ ನುಲ್ಕರ್ ಅಭಿಪ್ರಾಯಪಟ್ಟಿದ್ದಾರೆ. ■

Scanned with OKEN Scanner

# ನೂತನ ಆಧಾರ್ ಆ್ಯಪ್ ಲೋಕಾರ್ಪಣೆ

**ನವದೆಹಲಿ:** ಅತ್ಯಾಧುನಿಕ ಹಾಗೂ ನೂತನ ಆಧಾರ್ ಅಪ್ಲಿಕೇಷನ್ ಬುಧವಾರ ಬಿಡುಗಡೆ ಮಾಡಲಾಗಿದ್ದು, ಈ ಮೂಲಕ ಸಾರ್ವಜನಿಕ ಸುರಕ್ಷತೆ ಮತ್ತು ಖಾಸಗಿತನಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಕೇಂದ್ರ ಸಚಿವ ಜಿತಿನ್ ಪ್ರಸಾದ್ ಈ ತಂತ್ರಾಂಶ ಲೋಕಾರ್ಪಣೆ ಮಾಡಿದ್ದಾರೆ. ಒಂದೇ ಮೊಬೈಲ್‌ಫೋನ್‌ನಲ್ಲಿ ಕುಟುಂಬದ ಐವರು ಸದಸ್ಯರ ಪ್ರೊಫೈಲ್ ನಿರ್ವಹಿಸಬಹುದು. ನೋಂದಾಯಿತ ಮೊಬೈಲ್ ಸಂಖ್ಯೆಯನ್ನು ಆ್ಯಪ್ ಮೂಲಕವೇ ಬದಲಾಯಿಸಬಹುದು.

■ **ಸುರಕ್ಷತೆ, ಪ್ರೈವಸಿಗೆ ಆದ್ಯತೆ**

ಹೊಸ ಆ್ಯಪ್ 'ಡಿಜಿಟಲ್ ಪರ್ಸನಲ್ ಡೇಟಾ ಪ್ರೊಟೆಕ್ಷನ್ ಆ್ಯಕ್ಟ್' ಅನ್ವಯ ಡೇಟಾ ಸುರಕ್ಷತೆಯನ್ನು ಖಾತ್ರಿಪಡಿಸುತ್ತದೆ. ಬಳಕೆದಾರರು ಅಗತ್ಯ ಮಾಹಿತಿ ಮಾತ್ರ ಹಂಚಿಕೊಳ್ಳಬಹುದು. ಉದಾಹರಣೆಗೆ, ವಯಸ್ಸಿನ ದೃಢೀಕರಣಕ್ಕೆ ಇಡೀ ವಿಳಾಸ ತೋರಿಸಬೇಕಿಲ್ಲ. ಹೋಟೆಲ್ ಚೆಕ್‌ಇನ್, ಸಿನಿಮಾ ಟಿಕೆಟ್‌ಗೆ ವಯಸ್ಸಿನ ಪರಿಶೀಲನೆ ಮತ್ತು ಆಸ್ಪತ್ರೆ ಪ್ರವೇಶಕ್ಕೆ ಇದನ್ನು ಸುಲಭವಾಗಿ ಬಳಸಬಹುದು.

Scanned with OKEN Scanner

# ಮೈಸೂರು ಝೂನಲ್ಲಿದ್ದ ಅತಿ ಹಿರಿಯ ಜಿರಾಫೆ ನಿಧನ

ಮೈಸೂರು: ಇಲ್ಲಿನ ಮೃಗಾಲಯದ ಪ್ರಮುಖ ಆಕರ್ಷಣೆಯಾಗಿದ್ದ ಸುಮಾರು 25 ವರ್ಷ ವಯಸ್ಸಿನ ಗಂಡು ಜಿರಾಫೆ ಯುವರಾಜ ವೃದ್ಧಾಪ್ಯದ ಕಾರಣದಿಂದ ಬುಧವಾರ ಬೆಳಗ್ಗೆ 10.30ರ ಸುಮಾರಿನಲ್ಲಿ ಮೃತಪಟ್ಟಿದೆ. 1987ರಲ್ಲಿ ಜರ್ಮನಿಯಿಂದ ತಂದ ಹೆನ್ರಿ ಮತ್ತು ಹನಿ ಜಿರಾಫೆಗಳಿಗೆ 9ನೇ ಮರಿಯಾಗಿ 2001ರ ಡಿ.17ರಂದು ಜನಿಸಿದ ಬಳಿಕ ಪ್ರಾಣಿಪಾಲಕರ ಆರೈಕೆಯಲ್ಲಿ ಬೆಳೆದ ಹಾಗೂ ಮೃಗಾಲಯದಲ್ಲಿ ಹೆಚ್ಚು ವರ್ಷ ಅಂದರೆ 25 ವರ್ಷ ಬದುಕಿದ ಜಿರಾಫೆ ಆಗಿದೆ. ಹನಿ ಮತ್ತು ಹೆನ್ರಿ ಜಿರಾಫೆಗಳಿಗೆ ಜನಿಸಿದ ಕೃಷ್ಣರಾಜ, ಚಾಮರಾಜ, ನರಸಿಂಹರಾಜ ಮತ್ತು ಯುವರಾಜ ಜಿರಾಫೆಗಳಲ್ಲಿ ಈವರೆಗೆ ಹೆಚ್ಚು ಬದುಕಿದ ಜಿರಾಫೆ ಯುವರಾಜ ಆಗಿದ್ದು, ಜಿರಾಫೆಯ ಸಾವು ಮೃಗಾಲಯಕ್ಕೆ ತುಂಬಲಾರದ ನಷ್ಟವಾಗಿದೆ.

Scanned with OKEN Scanner

# ಕಿರಿಯರಿಗೆ ಸಾಮಾಜಿಕ ಮಾಧ್ಯಮ ನಿಷೇಧ

**ಪ್ಯಾರಿಸ್:** 15 ವರ್ಷ ವಯೋಮಿತಿವರೆಗಿನ ಮಕ್ಕಳಿಗೆ ಸಾಮಾಜಿಕ ಮಾಧ್ಯಮಗಳ ಬಳಕೆಯನ್ನು ನಿಷೇಧಿಸುವ ನೂತನ ವಿಧೇಯಕ ಸಂಬಂಧ ಫ್ರಾನ್ಸ್ ಸಂಸತ್ತು ಮಂಗಳವಾರ ತಡರಾತ್ರಿವರೆಗೂ ಚರ್ಚೆ ನಡೆಸಿದ್ದು, ಬುಧವಾರ ವಿಧೇಯಕಕ್ಕೆ ಅಂಗೀಕಾರ ನೀಡಿದೆ. ವಿಧೇಯಕದ ಪರವಾಗಿ 130 ಸಂಸದರು ಮತ ಚಲಾಯಿಸಿದ್ದರೆ, ವಿಧೇಯಕವನ್ನು ವಿರೋಧಿಸಿ 21 ಮಂದಿ ಮತ ಹಾಕಿದ್ದರು. '15 ವರ್ಷದವರೆಗಿನ ಮಕ್ಕಳಿಗೆ ಸಾಮಾಜಿಕ ಮಾಧ್ಯಮ-ಜಾಲತಾಣ ಬಳಕೆ ನಿಷೇಧ' ವಿಧೇಯಕವು ಬಹುಮತದೊಂದಿಗೆ ಸಂಸತ್ತಿನ ಅಂಗೀಕಾರ ಪಡೆದಿದ್ದು, ಸದ್ಯದಲ್ಲೇ ಜಾರಿಗೆ ಬರಲಿದೆ. ಇದರೊಂದಿಗೆ ಹಲವು ದೇಶಗಳು ಕಿರಿಯ ಪ್ರಾಯದವರನ್ನು ಸೋಷಿಯಲ್ ಮೀಡಿಯ ಹಿಡಿತದಿಂದ ದೂರವಿಡುವುದಕ್ಕೆ ಮೊದಲಿಟ್ಟಿವೆ. ಮೊದಲಿಗೆ ಆಸ್ಟ್ರೇಲಿಯ ಸರಕಾರ ಈ ಕ್ರಮ ಕೈಗೊಂಡಿತ್ತು. ಈಗ ಫ್ರಾನ್ಸ್ ಸರದಿಯಾಗಿದೆ.

Scanned with OKEN Scanner

# UPSC ಸಂದರ್ಶನ ದಿನದಲ್ಲಿ ಬದಲಾವಣೆ

**ನವದೆಹಲಿ:** 2025ರ ನಾಗರಿಕ ಸೇವಾ ಮುಖ್ಯ ಪರೀಕ್ಷೆಯ ವ್ಯಕ್ತಿತ್ವ ಪರೀಕ್ಷೆ (ಸಂದರ್ಶನ) ದಿನಾಂಕಗಳಲ್ಲಿ ಒಂದನ್ನು ಆಯೋಗ (ಯುಪಿಎಸ್‌ಸಿ) ಮರು ನಿಗದಿಪಡಿಸಿದ್ದು, ಆ ಪ್ರಕಾರ ಫೆ. 27ರಂದು ಸಂದರ್ಶನ ನಡೆಯಲಿದೆ.

ಜನವರಿ 22ರ ಮಧ್ಯಾಹ್ನ ನಿಗದಿಯಾಗಿದ್ದ ಸಂದರ್ಶನವನ್ನು ಮುಂದೂಡಲಾಗಿತ್ತು. ಇದೀಗ ಈ ಸಂದರ್ಶನವನ್ನು ಫೆಬ್ರವರಿ 27ರಂದು ಬೆಳಗಿನ ಅವಧಿಯಲ್ಲಿ ನಡೆಸಲಾಗುತ್ತಿದೆ. ಈ ಬದಲಾವಣೆಯು ಆ ನಿರ್ದಿಷ್ಟ ಅವಧಿಯಲ್ಲಿ ಸಂದರ್ಶನ ನಿಗದಿಯಾಗಿದ್ದ ಅಭ್ಯರ್ಥಿಗಳ ಮೇಲೆ ಮಾತ್ರ ಪರಿಣಾಮ ಬೀರುತ್ತದೆ ಎಂದು ಆಯೋಗ ಸ್ಪಷ್ಟಪಡಿಸಿದೆ.

## ವರದಿ ಮಾಡುವ ಸಮಯ

ಅಭ್ಯರ್ಥಿಗಳು ಸಂದರ್ಶನದ ದಿನದಂದು ವರದಿ ಮಾಡುವ ಸಮಯದ ಬಗ್ಗೆ ವಿಶೇಷ ಗಮನ ಹರಿಸಬೇಕು. ಬೆಳಗಿನ ಅವಧಿಗೆ ವರದಿ ಮಾಡಿಕೊಳ್ಳುವ ಸಮಯ ಬೆಳಗ್ಗೆ 9, ಮಧ್ಯಾಹ್ನದ ಅವಧಿಗೆ ಅಭ್ಯರ್ಥಿಗಳು ಮಧ್ಯಾಹ್ನ 1 ಗಂಟೆಯೊಳಗೆ ಬರಬೇಕು.

ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಪ್ರಯಾಣ ವೆಚ್ಚವನ್ನು ಮರುಪಾವತಿಸಲಾಗುವುದು ಎಂದು ಆಯೋಗ ತಿಳಿಸಿದೆ. ಈ ಸೌಲಭ್ಯವು ಎರಡನೇ ದರ್ಜೆ ಮತ್ತು ಸ್ಲೀಪರ್ ದರ್ಜೆಯ ರೈಲು ಟಿಕೆಟ್‌ಗಳಿಗೆ ಮಾತ್ರ ಅನ್ವಯಿಸುತ್ತದೆ. ಅಭ್ಯರ್ಥಿಗಳು ಪ್ರಯಾಣ ಭತ್ಯೆ (ಟಿಎ) ಕ್ಲೈಮ್ ಫಾರ್ಮ್‌ನ ಎರಡು ಪ್ರತಿಗಳನ್ನು ಮತ್ತು ಅವರ ರಿಟರ್ನ್ ಟಿಕೆಟ್‌ಗಳ ಹಾರ್ಡ್ ಪ್ರತಿಗಳನ್ನು ಸಲ್ಲಿಸಬೇಕು.

## ಸಂದರ್ಶನದ ವೇಳಾಪಟ್ಟಿ

ಯುಪಿಎಸ್‌ಸಿ ಈ ಹಿಂದೆ ಡಿ. 2ರಂದು ಮೊದಲ ಸುತ್ತಿನ ಸಂದರ್ಶನಗಳ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿತ್ತು. ಈ ಹಂತದಲ್ಲಿ, ಡಿ. 8 ಮತ್ತು 19ರ ನಡುವೆ ಒಟ್ಟು 649 ಅಭ್ಯರ್ಥಿಗಳಿಗೆ ವ್ಯಕ್ತಿತ್ವ ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಲಾಯಿತು. ಉಳಿದ 2,107 ಅಭ್ಯರ್ಥಿಗಳಿಗೆ ಜ. 5 ರಿಂದ ಫೆ. 27ರವರೆಗೆ ವಿವಿಧ ದಿನಾಂಕಗಳಲ್ಲಿ ಸಂದರ್ಶನಗಳನ್ನು ನಡೆಸಲಾಗುತ್ತಿದೆ.

Scanned with OKEN Scanner